

ಇದನ್ನು ವಿಜಾಪುರದಲ್ಲಿ ರಾ॥ ಸಾ॥ ಫ. ಗು. ಹಳಕಟ್ಟಿ ಇವರು ತಮ್ಮ
ಹಿತಚಿಂತಕ ಪ್ರಿಂಟಿಂಗ ಪ್ರೆಸ್ಸಿನಲ್ಲಿ ಮುದ್ರಿಸಿದರು ಮತ್ತು
ಅವರು ವಿಜಾಪುರದಲ್ಲಿ ಉಪಲೀಬುರಜದ ಹತ್ತರ ತಮ್ಮ
೧೬೨೦ (ಅ) ನೇ ಮನೆಯಲ್ಲಿ ಪ್ರಕಟಿಸಿದರು.



ಶಿವಾನುಭವ ಗ್ರಂಥಮಾಲಾ ನಂ॥ ೧೨



ಸಂಗನ ಬಸವೇಶ್ವರ

ವಚನಗಳು.



ಸಂಪಾದಕರು

ರಾ॥ ಸಾ॥ ಫ. ಗು. ಹಳಕಟ್ಟಿ

ಬಿ. ಏ. ಎಲ್ ಎಲ್, ಬಿ. ವಕೀಲ.




ವಿಜಾಪುರ.

೧೯೨೬

ಬೆಲೆ ೧೦ ಆಣೆ.

ಪ್ರಸ್ತಾವನೆ.



ವೀರಶೈವರಲ್ಲಿ ಪ್ರಚಲಿತವಿರುವ ಆಚಾರಗಳಲ್ಲಿ ಗರ್ಭಿತಾರ್ಥವಿದ್ದು, ಅವು ಅತ್ಯಂತ ಭಾವನಾಮಯವಾಗಿರುತ್ತವೆ. ಇವುಗಳ ಮರ್ಮವನ್ನು ಅರಿಯಲು ಸಂಗನಬಸವೇಶ್ವರ ವಚನವು ಬಹಳ ಉಪಯುಕ್ತವಿದೆ. ಈಗಿನ ದಿವಸಗಳು ವಿಚಾರ ಪ್ರಾಧಾನ್ಯವಾದವುಗಳು. ಜನರು ವಿಚಾರಕ್ಕೆ ಯಾವದು ಸಮರ್ಪಕವೋ ಅದನ್ನೇ ಅನುಸರಿಸುವವರಾಗಿರುವರು. ಆದ್ದರಿಂದ ಈ ಪ್ರವೃತ್ತಿಗೆ ಅನುಗುಣವಾಗಿಯೇ ಧಾರ್ಮಿಕ ತತ್ವಗಳ ವಿವೇಚನೆಯು ಅವಶ್ಯವು ವೀರಶೈವ ಆಚರಣೆಗಳ ಬಗ್ಗೆ ಜನರಲ್ಲಿ ನಾನಾವಿಧ ಕುತ್ಸಿತ ವಿಚಾರಗಳು ವಾಡಿಕೆಯಾಗಿರುತ್ತವೆ. ಈ ಸ್ಥಿತಿಯನ್ನು ದೂರ ಮಾಡಬೇಕಾದರೆ ಅವುಗಳ ನಿಜವಾದ ಮರ್ಮವನ್ನು ಕಂಡು ಹಿಡಿದು ಅವುಗಳನ್ನು ಪ್ರಸಾರ ಪಡಿಸುವದೇ ಯೋಗ್ಯ ಮಾರ್ಗವು. ವಚನಕಾರರು ತಮ್ಮ ಉಕ್ತಿಗಳಲ್ಲಿ ವೀರಶೈವಾಚಾರಗಳ ಮರ್ಮಗಳನ್ನು ತಿಳಿಸಲಿಕ್ಕೆ ಮೇಲಿಂದಮೇಲೆ ಪ್ರಯತ್ನಿಸಿದ್ದು ಕಂಡುಬರುತ್ತದೆ. ಆದರೆ ವಚನಗ್ರಂಥಗಳ ಅಭ್ಯಾಸವು ಇತ್ತಿತ್ತ ವೀರಶೈವ ಸಮಾಜದಲ್ಲಿ ನಿಂತು ಹೋಗಿರುವದರಿಂದ ಇವುಗಳು ಜನರಿಗೆ ತಿಳಿಯದೆ ಹೋಗಿವೆ. ವೀರಶೈವರಲ್ಲಿ ಅಷ್ಟಾವರಣಗಳು ಅತ್ಯಂತ ಮಹತ್ವವಾದ ಆಚಾರ ವಿಷಯಕ ವಿಷಯಗಳು. ಇವುಗಳ ಬಗ್ಗೆ ಇತ್ತೀಚಿಕೆ ಅನೇಕ ಪುಸ್ತಕಗಳು ಬರೆಯಲ್ಪಟ್ಟವೆ. ಆದರೆ ಈ ಆವರಣಗಳ ಸ್ಥೂಲ ಕ್ರಮಗಳು ಮಾತ್ರ ಅವುಗಳಲ್ಲಿ ಹೆಚ್ಚಾಗಿ ನಿರ್ದೇಶಿಸಲ್ಪಟ್ಟಿದ್ದು ಕಂಡು ಬರುತ್ತವೆ ಹೊರ್ತು ಅವುಗಳ ಮರ್ಮಗಳನ್ನು ತಿಳಿಸುವ ಬಗ್ಗೆ ಪ್ರಯತ್ನಗಳಾದವು ತೋರಿಬರುವದಿಲ್ಲ. ಅಷ್ಟಾವರಣಗಳ ಅಂತರ್ಯ ವಿಚಾರಗಳು ಈ ಅಚ್ಚು ಹಾಕಿದ ಸಂಗನಬಸವೇಶ್ವರ ವಚನಗಳಲ್ಲಿ ವಿಶೇಷವಾಗಿ ಬಂದಿವೆ. ಇವರಲ್ಲಿ ದೀಕ್ಷಾವಿಧಿಯು ತತ್ವಗಳು, ಎಂಟು ಆವರಣಗಳ ವಿಚಾರಗಳು, ಸಮಾಧಿಯ ವಿಧಗಳು, ನವಲಿಂಗಪೂಜೆಯ ಕ್ರಮವು, ಅಂತ್ಯವಿಧಿ ಮೊದಲಾದ

ಅನೇಕ ಮಹತ್ವದ ವಿಷಯಗಳ ಬಗ್ಗೆ ಮಾರ್ಮಿಕ ವಿಚಾರಗಳು ಬಂದಿವೆ. ಓದುವವರಿಗೆ ಈ ವಿಚಾರಗಳು ಕ್ಲಿಷ್ಟವಾಗಿ ಕಾಣಬಹುದು. ಇದಕ್ಕೆ ಕಾರಣವು ಷಟ್‌ಸ್ಥಲದ ವಿಚಾರಗಳ ಬಗ್ಗೆ ಅವರಲ್ಲಿರುವ ಅಜ್ಞಾನವೇ ಮುಖ್ಯವಿರುತ್ತದೆ. ಆದರೆ ಈ ವಿಚಾರಗಳ ತಿಳುವಳಿಕೆಯಾದೊಡನೆಯೇ ಈ ಗ್ರಂಥದಲ್ಲಿಯ ಅಷ್ಟಾವರಣ ವಿಚಾರಗಳೂ ಅವರಿಗೆ ಸುಲಭವಾಗಹತ್ತುತ್ತವೆ. ಆದ್ದರಿಂದ ವಾಚಕರು ಈ ಗ್ರಂಥವನ್ನು ನಿರಾಕರಿಸದೆ, ಓದಿ ಅಭ್ಯಾಸ ಮಾಡಿ ಅದರಲ್ಲಿಯ ವಚನಗಳ ಮರ್ಮವನ್ನು ತಿಳಿಯಲಿಕ್ಕೆ ಯತ್ನಿಸಬೇಕೆಂದು ನನ್ನ ಸೂಚನೆ ಇದೆ. ಈ ಗ್ರಂಥದ ಒಂದೇ ಪ್ರತಿಯು ನನಗೆ ದೊರೆತದ್ದರಿಂದ ಇದರ ಶುದ್ಧ ಪ್ರತಿಯನ್ನು ಮಾಡಿ ಅಚ್ಚು ಹಾಕುವದು ನನಗೆ ದುಸ್ತರವಾಯಿತು. ಸಂಸ್ಕೃತ ಶ್ಲೋಕಗಳು ಅಶುದ್ಧವಾಗಿರುತ್ತವೆ. ಈ ಎಲ್ಲ ಸಂಗತಿಗಳು ಅಪರಿಹಾರ್ಯವಾದವುಗಳಾಗಿವೆ. ಆದ್ದರಿಂದ ವಾಚಕರು ಈ ಬಗ್ಗೆ ಕ್ಷಮಿಸಬೇಕೆಂದು ನನ್ನ ವಿನಂತಿ ಇದೆ. ಈ ವಚನದ ಗ್ರಂಥಕಾರನು ಯಾರು ಮತ್ತು ಯಾವಾಗ್ಗೆ ಇದ್ದನು ಎಂಬದನ್ನು ನಿಶ್ಚಿತವಾಗಿ ತಿಳಿಯಲು ಸಾಧ್ಯವಿಲ್ಲ. ಆದರೂ ಈ ವಿಷಯಗಳನ್ನು ತಿಳಿಸತಕ್ಕ ಕೆಲವು ವಚನಗಳು ಈ ಗ್ರಂಥದಲ್ಲಿ ಬಂದಿವೆ.ಅವುಗಳನ್ನು ವಾಚಕರು ವಿಚಾರ ಮಾಡಿ ಈ ವಿಷಯಗಳ ನಿರ್ಧಾರ ಮಾಡುವ ಭಾರವನ್ನು ಅವರ ಕಡೆಗೆ ಬಿಡುತ್ತೇನೆ.

ವಿಜಾಪುರ
೧೪-೪-೨೭

ಫ. ಗು. ಹಳಕಟ್ಟಿ

ಸಂಗನಬಸವೇಶ್ವರ ವಚನಗಳು.

೧. ಆಯ್ಯಾ, ವರಕುಮಾರ ದೇಶಿಕೇಂದ್ರನೇ ಕೇಳು, ಚಿದ್ಘನ ಶರಣ ಪ್ರಸಾದ ಲಿಂಗವಾಗಿ ನಿಂದ ನಿಜಾಚರಣೆಯ ನಿಲುಕಡೆಯ ಕಲ್ಯಾಣ ಪಟ್ಟಣದ ಅನುಭವ ಮಂಟಪದ ಶೂನ್ಯ ಸಿಂಹಾಸನದಲ್ಲಿ ಬಸವ ಚನ್ನಬಸವ ಸಿದ್ಧರಾಮ ಅಕ್ಕಮಹಾದೇವಿ ನೀಲಲೋಚನೆ ಮೊದಲಾದ ಸಕಲ ಪ್ರಮಥ ಗಣಂಗಳು ಮಹಾ ಪ್ರಭುಸ್ವಾಮಿಗಳಿಗೆ ಅಭಿವಂದಿಸಿ ಹಸ್ತಾಂಜುಳಿತರಾಗಿ, ಎಲೈ ಮಹಾಪ್ರಭುವೇ, ನಿನ್ನ ಅನಾದಿ ಪಟ್ಟಲಿ ನಿರಾಭಾರಿ ವೀರಶೈವ ಶರಣನ ನಿಜಾಚರಣೆಯ ನಿಲುಕಡೆಯ ದಯವಿಟ್ಟು ಕರುಣಿಸಬೇಕಯ್ಯಾ. ಮಹಾ ಗುರುವೇ, ಎಂದು ಬೆಸಗೊಂಡಲ್ಲಿ, ಆಗ ಮಹಾಪ್ರಭುವು ಲಿಂಗಾಂಗಕ್ಕೆ ಭಿನ್ನವಿಲ್ಲದೆ ಹಸ್ತ ಮಸ್ತಕ ಸಂಯೋಗವ ಮಾಡಿ ವೇಧಾ, ಮಂತ್ರ, ಕ್ರಿಯಾ ದೀಕ್ಷೆಯನಿತ್ತು, ಇಪ್ಪತ್ತೊಂದು ತೆರದ ವಿಚಾರವನರುಹಿ, ನೂರೊಂದು ಸ್ಥಲಪಂಚರಣೆ, ಇನ್ನೂರುಹದಿನಾರು ಸ್ಥಲದ ಸಂಬಂಧವ ತೋರಿ, ಸದಾಚಾರ ಸಂಪತ್ತಿನ ಸ್ವಸ್ವರೂಪು ನಿಲುಕಡೆಯ ತೋರಿಸಿ, ಸಾಕಾರ ನಿರಾಕಾರದ ನಿಜದ ನಿಲುಕಡೆಯನರುಹಿ, ನಿಜಶಿವಯೋಗದ ನಿರ್ವಯಲವ ಕರುಣಿಸಿ, ಸತ್ತು ಚಿತ್ತಾನಂದ ನಿತ್ಯ ಪರಿಪೂರ್ಣ ಅವಿರಳಪರಂಜ್ಯೋತಿ ಸ್ವರೂಪರಾಗೆಂದರುಹಿದರು ನೋಡಾ. ಇಂತು ಚನ್ನಬಸವೇಶ್ವರ ಸ್ವಾಮಿಗಳು ಬೆಸಗೊಂಡು, ತಮ್ಮ ಚಿದಂಗ ಸ್ವರೂಪರಾದ ಚಿದ್ಘನ ಶರಣ ನಿರ್ಲಜ್ಜ ಶಾಂತಯ್ಯನೆಂಬ ಶಿವಶರಣನ ಮುಖದಲ್ಲಿ ಮೋಳಿಗಯ್ಯ ಮೊದಲಾದ ಸಕಲಪ್ರಮಥರ್ಗೆ ಬೋಧಿಸಿದರು ನೋಡಾ. ಅದೇ ಪ್ರಸಾದವನ್ನೇ ನಿರ್ಲಜ್ಜ ಶಾಂತಯ್ಯನೆಂಬ ದೇಶಿಕೇಂದ್ರನು ಚಂಗಣಗಲ ಮಂಟಪದ ರೇವಣ ಸಿದ್ಧೇಶ್ವರಂಗೆ ಬೋಧಿಸಿದರು ನೋಡಾ. ಅದೇ ಪ್ರಸಾದವನ್ನೇ ರೇವಣ ಸಿದ್ಧೇಶ್ವರನೆಂಬ ದೇಶಿಕೇಂದ್ರನು ಜ್ಞಾನೋದಯವಾಗಿ ತಮ್ಮಡಿಗೆರಗಿ ಬಂದ ಶಿಷ್ಯೋತ್ತಮ ಶಿವಶರಣರ್ಗೆ ಸ್ವಾನುಭವ ಸೂತ್ರವ ಬೋಧಿಸುತಿರ್ದರು ನೋಡಾ.

ಆವೇ ಮಹಾ ಪ್ರಸಾದವ ನಿನ್ನ ಶ್ರೋತ್ರಮುಖದಲ್ಲಿ ಮಹಾಮಂತ್ರ ಮೂರ್ತಿ ಯಾಗಿ ನೆಲೆಗೊಂಡಿರ್ಪ ಪ್ರಸಾದ ಲಿಂಗಮುಖದಲ್ಲಿ ಅರುಹಿಸಿ ಕೊಟ್ಟೆವು. ಕೇಳಿ ಮಹಾ ಲಿಂಗಮುಖದಲ್ಲಿ ಸಂತೃಪ್ತನಾಗಿ ಪರಿಣಾಮ ಪ್ರಸಾದದಲ್ಲಿ ಲೋಲುಪ್ತನಾಗಾ ಎನ್ನಾಜ್ಞಾ ಮಂಟಪದಲ್ಲಿ ಮೂರ್ತಿ ಗೊಂಡಿರುವ ಸಂಗನ ಬಸವೇಶ್ವರಾ.

ಆಜ್ಞೋಪ ದೀಕ್ಷೆ—೨. ಅಯ್ಯ ಪ್ರಥಮದಲ್ಲಿ ಇಪ್ಪತ್ತೊಂದು ತೆರದ ದೀಕ್ಷೆಯ ಕರುಣಿಸಿಹೆವು ನೋಡು. ಅದರ ವಿಚಾರವೆಂತೆಂದೊಡೆಃ-ಅಷ್ಟ ತನು ಅಷ್ಟ ಭೋಗಂಗಳಭಿಲಾಷೆಯ ನೀಗಿ, ಸರ್ವಸಂಗ ಪರಿತ್ಯಾಗತ್ವ ದಿಂದ ನಿಜನೈಷ್ಠೆ ಕರಿಗೊಂಡು, ಸಚ್ಚಿದಾನಂದದಿಂದ ನಿಂದ ನಿಜೋತ್ತ ಮಂಗೆ ಶ್ರೀಗುರು ಲಿಂಗಜಂಗಮವು ಕೃಪಾದೃಷ್ಟಿಯಿಂದ ನೋಡಿ ಜನ್ಮ ಜರೆಮರಣಂಗಳಿಗಂಜ ಬೇಡೆಂದು ಅಂಗಮನ-ಪ್ರಾಣಂಗಳ ಮೇಲೆ ಅಭಯ ಹಸ್ತವನಿತ್ತು ಸಂಸಾರ ಪ್ರಪಂಚಕ್ಕೊಳಗಾದ ಪಂಚಮಹಾ ಪಾತ ಕರಂತೆ ನಡೆಯ ಬಾರದೆಂದು ಪಾದಕ್ಕಾಜ್ಞೆಯ ಮಾಡಿದರಯ್ಯ. ಜಡಮ ರ್ತ್ಯರು ನುಡಿದಂತೆ ನುಡಿಯ ಬೇಡವೆಂದು ವಾಣಿಗೆ ಆಜ್ಞೆಯ ಮಾಡಿದಿ ರಯ್ಯ. ಪರದೈವ ಪರದ್ರವ್ಯ ಪರಸ್ತ್ರೀಯರ ಮುಟ್ಟಬೇಡೆಂದು ಪಾಣಿಗೆ ಆಜ್ಞೆಯ ಮಾಡಿದಿರಯ್ಯ. ಪರಸ್ತ್ರೀಯರ ಸಂಗದಿಂದ ಜನಿತ ತಪ್ಪದೆಂದು, ಅದರಿಂದ ಬಿಟ್ಟು ಹುಗಿಗೊಂಡವಿಲ್ಲವೆಂದು ಪಾಣಿಗೆ ಆಜ್ಞೆಯ ಮಾಡಿದಿ ರಯ್ಯ. ಇಂತು ಭಕ್ತಿಮಾರ್ಗವನುಳಿದು ಸತ್ಯನಡೆ, ಸತ್ಯನುಡಿ, ಸತ್ಯಪಾಣಿ ಸತ್ಯ ಮಾಣಿಯಾದರೆ ನಿನ್ನ ಪಾದ ಪೊಸಲಾಗಿ ಮಾಣಿಯ ಅಂತ್ಯವಾದ ಸರ್ವಾಂಗದಲ್ಲಿ ಚತುರ್ವಿಧ ಸಾರಾಯ ಸ್ವರೂಪ ಗುರುಲಿಂಗ ಜಂಗಮ ಪ್ರಸಾದವಾಗಿ, ಕ್ಷೀರದೊಳಗೆ ಘೃತವಡಿಗಿದಂತೆ ಏಕ ಸ್ವರೂಪನಿಂದ ನಿಮಿ ಷಾರ್ಧವಗಲದೆ ನಿಜವಸ್ತು ಬೆರೆದಿರ್ಪುದು ನೋಡಾ, ಎಂದು ಅನುಭವ ಮಂಟಪದಲ್ಲಿ ಶ್ರೀಗುರು ನಿಃಕಳಂಕ ಚನ್ನಬಸವ ರಾಜೇಂದ್ರನು ನಿರ್ಲಜ್ಜ ಶಾಂತಲಿಂಗ ದೇಶಿಕೋತ್ತಮಂಗೆ ಗಣಸಾಕ್ಷಿಯಾಗಿ ಆಜ್ಞೋಪ ದೀಕ್ಷೆಯ ಮಾಡಿದರು ನೋಡಾ ಸಂಗನ ಬಸವೇಶ್ವರಾ.

ಉಪಮಾದೀಕ್ಷೆಃ—೩. ಅಯ್ಯಾ, ನಿನ್ನಷ್ಟತನುವಿನ ಮಧ್ಯದಲ್ಲಿ ಆ ಪರಬ್ರಹ್ಮ ನಿಜವಸ್ತುವೆ ನಿನ್ನ ಪಾವನ ನಿಮಿತ್ತಾರ್ಥವಾಗಿ ಅಷ್ಟಾವರಣ ಸ್ವರೂಪಿನಿಂದ ನೆನೆದಿರ್ಪರು ನೋಡಾ. ಅದರ ವಿಚಾರವೆಂತೆಂದೊಡೆ, ನಿನ್ನ ಸ್ಥೂಲತನುವಿನ ಮಧ್ಯದಲ್ಲಿ ಅರುಹೇ ಗುರುವಾಗಿ ನೆಲಿಸಿರ್ಪುದು

ನೋಡಾ. ನಿನ್ನ ಸೂಕ್ಷ್ಮ ತನುವಿನ ಮಧ್ಯದಲ್ಲಿ ಸುಜ್ಞಾನವೇ ಲಿಂಗವಾಗಿ ನೆಲಿಸಿರ್ಪುದು ನೋಡಾ. ನಿನ್ನ ಕಾರಣ ತನುವಿನ ಮಧ್ಯದಲ್ಲಿ ಸ್ವಾನುಭಾವವೇ ಜಂಗಮವಾಗಿ ನೆಲಿಸಿರ್ಪುದು ನೋಡಾ. ನಿನ್ನ ನಿರ್ಮಲತನುವಿನ ಮಧ್ಯದಲ್ಲಿ ಕರುಣಾಮೃತ ಪಾದೋದಕವಾಗಿ ನೆಲಿಸಿರ್ಪುದು ನೋಡಾ. ನಿನ್ನ ಆನಂದ ತನುವಿನ ಮಧ್ಯದಲ್ಲಿ ಕೃಪಾ ಪ್ರಸಾದವಾಗಿ ನೆಲಿಸಿರ್ಪುದು ನೋಡಾ. ನಿನ್ನ ಚಿದ್ರೂಪ ತನುವಿನ ಮಧ್ಯದಲ್ಲಿ ಚಿತ್ಪ್ರಕಾಶ ಭಸಿತವಾಗಿ ನೆಲಿಸಿರ್ಪುದು ನೋಡಾ. ನಿನ್ನ ಚಿನ್ಮಯತನು ಮಧ್ಯದಲ್ಲಿ ಚಿತ್ಕಾಂತೆ ರುದ್ರಾಕ್ಷಿಯಾಗಿ ನೆಲಿಸಿರ್ಪುದು ನೋಡಾ. ನಿನ್ನ ಚಿತ್ಪ್ರಕಾಶ ತನುವಿನ ಮಧ್ಯದಲ್ಲಿ ಚಿದಾನಂದ ಮಂತ್ರವಾಗಿ ನೆಲಿಸಿರ್ಪುದು ನೋಡಾ. ಇಂತು ನಿನ್ನ ಸರ್ವಾಂಗದಲ್ಲಿ ಅಷ್ಟಾವರಣ ಸ್ವರೂಪಿನಿಂದ ಪರಾತ್ಪರ ನಿಜವಸ್ತು ನೆಲಿಸಿರ್ಪುದು. ನಿನ್ನ ನಿರ್ಮಲ ಚಿತ್ತು ಮಹಾ ಜ್ಞಾನ ನಿಜದೃಷ್ಟಿಯಿಂದ ನಿನ್ನ ನೀ ತಿಳಿದು ನೋಡಾ. ಎಂದು ಗಣಸಾಕ್ಷಿಯಾಗಿ ಶ್ರೀ ಗುರು ನಿಃಕಳಂಕ ಚನ್ನಬಸವರಾಜೇಂದ್ರನು ನಿರ್ಲಜ್ಜ ಶಾಂತದೇಶಿಕೋತ್ತಮಂಗೆ ಉಪಮಾದೀಕ್ಷೆ ಇಂತು ಉಂಟೆಂದು ನಿರೂಪಮಂ ಕೊಡುತಿರ್ದರು ನೋಡಾ ಸಂಗನಬಸವೇಶ್ವರಾ.

ಸ್ವಸ್ತಿಕಾರೋಹಣದೀಕ್ಷೆ:—೪ ಅಯ್ಯಾ, ಶ್ರೀ ಗುರುಲಿಂಗ ಜಂಗಮವೇ ರುದ್ರಲೋಕದ ರುದ್ರ ಗಣಂಗಳಿಗೆ ಶಾಂಭವ ಗಣಂಗಳಿಗೆ ನಾಗ ಗಣಂಗಳಿಗೆ ದೇವಗಣಂಗಳಿಗೆ ಮರ್ತ್ಯಲೋಕದ ಮಹಾ ಗಣಂಗಳಿಗೆ ಅವರವರ ಮನಭಾವ ಕರಣಂಗಳು ಹ್ಯಾಗುಂಟು ಹಾಗೆ ಪ್ರಸನ್ನತೆ ಪ್ರಸಾದವಾಗಿರ್ಪುದು ನೋಡಾ. ಸ್ವರ್ಗ ಮರ್ತ್ಯ ಪಾತಾಳಲೋಕದಲ್ಲಿ ಚರಿಸುವ ಹರಿ ಸುರ ಬ್ರಹ್ಮಾದಿ ದೇವದಾನವ ಮಾನವ ಮನು ಮುನಿಗಳೆಲ್ಲಾ ಅತ್ಯತಿಷ್ಠಾದ್ದಶಾಂಗುಲವೆಂದು ಹೊಗಳುವ ಶೃತಿ ಎಂತೋ ಹಾಗೆ ಅವರವರ ಮನದಂತೆ ಮಹಾದೇವನಾಗಿ ಫಲಪದಗಳ ಕೊಟ್ಟು, ದುಷ್ಟ ನಿಗ್ರಹ ಶಿಷ್ಟ ಪ್ರತಿಪಾಲಕತ್ವದಿಂದ ಸರ್ವಲೋಕಂಗಳಿಗೆ ಸೂತ್ರಧಾರಿಗಳಾಗಿರ್ಪರು ನೋಡಾ. ಇಂತು ಏಕಮೇವ ಪರಬ್ರಹ್ಮವೆಂಬ ಶ್ರುತಿಯು ದಿಟವ ಮಾಡಿ, ಪರಮ ಸ್ವಸ್ಥಿರ ಮಂಟಪದ ಮೇಲೆ ಶಿವಭಕ್ತಿ ಅಂಗಲಿಂಗವೆಂಬ ಉಭಯ ನಾಮವಳಿದು ಶಿಷ್ಯರೂಪಿನಿಂದ ಕುಳ್ಳಿರಿಸಿ ದೀಕ್ಷಾ ಪಾದೋದಕ ಮಿಶ್ರವಾದ ಗೋಮೂತ್ರದಿಂದ ಸಪ್ತಧಾತು ಸಂಬಂಧವಾದ ಸಪ್ತವ್ಯಸನ ಸಂಬಂಧವಾದ ಅಂಗ ಇಂತು ಲಿಂಗದ ಮಲಿನದ ಭಾವಲಿಂಗ

ದ ಶಿಲಾಭಾವವ ಕಳೆದು ಕ್ಷೀರ ಘೃತ ರಂಭಾಯಿಕ್ಷುಮಧು ಯುಕ್ತವಾದ
ರಸ ಪಂಚಾಮೃತವ ಜಂಗಮ ಚರಣೋದಕ ಮಿಶ್ರದಿಂದಭಿಷೇಕವ ಮಾಡಿ
ಸಿ, ಅದರಿಂ ಮೇಲೆ ಗುರುಪಾದೋದಕದಲ್ಲಿ ಶರಣ ಗಣಂಗಳ ಹಸ್ತೋ
ದಕ ಮಂತ್ರೋದಕ ಶುದ್ಧೋದಕ ಗಂಧೋದಕ ಪುಷ್ಪೋದಕವೆಂಬ ಪಂಚ
ಪರಮಾನಂದ ಜಲದಿಂದ ಅಭ್ಯಂಗ ಸ್ನಾನವ ಮಾಡಿಸಿ, ಹಿಂದು ಮುಂದಣ
ಕಾಲಕಾಮರ ಭಯಕ್ಕಂಜ ಬೇಡೆಂದು ತ್ರಿವಿಧಂಗುಳ ಪ್ರಮಾಣವಾದ
ದರ್ಭೆಯಂತು ಮಾಡಿ ತ್ರಿವಿಧ ಮಂತ್ರ ಸ್ಮರಣೆಯಿಂದ ಕಟಿಯಲ್ಲಿ ಧರಿಸಿದ
ರಯ್ಯ. ಅರಿಷ್ವೈರಿಗಳಿಗೆ ಒಳಗಾಗಬೇಡವೆಂದು ಷಡಂಗುಲ ಪ್ರಮಾಣವಾದ
ರಂಭಾ ಪಟ್ಟೆಯ ಕೌಪೀನವ ಮಾಡಿ ಷಡಕ್ಷರ ಮಂತ್ರ ಸ್ಮರಣೆಯಿಂದ
ಹರಿಯಬದ್ವಾರಗಳ ಬಂಧಿಸಿದರಯ್ಯಾ. ಅದರಿಂ ಮೇಲೆ ನಾರಂಗ ಶಾಟಿ
ಯ ಪವಿತ್ರತೆಯಿಂ ಹೊದ್ದಿಸಿ, ಶ್ರೀ ಗುರು ದೇವನ ಚರಣಕಮಲಕ್ಕೆ
ಅಷ್ಟಾಂಗ ಪ್ರಣತನ ಮಾಡಿಸಿ ಶಿವಶರಣ ಭಕ್ತ ಮಹೇಶ್ವರರು ಗಳಿಗೆಲ್ಲ
ಹುಸಿ ನುಡಿಯ ನುಡಿಯದೆ ಬಿಟಿಪಬಿಡದೆ, ಆತ್ಮತ್ರಯದಿಂಗ ನಡೆನುಡಿ ಕೊ
ಟ್ಟು ಕೊಂಬ ವಿಚಾರಂಗಳ ಕ್ರತ ಮಾಡಿದಲ್ಲಿ, ಶ್ರೀ ಗುರುದೇವನು ಶರ
ಣಗಣ ಒಪ್ಪಿಗೆಯಿಂದ ಶಿಷ್ಯನ ಮಸ್ತಕದ ಮೇಲೆ ಅಭಯ ಹಸ್ತವನಿಟ್ಟು,
ಗುರು ಶಿಷ್ಯ ಭಾವವಳಿದು, ಗುರುವಿನ ಸೂತ್ರವ ಶಿಷ್ಯ ಹಿಡಿದು ಶಿಷ್ಯನ
ಸೂತ್ರವ ಗುರುವು ಹಿಡಿದು, ಅಂತರಂಗ ಬಹಿರಂಗದಲ್ಲಿ ಶಿವಯೋಗಾನು
ಸಂಧಾನದಿಂದ ಏಕರೂಪವಾಗಿ ಭೃತ್ಯರಿಂದ ಕಲಶಾರ್ಚನೆಯ ರಚಿಸಿ, ಪ್ರಮ
ಥಗಣಾರಾಧ್ಯ ಭಕ್ತ ಮಾಹೇಶ್ವರರೊಡಗೂಡಿ, ನವರತ್ನ ಖಚಿತವಾಗ ಶೂ
ನ್ಯ ಸಿಂಹಾಸನದ ಮೇಲೆ ಮೂರ್ತಿಗೊಂಡಿರುವಂಥ ಮಂತ್ರ ಮೂರ್ತಿ ನಿರಂ
ಜನ ಜಂಗಮಕ್ಕೆ ವಿಭೂತಿ ವೀಳ್ಯ ಸುವರ್ಣ ಕಾಣಿಕೆ ದಶಾಂಗ ಘನ
ಸಾರ ಪುಷ್ಪದ ಮೇಲೆ ವಸ್ತ್ರಾಭರಣ ಮೊದಲಾಗಿ ಸಮಸ್ತ ಪದಾರ್ಥಂ
ಗಳ ಪ್ರಮಥ ಗಣಾರಾಧ್ಯ ಭಕ್ತ ಮಾಹೇಶ್ವರರ ಮಧ್ಯದಲ್ಲಿಟ್ಟು ಅಷ್ಟಾಂ
ಗಯುಕ್ತರಾಗಿ ಸ್ಪಷ್ಟ ದೃಢ ಚಿತ್ತದಿಂದ ಒಹು ಪರಾಕು ಭವರೋಗ ವೈದ್ಯನೇ
ಎಂದು ತ್ರಿಕರಣದ ಶುದ್ಧತೆಯಿಂದ ಅಭಿವಂದಿಸುವಂಥಾದ್ದೇ ಸ್ವಸ್ತಿಕಾ
ರೋಹಣ ದೀಕ್ಷೆ ಇಂತುಟೆಂದು ಶ್ರೀ ಗುರು ನಿಃಕಳಂಕ ಮೂರ್ತಿ ಚನ್ನ
ಬಸವ ರಾಜೇಂದ್ರನು ಸರ್ವಜ್ಞ ಶಾಂತ ಲಿಂಗ ದೇಶಿಕೋತ್ತಮಂಗೆ ನಿರೂ
ಪಮಂ ಕೊಡುತಿರ್ದರು ನೋಡಾ ಸಂಗನ ಬಸವೇಶ್ವರಾ.

ಕಲಶಾಭಿಷೇಕದೀಕ್ಷೆ:—೫. ಅಯ್ಯಾ ಪರಮಸಚ್ಚಿದಾನಂದ ಮಂತ್ರಿ

ಮೂರ್ತಿಜಂಗಮದೇವನು ಪ್ರಮಥಗಣಾರಾಧ್ಯ ಭಕ್ತಮಾಹೇಶ್ವರರೊಪ್ಪಿಗೆಯಿಂದ ನಿರಂಜನ ಜಂಗಮಕ್ಕೆ ಉಪರಿಸಿಂಹಾಸನವಮಾಡಿ ಮೂರ್ತವ ಮಾಡಿದ ಮೇಲೆ ಷಡಕ್ಷರ ಮಂತ್ರಸ್ವರೂಪವಾದ ಪೂರ್ವ ಪಶ್ಚಿಮ ಉತ್ತರ ದಕ್ಷಿಣ ಮಧ್ಯದಲ್ಲಿ ಮೂರ್ತಗೊಂಡಿರುವ ಈಶಾನ್ಯಕಲಶ ಮೊದಲಾಗಿ ಪಂಚಕಲಶಂಗಳಿಗೆ ಜಂಗಮದೀಕ್ಷಾ ಪಾದೋದಕವ ತುಂಬಿ ಮಂಟಪ ಷಟ್ಸಮ್ಮಾರ್ಜನೆ ಷಡ್ವಿಧವರ್ಣದ ರಂಗವೋಲೆ ನವಧ್ಯಾನ ನವಸೂತ್ರ ವಿಭೂತಿವೀಳ್ಯೆ ಸುವರ್ಣಕಾಣಿಕೆ ಪಂಚಮುದ್ರೆ ಅಷ್ಟವಿಧ ಷೋಡಶೋಪಚಾರಂಗಳಿಂದೊಪ್ಪುವ ಸದ್ಯೋಜಾತವಾಮದೇವ ಅಘೋರ ತತ್ಪುರುಷ ಈಶಾನ್ಯಕಲಶಮೂರ್ತಿಗಳ ಪಶ್ಚಿಮಭಾಗವಲ್ಲಿ ಜಂಗಮ ಪಾದಪೊಂಕುವಂತೆ ಗುರುವು ಮೂರ್ತವಮಾಡಿ ಆ ಕಲಶಂಗಳ ಸೂತ್ರವತನ್ನ ಪಾದಕ್ಕೆ ಹಾಕಿ ರನ್ನಚಿಟ್ಟೆಳಗಿನ ಮುಂದೆ ಮೂರ್ತಗೊಂಡಿರುವ ಕಲಶಂಗಳ ಪೂರ್ವಭಾಗದಲ್ಲಿ ಕರಿಯಕಂಬಳಿಯ ಗದ್ದುಗೆಯ ಮಾಡಿಸಿ, ಹಸೆಯರಚಿಸಿ, ಆ ಗದ್ದುಗೆಯ ಮೇಲೆ ಶಿಷ್ಯೋತ್ತಮನ ಮೂರ್ತವ ಮಾಡಿಸಿ ಆತನಂಗಕ್ಕೆ ಗುರುಸೂತ್ರವ ಹಾಕಿಸಿ, ಶಿಷ್ಯನಂಗದ ಮೇಲೆ ಮೂರ್ತಗೊಂಡಿರುವ ವೀರಶಿವಲಿಂಗವ ಗಣಸಾಕ್ಷಿಯಾಗಿ ಶ್ರೀಗುರುದೇವನು ತನ್ನ ಕರಸ್ಥಲದಲ್ಲಿ ಮೂರ್ತವ ಮಾಡಿಸಿ, ಆ ಲಿಂಗದ ಮಸ್ತಕದ ಮೇಲೆ ನಿರಂಜನ ಜಂಗಮದ ಪಾದವಿಡಿಸಿ, ಆ ಪಂಚಕಲಶಂಗಳಲ್ಲಿ ಶೋಭಿಸುವಂಥ ದೇವಗಂಗಾಜಲಸ್ವರೂಪವಾದ ಗುರುಪಾದೋದಕವನ್ನು ಒಂದು ಪಾತ್ರೆಯಲ್ಲಿ ಆ ಕಲಶಂಗಳೈದರಲ್ಲಿ ತೆಗೆದುಕೊಂಡು ಗುರುವಿನ ದಕ್ಷಿಣ ಭಾಗದಲ್ಲಿ ಮೂರ್ತಗೊಂಡಿರುವ ಪಾದೋದಕ ಕುಂಭದಲ್ಲಿ ಒಂದು ಬಿಂದುವ ತೆಗೆದುಕೊಂಡು, ಆ ಪಾತ್ರೆಯಲ್ಲಿ ಹಾಕಿ ಈ ಆರು ತೆರದ ಅಗ್ರೋದಕಗಳ ಪ್ರಮಥಗಣಾರಾಧ್ಯ ಭಕ್ತಮಾಹೇಶ್ವರರೆಲ್ಲ ಆ ಗುರುವಿನ ಹಸ್ತಕಮಲದಲ್ಲಿರುವಂಥ ಉದಕವನ್ನು ತೆಗೆದುಕೊಂಡು ಆ ಶರಣ ಸತಿ ಲಿಂಗಪತಿಯಾಗೊಪ್ಪುವ ಶಿಷ್ಯೋತ್ತಮನ ಮಸ್ತಕದ ಮೇಲೆ ಮಂತ್ರಧ್ಯಾನದಿಂದ ಸಂಪ್ರೋಕ್ಷಣೆಯ ಮಾಡುವಂಥಾದ್ದೇ ಕಲಶಾಭಿಷೇಕದೀಕ್ಷೆ ಇಂತುಂಟೆಂದು ಶ್ರೀಗುರು ನಿಃಕಳಂಕ ಚನ್ನಬಸವ ರಾಜೇಂದ್ರನು ನಿರ್ಲಜ್ಜಶಾಂತಲಿಂಗ ದೇಶಿಕೋತ್ತಮಂಗ ನಿರೂಪಮಂ ಕೊಡುತಿರ್ದರು ನೋಡಾ ಸಂಗನಬಸವೇಶ್ವರಾ.

ವಿಭೂತಿ ಪಟ್ಟದೀಕ್ಷೆ—೬. ಅಯ್ಯಾ, ಗುರುದೇವನು ಪ್ರಮಥಗಣಾರಾಧ್ಯ ಭಕ್ತಮಾಹೇಶ್ವರರೊಡಗೂಡಿ ಪಂಚಾಭಿಷೇಕ ಮೊದಲಾದ ಪಾ

ದೋದಕ ಕಡೆಯಾಗಿ ಅಷ್ಟವಿಧಾರ್ಚನೆ ಷೋಡಶೋಪಚಾರದಿಂದ ಇಷ್ಟಲಿಂಗದೇವಂಗೆ ಸಪ್ತವಿಧಾರ್ಚನೆಯ ಮಾಡಿ ತಮ್ಮ ಕುಮಾರ ಮೂರ್ತಿ ಎಂದು ಮಹಾಸಂತೋಷದಿಂದ ತೊಡೆಯಮೇಲೆ ಮೂರ್ತವ ಮಾಡಿಸಿಕೊಂಡು, ಆ ಮೇಲೆ ಪ್ರಾಣಲಿಂಗ ಸ್ವರೂಪವಾದ ಉಭಯ ಹಸ್ತವನ್ನು ಸಪ್ತವಿಧಾರ್ಚನೆಯಮಾಡಿ, ದಶಾಂಗುಳ ಮಧ್ಯದಲ್ಲಿ ದ್ವಾದಶಮೂಲಪ್ರಣಮವ ಲಿಖಿಸಿ, ಕುಮಾರತಾವಮಾಡಿ, ಆ ಮೇಲೆ ಭಾವಲಿಂಗಸ್ವರೂಪ ಗೋಳಕಸ್ಥಾನವಾದ ಮಸ್ತಕವನ್ನು ಸಪ್ತವಿಧಾರ್ಚನೆಯಮಾಡಿ, ದ್ವಾದಶ ಮಹಾಪ್ರಣಮವ ಲಿಖಿಸಿ, ಸರ್ವಾಂಗದಲ್ಲಿ ಕ್ರಿಯಾಪಾದೋದಕಸ್ವರೂಪವಾದ ಚಿದ್ಭಸಿತ ಮಹಾಮಂತ್ರ ಸ್ಮರಣೆಯಿಂದ ಸ್ನಾನಧೂಳನ ಧಾರಣವಮಾಡಿ, ಲಲಾಟದಲ್ಲಿ ಅನಾದಿ ಪರಶಿವಲಿಖಿತವ ಲಿಖಿಸಿ, ಸರ್ವಾಚಾರ ಸಂಪನ್ನನಾಗೆಂದು ಆಶೀರ್ವಚನ ನೀಡುವಂಥಾದ್ದೇ ವಿಭೂತಿಪಟ್ಟದೀಕ್ಷೆ ಇಂತು ಎಂದು ಶ್ರೀಗುರು ನಿಃಕಳಂಕ ಚನ್ನಬಸವರಾಜೇಂದ್ರನು ನಿರ್ಲಜ್ಜ ಶಾಂತಲಿಂಗ ದೇಶಿಕೋತ್ತಮಂಗೆ ನಿರೂಪಮಂ ಕೊಡುತಿರ್ದರು ನೋಡಾ ಸಂಗನಬಸವೇಶ್ವರಾ.

ಲಿಂಗಾಯುತದೀಕ್ಷೆಃ—೭. ಅಯ್ಯಾ, ವರವೀರಶೈವ ಷಟ್ಸ್ಥಲಾಚಾರ್ಯ ಘನಲಿಂಗ ಚಕ್ರವರ್ತಿಯಪ್ಪ ಶ್ರೀಗುರುಲಿಂಗದೇವರು ತನ್ನ ತೊಡೆಯ ಮೇಲೆ ಮೂರ್ತಗೊಂಡಿರುವ ಇಷ್ಟಲಿಂಗದೇವಂಗೆ ಪ್ರಾಣಲಿಂಗ ಭಾವಲಿಂಗ ಸ್ವರೂಪವಾದ ಶರಣನ ಚಿದಂಗವೆ ನಿನಗೆ ನಿಜಮೋಕ್ಷಮಂದಿರವೆಂದು ಅರುಹಿದ ಮೇಲೆ, ನಿಮಿಷಾರ್ಧವಗಲಿದರೆ, ನಮ್ಮ ಪ್ರಮಥಗಣಾಚಾರಕ್ಕೆ ಹೊರಗುಮಾಡಿ ಭವಕ್ಕೆ ನೂಂಕೆವೆಂದು ಪ್ರತಿಜ್ಞೆಯನಿತ್ತು ಆ ಶರಣನ ಕರಸ್ಥಲಕ್ಕೆ ಪ್ರಾಣಕಳಾ ಚೈತನ್ಯ ಮೂರ್ತಿಲಿಂಗದೇವನ ಮೂರ್ತವಮಾಡಿಸಿ, ಆ ಲಿಂಗದೇವಂಗೆ ಪ್ರಮಥಗಣಾರಾಧ್ಯ ಭಕ್ತಮಾಹೇಶ್ವರರೆಲ್ಲ ಅಭಯ ಹಸ್ತವನಿತ್ತು ಆ ಮೇಲೆ ಚಿದಂಗಸ್ವರೂಪವಾದ ಶರಣಂಗೆ ಈ ಲಿಂಗದೇವನ ನಿಮಿಷಾರ್ಧವಗಲಿದರೆ ನಿನಗೂ ಅದೇ ಪ್ರತಿಜ್ಞೆ ಬಂದೀತೆಂದು ಆಜ್ಞಾಪನವ ಮಾಡಿ, ಹೃದಯಕಮಲಮಧ್ಯದಲ್ಲಾಡುವ ಸಹಸ್ರ ಹೆಡೆಯ ಕುಂಡಲಿಸರ್ಪಂಗೆ ಮುಸುಕಿರುವ ಅಜ್ಞಾನಮಾಯಾ ಮರವೆಯನ್ನು ಅನಾಹತದ್ವಾರದಿಂದ ಅನಾದಿ ಮೂಲಮಂತ್ರವನುಸುರಿ ಕುಂಡಲಿಸರ್ಪನ ಹೆಡೆಯೆತ್ತಿಸಿ ಚಿದಗ್ನಿಯ ಪುಟವ ಮಾಡುವಂಥಾದ್ದೇ ಲಿಂಗಾಯತದೀಕ್ಷೆ. ಇಂತು ಎಂದು ಶ್ರೀಗುರು ನಿಃಕಳಂಕ ಚನ್ನಬಸವರಾಜೇಂದ್ರನು

ನಿರ್ಲಜ್ಜ ಶಾಂತಲಿಂಗ ದೇಶಿಕೋತ್ತಮಂಗೆ ನಿರೂಪಮಂ ಕೊಡುತಿರ್ದರು ನೋಡಾ ಸಂಗನಬಸವೇಶ್ವರಾ

ಲಿಂಗಸ್ವಾಯತ ದೀಕ್ಷೆ:—೮. ಅಯ್ಯಾ, ಘನಮಹಾ ಇಷ್ಟಲಿಂಗವೇ ನಿನ್ನನಾದ ಬಿಂದು ಕಲೆಗಳಿಗೆ ಚೈತನ್ಯ ಸ್ವರೂಪು ನೋಡಾ. ಈ ಲಿಂಗದ ವೃತ್ತದಲ್ಲಿ ಸಕಲ ಲೋಕಂಗಳು ಸಕಲಮನುಗಳಡಗಿರ್ಪವು ನೋಡಾ. ಈ ಲಿಂಗವೇ ನಿನ್ನ ಹರಣಕಿರಣ ಚೈತನ್ಯ ಸ್ವರೂಪು ನೋಡಾ. ಈ ಲಿಂಗವೇ ನಿನ್ನ ಸಂಜೀವನ ಕಾಮಧೇನು ಕಲ್ಪ ವೃಕ್ಷ ನೋಡಾ. ಇಂತು ನಿನ್ನ ಕರಸ್ಥಲದಲ್ಲಿ ರಾಜಿಸುವ ಪರ ಶಿವಲಿಂಗದೇವಂಗೆ ಜಂಗಮ ಪಾದೋದಕ ಪ್ರಸಾದವೇ ಪರಮ ಚಿದೈಶ್ವರ್ಯ ನೋಡಾ. ಇಂತು ಜಂಗಮಕ್ಕೆ ಭೃತ್ಯಾಚಾರ ಮೂರ್ತಿ ಲಿಂಗದೇವನ ಒಕ್ಕು ಮಿಕ್ಕ ಕರುಣಜಲ ಪ್ರಸಾದವೇ ನಿನಗರ್ಪಿತವಯ್ಯ. ನಿನ್ನ ಪರಿಣಾಮ ಸಂತೋಷವೇ ಲಿಂಗಾರ್ಪಿತವಯ್ಯ. ಇಂತಪ್ಪ ಲಿಂಗದೇವನ ನಿನ್ನ ಷಟ್ಸ್ಥಾನಂಗಳಲ್ಲಿ ಧರಿಸಿ, ಲಿಂಗವೇ ನಿನಗೆ ಪ್ರಾಣವಾಗಿ ನೀನು ಲಿಂಗಕ್ಕೆ ಪ್ರಾಣವಾಗಿ, ಸತ್ಯದಿಂದ ಬಂದ ಪದಾರ್ಥವ ದಾಸೋಹಂ ಭಾವದಿಂದ ಸಮುದ್ರದುದಕವ ಸಮುದ್ರಕ್ಕೆ ಅರ್ಪಿಸಿದಂತೆ ಧಾನ್ಯದ ರಾಶಿಯ ಒಳಗಣ ಧಾನ್ಯವ ತಂದು ಪಾಕವ ಮಾಡಿ ಮತ್ತಾ ರಾಶಿಗೆ ಅರ್ಪಿಸಿದಂತೆ ಆ ಲಿಂಗ ಜಂಗಮ ಪಾದೋದಕ ಪ್ರಸಾದವ ಮತ್ತಾ ಲಿಂಗಜಂಗಮಕ್ಕೆ ಸಮರ್ಪಿಸಿ ಆ ಲಿಂಗ ಜಂಗಮದ ಪರಿಣಾಮ ಪ್ರಸಾದದಲ್ಲಿ ನಿತ್ಯ ತೃಪ್ತನಾಗಿರುವಂಥಾದ್ದೇ ಲಿಂಗಸ್ವಾಯತದೀಕ್ಷೆ, ಇಂತುಟೆಂದು ಶ್ರೀ ಗುರು ನಿಃಕಳಂಕ ಚನ್ನಬಸವ ರಾಜೇಂದ್ರನು ನಿರ್ಲಜ್ಜೆ ಶಾಂತಲಿಂಗದೇಶಿಕೋತ್ತಮಂಗೆ ನಿರೂಪಮಂ ಕೊಡುತಿರ್ದರು ನೋಡಾ ಸಂಗನಬಸವೇಶ್ವರಾ.

ಸಮಯದೀಕ್ಷೆ:—೯. ಅಯ್ಯಾ, ಇಂತು ಅನಾದಿ ಪರಶಿವಲಿಂಗವೇ ಪಾವನಾರ್ಥವಾಗಿ ದೀಕ್ಷಾಗುರು ಲೀಲೆಯ ಧರಿಸಿ ಜ್ಞಾನೋದಯವಾಗಿ, ಅಡಿಗೆರಗಿ ಬಂದ ಶಿಷ್ಯೋತ್ತಮಂಗೆ ದಯಾನಂದ ಕರುಣಹುಟ್ಟಿ, ಆತನ ಸ್ಥೂಲತನುವಿಗೆ ಇಷ್ಟಲಿಂಗವ ಸಂಬಂಧವಮಾಡಿ, ಎಲೆ ಶಿಷ್ಯೋತ್ತಮನೆ, ನಿನ್ನ ಸರ್ವಾಂಗವೆಲ್ಲಾ ಶುದ್ಧಪ್ರಸಾದವಾದ ಚಿದ್ಘನಮಯವೆಂದು ಅರುಹುವಂಥಾದ್ದೇ ಕ್ರಿಯಾದೀಕ್ಷೆ ನೋಡಾ. ಇಂತು ಕ್ರಿಯಾದೀಕ್ಷೆಯಾದಮೇಲೆ ಆ ದೀಕ್ಷಾಗುರುವೆ ಶಿಕ್ಷಾಗುರು ಲೀಲೆಯಧರಿಸಿ ಆ ಕ್ರಿಯಾದೀಕ್ಷೆಯಾದ ಶಿಷ್ಯೋತ್ತಮನಿಗೆ ಉಪದೇಶವ ಕರುಣಿಸುವ ಭೇದವೆಂತೆಂದೊಡೆ:—

ಏನಯ್ಯ ಬಳಸವ ಮೊದಲಾದ ಪ್ರಮಥಗಣಾರಾಧ್ಯರ ಸನ್ಮಾರ್ಗಾಚಾರಕ್ಕೆ ದೃಢಚಿತ್ತದಿಂದ ನಿಂದು ನಿರಾಭಾರಿ ವೀರಶೈವ ಷಟ್‌ಸ್ಥಲಮಾರ್ಗದಲ್ಲಿ ಆಚರಿಸುವ ಶರಣಗಣಂಗಳಲ್ಲಿ ಪಂಚಸೂತಕಂಗಳ ಕಲ್ಪಿಸದೆ, ಭೃತ್ಯಾಚಾರ ಮುಂದುಗೊಂಡು ಅವರ ಒಕ್ಕುಮಿಕ್ಕಿದ ಹಾರೈಸಿ, ನಿಜಭಕ್ತಿಯಲ್ಲಿ ನಿಂದು ಸನ್ಮಾರ್ಗಾಚಾರಕ್ಕೆ ಬಾರದಂಥ ಗುರುಚರ ಭಕ್ತಗಣ ಬಂಧುಬಳಗ ತಂದೆತಾಯಿ ಪುತ್ರಮಿತ್ರ ಕಳತ್ರ ಶಿಷ್ಯ ಮೊದಲಾಗಿ ತೃಣಕ್ಕೆ ಸಮಮಾಡಿ ತ್ಯಜಿಸಿ ಮನದ ಮಧ್ಯದಲ್ಲಿ ಹುಟ್ಟಿದ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಂಗಳ ಬಲೆಗೆ ಸಿಲ್ಕದೆ, ತ್ರಿಕರಣ ಪವಿತ್ರತೆಯಿಂದ ಅಷ್ಟಾವರಣವ ಸ್ತೋತ್ರವ ಮಾಡುವಂಥಾದ್ದೇ ಸಮಯ ದೀಕ್ಷೆ ಇಂತುಟೆಂದು ಶ್ರೀಗುರು ನಿಃಕಳಂಕ ಚನ್ನಬಸವರಾಜೇಂದ್ರನು ನಿರ್ಲಜ್ಜ ಶಾಂತಲಿಂಗ ದೇಶಿಕೋತ್ತಮಂಗೆ ನಿರೂಪಮಂ ಕೊಡುತಿರ್ದರು ನೋಡಾ ಸಂಗನ ಬಸವೇಶ್ವರಾ.

ನಿಃಸಂಸಾರದೀಕ್ಷೆಃ—೧೦. ಅಯ್ಯ ನಿನ್ನ ಸ್ವಾತ್ಮಜ್ಞಾನದಿಂದ ಶೃತಿ ಗುರುಸ್ವಾನು ಭಾವ ಪಿಡಿದು, ನಿನ್ನ ತನುಮನ ಕರಣ ಇಂದ್ರಿಯಂಗಳ ಪರಿಪಕ್ವ ಮಾಡಿ, ಆ ತನು ಮನ ಇಂದ್ರಿಯಂಗಳನಾಶ್ರಯಿಸಿದ ಅರ್ಥ ಪ್ರಾಣಾಭಿಮಾನಂಗಳ ಶ್ರೀ ಗುರುಲಿಂಗ ಜಂಗಮ ಭಕ್ತ ಮಾಹೇಶ್ವರ ಶರಣ ಗಣಂಗಳಿಗರ್ಪಿತವ ಮಾಡಿ ನಿರ್ವಂಚಕ ಬುದ್ಧಿ ಮುಂದುಗೊಂಡು ಅಷ್ಟ ವಿಧಾರ್ಚನೆ ಷೋಡಶೋಪಚಾರಂಗಳಿಂದ ಇಷ್ಟ ಲಿಂಗ ತೃಪ್ತಿಯ ಮಾಡಿ, ಮಂತ್ರಧ್ಯಾನ ಜಪ ಸ್ತೋತ್ರಂಗಳಿಂದ ಪ್ರಾಣಲಿಂಗ ತೃಪ್ತಿಯ ಮಾಡಿ, ಮನೋಲಯ ನಿರಂಜನ ಕ್ರಿಯಂಗಳಿಂದ ಭಾವಲಿಂಗ ತೃಪ್ತಿಯ ಮಾಡಿ, ಗುರುಲಿಂಗ ಜಂಗಮ ಪಾದೋದಕ ಪ್ರಸಾದದಿಂದ ಮತ್ತಾ ಗುರುಲಿಂಗ ಜಂಗಮ ಭಕ್ತ ಮಹೇಶ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯ ಮೊದಲಾದ ಮಹಾ ಪ್ರಮಥ ಗಣಂಗಳ ತೃಪ್ತಿಯ ಮಾಡಿ ತನಗೊಂದಾಶ್ರಯಂಗಳಿಲ್ಲದೆ ಚಿದ್ಘನ ಮಹಾಲಿಂಗದಲ್ಲಿ ಅವಿರಳಾನಂದದಿಂದ ಕೂಟಸ್ಥನಾಗಿರುವಂಥಾದ್ದೇ ನಿಃಸಂಸಾರ ದೀಕ್ಷೆ ಇಂತುಟೆಂದು ಶ್ರೀಗುರು ನಿಃಕಳಂಕ ಚನ್ನಬಸವ ರಾಜೇಂದ್ರನು ನಿರ್ಲಜ್ಜ ಶಾಂತ ಲಿಂಗದೇಶಿಕೋತ್ತಮಂಗೆ ನಿರೂಪಮಂ ಕೊಡುತಿರ್ದರು ನೋಡಾ. ಸಂಗನಬಸವೇಶ್ವರಾ.

ನಿರ್ವಾಣದೀಕ್ಷೆ—೧೧. ಅಯ್ಯಾ, ಮರ್ತ್ಯದ ಮಧ್ಯದಲ್ಲಿ ಶ್ರೀ ಗುರು ಕರಜಾತನಾದಮೇಲೆ, ಹೊನ್ನು ಹೆಣ್ಣು ಮಣ್ಣು ಅನ್ನ ನೀರು ವಸ್ತ್ರ

ಭರಣ ವಾಹನ ಪುತ್ರ ಮಿತ್ರ ದಾರಿದ್ರ್ಯ ಚಿಂತೆ ಶತೃತ್ವಂಗಳ ಸಮಾ ನಂಗಂಡು, ಲಿಂಗಾಣತೆಯಿಂದ ಉಪವಾಸ ತೃಪ್ತಿಗಳು ಬಂದು ತಟ್ಟಿದ ಲ್ಲಿ, ಸಂತೃಪ್ತನಾಗಿ, ಆಧಿ ವ್ಯಾಧಿಗಳು ಬಂದು ತಟ್ಟಿದಲ್ಲಿ ಪಾದೋದಕ ಪ್ರಸಾದದಲ್ಲಿ ಕೂಡಿಸಿ ಸಮಭಾಜನವ ಮಾಡಿ, ಲಿಂಗ ಭೋಗೋಪ ಭೋಗಿಯಾಗಿ, ಅವಿರಳಾನಂದದಿಂದ ಹಿಂದಣ ಪಾಪ ಮುಂದಣ ಪುಣ್ಯ ಗಳಿಗೆ ಹೊರಗಾಗಿ, ಅವನು ತನ್ನೊಳಗು ಮಾಡಿಕೊಂಡು ಮನಬಯಕೆಯು ನೀಗಿ, ಕಾಲಹರ ಕರ್ಮಹರ ದುರಿತಹರ ಪಾಪಹರ ಲೀಲೆಯಿಂದ ಮರ್ತ್ಯ ದಲ್ಲಿದ್ದು ಇಲ್ಲದಂತೆ ಸಚ್ಚಿದಾನಂದನಾಗಿ, ಆಚರಿಸುವಂಥ ನಿಜ ನೈಷ್ಠೆಯೇ ನಿರ್ವಾಣದೀಕ್ಷೆ, ಇಂತುಟೆಂದು ಶ್ರೀ ಗುರು ನಿಃಕಳಂಕ ಪರಮಾನಂದ ಮೂರ್ತಿ ಚಿಕ್ಕ ದಂಡನಾಥ ಚನ್ನಬಸವ ರಾಜೇಂದ್ರನು ನಿರ್ಲಜ್ಜ ಶಾಂತ ಲಿಂಗದೇಶಿಕೋತ್ತಮಂಗೆ ಸ್ವರೂಪಮಂ ಕೊಡುತಿರ್ದರು ನೋಡಾ. ಸಂಗ ನಬಸವೇಶ್ವರಾ.

ತತ್ವದೀಕ್ಷೆ:—೧೨. ಅಯ್ಯಾ ಒಂದು, ಅನಾದಿ ಮೂಲ ಪ್ರಣವವೇ ಸಾಕಾರ ಲೀಲೆಯು ಧರಿಸಿ ಚಿದಂಗ ಚಿದ್ಘನ ಲಿಂಗವಾಗಿ, ಒಂದಂಗ ಲಿಂ ಗವೇ ತ್ರಿವಿಧಾಂಗ ತಿವಿಧ ಲಿಂಗವಾಗಿ, ಆ ತ್ರಿವಿಧಾಂಗ ಲಿಂಗಾಂಗವೆ ಷಡ್ವಿಧ ಲಿಂಗವಾಗಿ, ಆ ಷಡ್ವಿಧ ಲಿಂಗಾಂಗವೆ ಮೂವ್ವತ್ತಾರು ಲಿಂಗಾಂ ಗವಾಗಿ ಆ ಮೂವತ್ತಾರು ಲಿಂಗಾಂಗಗಳನೆ ಶ್ರದ್ಧಾದಿ ಮೂವತ್ತೆರಡು ಭಕ್ತಿಗಳಲ್ಲಿ, ಕೂಟವ ಮಾಡಿ, ಇಂತು ಲಿಂಗಾಂಗ ಭಕ್ತಿಗಳನೆ ಸತ್ಕ್ರಿ ಯಾ ಸಮ್ಯಜ್ಞಾನ ಸತ್ಕಾಯಕ ಸತ್ಪಾತ್ರ ಭಿಕ್ಷದಲ್ಲಿ ಸಮರಸವಮಾಡಿ, ಆಮಹಾ ಜ್ಞಾನವ ಸಾಧಿಸಿ ಆಮಹಾ ಜ್ಞಾನವ ಬಲದಿಂದ ಪೃಥ್ವಿ ತತ್ವ ಸಂಬಂಧವಾದ ಕರ್ಮೇಂದ್ರಿಯಂಗಳು, ಅಪ್ಪು ತತ್ವ ಸಂಬಂಧವಾದ ಜ್ಞಾನೇಂದ್ರಿಯಂಗಳು, ಅಗ್ನಿ ತತ್ವ ಸಂಬಂಧವಾದ ವಿಷಯೇಂದ್ರಿಯಂಗಳು, ವಾಯು ತತ್ವ ಸಂಬಂಧವಾದ ಪ್ರಾಣವಾಯುಗಳು, ಆಕಾಶತತ್ವ ಸಂಬಂ ಧವಾದ ಕರಣಂಗಳು, ಭಾನುತತ್ವ ಸಂಬಂಧವಾದ ಉದರವೆಂಬ ಭೂತ ಗಳು, ಶಿವತತ್ವ ಸಂಬಂಧವಾದ ಶ್ವೇತವರ್ಣ ಮೊದಲಾದ ವರ್ಣಂಗಳು, ಆತ್ಮ ತತ್ವ ಸಂಬಂಧವಾದ ಸಮಸ್ತ ನಾದಂಗಳು ಇಂತು ಸಮಸ್ತ ತತ್ವಂ ಗಳು ಕೂಡಲಾಗಿ ನಾಲ್ವತ್ತು ತತ್ವವೆನಿಸುವವು. ಈ ತತ್ವಂಗಳ ಶಿವತತ್ವ ಅನಾದಿ ಶಿವತತ್ವ ಅನಾದಿ ನಿಃಕಲ ಪರಶಿವ ತತ್ವ ಅನಾದಿ ನಿಃಕಲ ಪರಾ ತ್ಪರ ಶಿವತತ್ವವೆಂಬ ಚತುರ್ವಿಧ ತತ್ವ ಸ್ವರೂಪ ಗುರುಲಿಂಗ ಜಂಗಮವ

ಕೂಡಿಸಿ, ಆ ಮಹಾಜ್ಞಾನದಿಂದ ನೋಡಿದಲ್ಲಿ ೪೪ ತತ್ವ ಸ್ವರೂಪಿನಿಂದ ಒಂದು ಚಿದಂಗವೆನಿಸುವದಯ್ಯ. ಆ ಚಿದಂಗ ಷಟ್‌ಚಕ್ರಂಗಳಲ್ಲಿ ಶ್ರೀ ಗುರುಲಿಂಗ ಜಂಗಮ ಕೃಪೆಯಿಂದ ಮೂರ್ತಿಗೊಂಡಿರುವ ೫೬ ಪ್ರಣವಂಗಳೆ ಸಾಕಾರಲೀಲೆಯ ಧರಿಸಿ ನಾನಾಕೃತಿ ಸಂಬಂಧವಾದ ಅನಾದಿ ಮೂಲ ಪ್ರಣಮವ ಕೂಡಿ ಏಕ ಸ್ವರೂಪಿನಿಂದ ೫೭ ಲಿಂಗ ಸ್ವರೂಪ ಪ್ರಣಮವ. ನೊಳಕೊಂಡು, ಒಂದು ಚಿದ್ಘನ ಲಿಂಗವೆನಿಸುವದಯ್ಯ. ಇಂತು ಅಂಗ ಲಿಂಗವೆಂಬ ನೂರೊಂದು ಸ್ಥಲ ಕುಲಂಗಳ ವಿಚಾರಿಸಿ ಶರಣ ರೂಪಿಂದ ತನ್ನಾದಿ ಮದ್ಯಾವ ಸಾನವ ತಿಳಿದು, ಕರ್ತೃ ಭೃತ್ಯತ್ವದ ವಿಚಾರವ ನರಿದು ದ್ವಾದಶಾಚಾರದ ಮರ್ಮವನರಿದು ಕರ್ತೃಭೃತ್ಯತ್ವ ಆಚಾರ ಸದ್ಭಕ್ತಿಯೆಂಬ ನಿಜ ಸಮಾಧಿಯಲ್ಲಿ ನಿರವಯಲ ಕೂಡುವಂಥಾದ್ದು ತತ್ವದೀಕ್ಷೆ, ಇಂತು ಟೆಂದು ಶ್ರೀ ಗುರು ನಿಃಕಳಂಕ ಚನ್ನಬಸವ ರಾಜೇಂದ್ರನು ನಿರ್ಲಜ್ಜಶಾಂತ ಲಿಂಗದೇಶಿಕೊತ್ತಮಂಗೆ ನಿರೂಪಮಂ ಕೊಡುತಿರ್ದರು ನೋಡಾ. ಸಂನಗಬಸವೇಶ್ವರಾ.

ಅಧ್ಯಾತ್ಮ ದೀಕ್ಷೆ—೧೩ ಅಯ್ಯಾ, ನಿನ್ನ ಷಟ್ಚಕ್ರಂಗಳಲ್ಲಿ ಅನಾದಿ ನಿಃಕಳಂಕ ಚಿದ್ಘನ ಇಷ್ಟ ಮಹಾಲಿಂಗವೇ ಷಡ್ವಿಧ ಲಿಂಗವಾಗಿ ನೆಲಿಸಿರ್ಪರು ನೋಡಾ. ಅದೆಂತೆಂದೊಡೆ, ಆಧಾರ ಚಕ್ರ ನಾಲ್ಕೆಸಳ ಮಧ್ಯದಲ್ಲಿ ನಕಾರ ಮಂತ್ರಮೂರ್ತಿ ಆಚಾರ ಲಿಂಗವಾಗಿ ನೆಲಿಸಿರ್ಪರು ನೋಡಾ, ಸ್ವಾಧಿಷ್ಟಾನ ಚಕ್ರ ಆರೆಸಳ ಮಧ್ಯದಲ್ಲಿ ಮಕಾರ ಮಂತ್ರಮೂರ್ತಿ ಗುರು ಲಿಂಗವಾಗಿ ನೆಲಿಸಿರ್ಪರು ನೋಡಾ. ಮಣಿಪೂರಕ ಚಕ್ರದ ಹತ್ತೆಸಳ ಮಧ್ಯದಲ್ಲಿ ಶಿಕಾರ ಮಂತ್ರ ಮೂರ್ತಿ ಶಿವಲಿಂಗವಾಗಿ ನೆಲೆಸಿರ್ಪರು ನೋಡಾ. ಅನಾಹತ ಚಕ್ರದಲ್ಲಿ ಹನ್ನೆರಡೆಸಳಿನ ಮಧ್ಯದಲ್ಲಿ ವಕಾರ ಮಂತ್ರ ಮೂರ್ತಿ ಚರಲಿಂಗವಾಗಿ ನೆಲಿಸಿರ್ಪರು ನೋಡಾ. ವಿಶುದ್ಧಿಚಕ್ರ ಹದಿನಾರೆಸಳ ಮಧ್ಯದಲ್ಲಿ ಯಕಾರ ಮಂತ್ರಮೂರ್ತಿ ಪ್ರಸಾದ ಲಿಂಗವಾಗಿ ನೆಲಿಸಿರ್ಪರು ನೋಡಾ. ಆಜ್ಞಾಚಕ್ರದ ಎರಡೆಸಳ ಮಧ್ಯದಲ್ಲಿ ಓಂಕಾರ ಮಂತ್ರ ಮೂರ್ತಿ ಮಹಾಲಿಂಗವಾಗಿ ನೆಲಿಸಿರ್ಪರು ನೋಡಾ. ಇಂತು ನಿನ್ನ ಷಟ್ಚಕ್ರ ಮಧ್ಯಂಗಳಲ್ಲಿ ನೆಲಿಸಿ ನಿನ್ನ ಷಡ್ವಿಧ ಯೋಗಂಗಳ ಕೈಕೊಂಡು ಆ ಪರಿಣಾಮವ ನಿನಗೆ ಸಂತೃಪ್ತಿಯಮಾಡಿ ಶರಣಸತಿ ಲಿಂಗಪತಿ ಭಾವದಿಂದ ಮೇಲುಗಿರಿ ಮಂಟಪದ ನವರತ್ನ ಖಚಿತ ಸಹಸ್ರದಳ ಪದ್ಮಯುಕ್ತವಾದ ಪರ್ಯಂಕದ ಮೇಲೆ ಲಿಂಗಾನುಭಾವರತಿ ಸುಖಾನಂದದಿಂ ಶೋಭಿಸು

ವಂಥಾದ್ದೇ ಅಧ್ಯಾತ್ಮ ದೀಕ್ಷೆ, ಇಂತುಟೆಂದು ಶ್ರೀಗುರು ನಿಃಕಳಂಕ ಚನ್ನ ಬಸವ ರಾಜೇಂದ್ರನು ನಿರ್ಲಜ್ಜ ಶಾಂತಲಿಂಗ ದೇಶಿಕೋತ್ತಮಂಗೆ ನಿರೂಪಮಂ ಕೊಡುತಿರ್ದರು ನೋಡಾ ಸಂಗನ ಬಸವೇಶ್ವರಾ.

ಅನುಗ್ರಹ ದೀಕ್ಷೆ—೧೪ ಅಯ್ಯಾ ನಿನ್ನ ಚಿದಂಗದ ಷಟ್ಸ್ಥಾನಂಗಳಲ್ಲಿ ೨೫ ತತ್ವಗಳು ಅಡಗಿರ್ಪವಯ್ಯ. ಚಿದ್ಘನ ಲಿಂಗದ ಷಟ್ಸ್ಥಾನಂಗಳಲ್ಲಿ ೧೮ ತತ್ವಂಗಳಡಗಿರ್ಪವಯ್ಯ. ಆ ಚಿದಂಗ ಚಿದ್ಘನಲಿಂಗದ ಮಧ್ಯದಲ್ಲಿ ಬೆಳಗುವ ಅಖಂಡ ಜ್ಯೋತಿ ಪ್ರಣವದ ಷಟ್ಸ್ಥಾನದಲ್ಲಿ ಅಷ್ಟವಿಧ ತತ್ವಂಗಳಡಗಿರ್ಪವಯ್ಯ. ಆ ತತ್ವಂಗಳ ವಿಭಾಗವೆಂತೆಂದೊಡೆ, ಪೃಥ್ವಿ ತತ್ವ ೨೫, ಅಪ್ಪುತತ್ವ ೨೦, ಅಗ್ನಿತತ್ವ ೧೫, ವಾಯುತತ್ವ ೧೦, ಆಕಾಶ ತತ್ವ ೫, ಇಂತು ೭೫ ತತ್ವಂಗಳು ಆತ್ಮತತ್ವ ಒಂದರಲ್ಲಿ ಅಡಗಿ ಇಂಥ ಅನಂತಾನಂತಾತ್ಮರು ಔದುಂಬರ ವೃಕ್ಷಕ್ಕೆ ಫಲತೊಂತಿದೋಪಾದಿಯಲ್ಲಿ ಆ ಚಿದಂಗಕ್ಕೆ ಅನಂತಾತ್ಮ ತತ್ವಂಗಳು ತೊಂತಿ ಕೊಂಡಿರ್ಪವು ನೋಡಾ. ಅಂಥ ಚಿದಂಗ ೧೮ ಪ್ರಣವ ರೂಪಿನಿಂದ ಚಿದ್ಘನ ಲಿಂಗವನಾಶ್ರೈಸಿರ್ಪುದು ನೋಡಾ. ಆ ಚಿದ್ಘನ ಲಿಂಗವು ಅಷ್ಟವಿಧ ಸಕೀಲಂಗಳಿಂದ ಅಖಂಡ ಮಹಾ ಜ್ಯೋತಿ ಪ್ರಣವವನಾಶ್ರೈಸಿರ್ಪುದು ನೋಡಾ. ಇಂತು ನೂರೊಂದು ಸಕೀಲಂಗಳ ತತ್ವದ ರೂಪಿನಿಂದ ತಿಳಿದು, ಅಂಗಲಿಂಗ ಸಂಗವಲ್ಲಿ ಅಡಗಿರುವ ನೂರೊಂದು ಸಕೀಲಂಗಳ ನೂರೊಂದು ಸ್ಥಲದಲ್ಲಿ ನೆಲೆಗೊಳಿಸಿ, ಪರತತ್ವ ಲಿಂಗ ಲೀಲೆಯಿಂದ ನಿಂದ ನಿಲುಕಡೆಯೆ ಅನುಗ್ರಹ ದೀಕ್ಷೆಯಿಂತುಟೆಂದು ಶ್ರೀಗುರು ನಿಃಕಳಂಕ ಚನ್ನಬಸವ ರಾಜೇಂದ್ರನು ನಿರ್ಲಜ್ಜ ಶಾಂತ ಲಿಂಗ ದೇಶಿಕೋತ್ತಮಂಗೆ ನಿರೂಪಮಂ ಕೊಡುತಿರ್ದರು ನೋಡಾ ಸಂಗನ ಬಸವೇಶ್ವರಾ

ಸತ್ಯ ಶುದ್ಧ ದೀಕ್ಷೆ—೧೫ ಅಯ್ಯಾ, ಸತ್ತು ಚಿತ್ತಾನಂದ ನಿತ್ಯ ಪರಿಪೂರ್ಣವೆಂಬ ಪಂಚಾಂಗವನಂಗೀಕರಿಸಿ ಕೊಂಡಿರುತ್ತಿಹ ಪರಬ್ರಹ್ಮದಲ್ಲಿ ಸಮರಸ ಸಂಗದಿಂದ ಕೂಟವ ಮಾಡಿ, ಅವಿರಳ ಪರಂಜ್ಯೋತಿ ಸ್ವರೂಪ ಶರಣನ ನಿಲುಕಡೆ ಎಂತೆಂದೊಡೆ, ಅಣು ಮಾತ್ರ ಸತ್ಯ ನಡೆನುಡಿ ತೊಲಗನಯ್ಯ. ದೃಢ ಚಿತ್ತದಿಂದ ಕೊಟ್ಟ ಭಾಷೆಗಳ ಬಿಡನು. ಮನದ ಸಂಗವ ಮಾಡಿ, ಹುಸಿನುಡಿಯ ನುಡಿಯನಯ್ಯ. ನಿಜನೈಷ್ಠಾಪರತ್ವದಿಂದ ಸತ್ಕಾಯಕ ಸತ್ಪಾತ್ರ-ಭಕ್ತಿ ಸತ್ಕ್ರಿಯೇ ಜ್ಞಾನಾಚಾರಂಗಳ ಅವರಂತರದಲ್ಲಿ ನಿಂದೆ ಕುಂದು ದರಿದ್ರ ರೋಗ ರುಜೆ ವಿಪತ್ತು ಹಾಸ್ಯ ರೋಷಂಗಳು

ಬಂದು ತಕ್ಷಣದಲ್ಲಿ, ಶ್ರೀಗುರುಲಿಂಗ ಜಂಗಮದ ಕರುಣಾಕಟಾಕ್ಷೆಯಿಂದ ಒಂದ ಮಹಾ ಪ್ರಸಾದವೆಂದು ಲಿಂಗಭೋಗಿಯಾಗಿರುವನಲ್ಲದೆ, ಶೈವ ಜಡ ಕರ್ಮ ಭೂತ ಪ್ರಾಣಿಗಳಂತೆ ಸತ್ಕಾಯಕ ಸತ್ಪಾತ್ರ--ಭಕ್ತಿ ಸತ್ಕ್ರಿಯೆ ಜ್ಞಾನಾಚಾರಂಗಳ ನಿಮಿಷಾರ್ಧವನಗಲುವನಲ್ಲ ನೋಡಾ. ಕುಲಛಲಕ್ಕಾದೊಡೆ ಶಿವಶರಣರಲ್ಲಿ ಜಾತಿ ಸೂತಕವ ಬಳಸದೆ ದುಷ್ಟ ಕಾಯಕ ಅಪಾತ್ರ ಭಕ್ತಿ ಅಕ್ರಿಯಾಜ್ಞಾನ ಅನಾಚಾರಂಗಳನನುಕರಿಸಿ ಉದರ ಪೋಷಣಕ್ಕೆ ಲಾಂಛನ ದಿಚ್ಛೆಗೆ ನುಡಿದು, ಸಮ ಪಂಕ್ತಿಯ ಮಾಡದೆ, ಪರಮಾನಂದ ಸುಖಾಬ್ಧಿಯಲ್ಲಿ ಮುಳುಗಿ ಅಷ್ಟಾವಧಾನ ಎಚ್ಚರ ಗುಂದದೆ ಮನ ಪ್ರಾಣ ಲಿಂಗವಾದುದೀಗ ಸತ್ಯ ಶುದ್ಧ ದೀಕ್ಷೆ ಇಂತುಟೆಂದು ಶ್ರೀಗುರು ನಿಃಕಳಂಕ ಚನ್ನಬಸವ ರಾಜೇಂದ್ರನು ನಿರ್ಲಜ್ಜ ಶಾಂತಲಿಂಗ ದೇಶಿಕೋತ್ತಮಂಗೆ ನಿರೂಪಮಂ ಕೊಡುತಿರ್ದರು ನೋಡಾ ಸಂಗನ ಬಸವೇಶ್ವರಾ.

ಏಕಾಗ್ರ ದೀಕ್ಷೆ—೧೬ ಅಯ್ಯಾ, ಇಂತು ಶಿಕ್ಷಾಗುರುದೇವನು ಅನಾದಿ ಶಿಷ್ಯೋತ್ತಮನ ಸೂಕ್ಷ್ಮ ತನುವಿನಲ್ಲಿ ೩೬ ಪ್ರಣವಸ್ವರೂಪವಾದ ಪ್ರಾಣಲಿಂಗವ ಸಂಬಂಧಿಸಿ, ಆ ಪ್ರಾಣಲಿಂಗಕ್ಕೆ ಹಣೆಕಿರಣ ಚೈತನ್ಯಸ್ವರೂಪ ನಿಃಕಳಂಕ ಜಂಗಮವ ತೋರಿ ಆ ಜಂಗಮದ ಚರಣ ಸೋಂಕಿನಿಂ ಪವಿತ್ರವಾದ ಕ್ರಿಯಾ ಭಸಿತ ರುದ್ರಾಕ್ಷಿ ಮಹಾ ಮಂತ್ರಂಗಳನರುಹಿ, ದಶವಿಧ ಪಾದೋದಕ ಏಕಾದಶ ಪ್ರಸಾದವ ಕರುಣಿಸಿ, ಎಲೇ ಶಿಷ್ಯೋತ್ತಮನೆ, ನಿನ್ನ ಮನ ಮೊದಲಾದ ಕರಣಂಗಳೆಲ್ಲಾ ಸಿದ್ಧ ಪ್ರಸಾದವಾದ ಪ್ರಾಣಲಿಂಗ ಮಯವಾದುದೆಂದು ಅರುಪುವಂಥಾದ್ದೇ ಕ್ರಿಯಾ ದೀಕ್ಷೆಯ ಪಡೆದ ಚಿದಂಗ ಚಿದ್ಘನ ಇಷ್ಟ ಮಹಾಲಿಂಗದೊಳಗಣ ಚಿತ್ಪ್ರಾಣಾಂಗ ಚಿತ್ಪ್ರಾಣಲಿಂಗಕ್ಕೆ ಮಂತ್ರದೀಕ್ಷೆ ಇಂತುಟು ನೋಡಾ ಇಂತು ಕ್ರಿಯಾ ದೀಕ್ಷೆಮಂತ್ರದೀಕ್ಷೆ ತೀರಿದ ಮೇಲೆ, ಆ ದೀಕ್ಷಾಗುರು ಶಿಕ್ಷಾಗುರುವೇ ಜ್ಞಾನ ಗುರುತ್ವದ ಲೀಲೆಯುಂಧರಿಸಿ ಮತ್ತು ಶಿಷ್ಯೋತ್ತಮಂಗೆ ಉಪದೇಶವ ಕರುಣಿಸುವ ಭೇದವಂತೆಂದೊಡೆ, ಪರಮ ಪತಿವ್ರತೆ ಹರಗಣ ಸಾಕ್ಷಿಯಾಗಿ ಕಂಕಣವ ಕಟ್ಟಿದ ಪುರುಷಂಗೆ ತನ್ನ ತನುಮನವ ಮೀಸಲವಮಾಡಿ, ತನ್ನ ಪಿತ ಮಾತೆ ಬಂಧುಬಳಗ ಒಡಹುಟ್ಟಿದವರು ಮೊದಲಾಗಿ ಪರಶಿವಲಿಂಗ ಜಂಗಮ ತೀರ್ಥ ಪ್ರಸಾದ ಪುತ್ರಮಿತ್ರರ ಸಂಗವ ಸೋಂಕದೆ ಅವರೊಡವೆಗಿಚ್ಛಿಸಿ ನಡೆನುಡಿಗಳಾಲಿಸದೆ ತನ್ನ ರಮಣನ ಪ್ರಿಯಾಭರಣವ ಹಾರೈಸಿ ಆತನು ನುಡಿದ ನುಡಿಯೆ ಮಹಾ ಪ್ರಸಾದವೆಂದು ಪ್ರತಿ ನುಡಿಯ ನುಡಿ

ಯುದೆ, ಸರ್ವಾವಸ್ಥೆಯಲ್ಲಿ ಆ ರಮಣನ ರತಿ ಸಂಯೋಗಾನು ಸಂಧಾನ ದಿಂದ ಎರಡಳಿದಿರುವ ಸತ್ಯಾಂಗನೆಯಂತೆ ಶ್ರೀ ಗುರುವಿನ ಕರಗರ್ಭ ಮಧ್ಯ ದಲ್ಲಿ ಜನಿತವಾದ ಲಿಂಗ ಭಕ್ತ ಸತಿಸುತ ಪಿತಮಾತೆ ಬಂಧುಬಳಗ ಒಡ ಹುಟ್ಟಿದವರು ಮೊದಲಾಗಿ ಪರಶಿವಲಿಂಗ ಜಂಗಮತೀರ್ಥ ಪ್ರಸಾದ ಮಂತ್ರದಲ್ಲಿ ಮನಮುಳುಗಿ ಲೋಕದ ಶೈವ ಮಾರ್ಗಿಗಳಂತೆ ಹಲವು ಕ್ಷೇತ್ರ, ಹಲವು ತೀರ್ಥ ಹಲವು ನೇಮವ್ರತಂಗಳಿಗೆ ಅಡಿ ಇಡದೆ ಕಾಯಕ ವಾಚಕ ಮಾನಸ ಮೊದಲಾದ ಸಮಸ್ತ ತತ್ವಂಗಳ ಸ್ವಪಾಕವ ಮಾಡಿ, ನಿಃಕಳಂಕ ಪರಶಿವಲಿಂಗ ಜಂಗಮಕ್ಕೆ ಸಮರ್ಪಿಸಿ, ಅವರೊಕ್ಕು ಮಿಕ್ಕ ಹರ್ಷಾನಂದ ಮಹಾ ಪ್ರಸಾದದಲ್ಲಿ ಸಂತೃಪ್ತನಾಗಿ ಇಷ್ಟಲಿಂಗ ಬಾಹ್ಯ ವಾದ ಜಡಶೈವ ನಡೆನುಡಿಗಳ ಆಲಿಸದಿರ್ಪುದೆ ಏಕಾಗ್ರದೀಕ್ಷೆ ಇಂತು ಟೆಂದು ಶ್ರೀಗುರು ನಿಃಕಳಂಕ ಚನ್ನಬಸವ ರಾಜೇಂದ್ರನು ನಿರ್ಲಜ್ಜ ಶಾಂತ ಲಿಂಗ ದೇಶಿಕೋತ್ತಮಂಗೆ ನಿರೂಪಮಂ ಕೊಡುತಿರ್ದರು ನೋಡಾ ಸಂಗ ನಬಸವೇಶ್ವರಾ.

ದೃಢವ್ರತ ದೀಕ್ಷೆ—೧೭. ಅಯ್ಯಾ ಸತ್ಯ ಸದಾಚಾರ ಲಿಂಗವ ಧರಿ ಸಿದ ಲಿಂಗಭಕ್ತಂಗೆ ದೀಕ್ಷಾ ಗುರುವೆ ಕುಲದೈವ, ಶಿಕ್ಷಾ ಗುರುವೇ ಮನೆ ದೈವ, ಜ್ಞಾನ ಗುರುವೇ ಮನಮಧ್ಯದಲ್ಲಿ ಬೆಳಗುವ ಪರಂಜ್ಯೋತಿರ್ಲಿಂಗ ವೆಂದು ಕುಲತುಂಬಿ, ಮನೆತುಂಬಿ, ಮನತುಂಬಿ, ಮತ್ತೊಂದು ಇತರವಾ ದಿಗಳಂತೆ ಅನ್ಯಾರ್ಚನೆ ಅನ್ಯಶಾಸ್ತ್ರ ಅನ್ಯಮಂತ್ರ ಅನ್ಯಪಾಕವ ಮುಟ್ಟದೆ, ಸ್ವಪಾಕವ ಮಾಡಿ, ಹರಗಣ ಗುರುಚರಪರಕ್ಕೆ ಸಮರ್ಪಿಸಿ, ಬಂದಬರವ ನಿಂ ದ ನಿಲುಕಡೆಯ ತಿಳಿದು, ತನುವೆಲ್ಲ ದೀಕ್ಷಾಗುರುವಿನ ದೀಕ್ಷಾಪಾದೋದಕ ಶುದ್ಧ ಪ್ರಸಾದವೆಂದರಿದ ನಿಜವೇ ಆದಿಪ್ರಸಾದ ಸ್ಥಲ ನೋಡಾ. ಮನವೆಲ್ಲ ಶಿಕ್ಷಾಗುರುವಿನ ಶಿಕ್ಷಾಪಾದೋದಕ ಸಿದ್ಧಪ್ರಸಾದವೆಂದರಿದ ನಿಜವೇ ಅಂತ್ಯ ಪ್ರಸಾದಿ ನೋಡಾ. ಭಾವವೆಲ್ಲ ಜ್ಞಾನಗುರುವಿನ ಜ್ಞಾನಪಾದೋದಕ ಪ್ರಸಿ ದ್ಧಪ್ರಸಾದವೆಂದರಿದ ನಿಜಸೃಷ್ಟಿಯೇ ಸೇವ್ಯೆ ಪ್ರಸಾದಿ ನೋಡಾ. ಇಂತು ದೀಕ್ಷಾಗುರು ಶಿಕ್ಷಾಗುರು ಜ್ಞಾನಗುರು ಸ್ವರೂಪವಾದ ಲಿಂಗಜಂಗಮದ ಪಾದೋದಕ ಪ್ರಸಾದ ಒದವಿದಲ್ಲಿ ಆಚರಣೆ ಸಾಮಾನ್ಯವಲ್ಲಿ ಸಂಬಂಧ ವಿಟ್ಟುಕೊಂಡು ಕೊಟ್ಟು ಕೊಳಬಲ್ಲಾತನೆ ನಿಚ್ಚಪ್ರಸಾದಿಯಯ್ಯ. ಲಿಂಗ ಜಂಗಮದ ಪಾದೋದಕದ ಪ್ರಸಾದವನುಳಿದು, ಜಂಗಮ ಲಿಂಗದ ಪ್ರಸನ್ನ ಪಾದೋದಕ ಪ್ರಸಾದವ ದಿವಾ ರಾತ್ರಿಗಳೆನ್ನದೆ ಆಚರಣೆಯೇ

ಪ್ರಾಣವಾಗಿ ಕೊಟ್ಟು ಕೊಳಬಲ್ಲಾತನೇ ಅಚ್ಚಪ್ರಸಾದಿಯಯ್ಯಾ. ಇವರಿಬ್ಬರಲ್ಲಿ ಅತಿ ಭೃತ್ಯನಾಗಿ ಇವರಿಬ್ಬರಾಚರಣೆಯಲ್ಲಿ ದೃಢ ಚಿತ್ತದಿಂದ ಕೊಟ್ಟು ಕೊಳಬಲ್ಲಾತನೆ ಸಮಯಪ್ರಸಾದಿ ನೋಡಾ. ಇಂತು ಸರ್ವಾಚಾರ ಸಂಪತ್ತಿನಾಚರಣೆಯು ಸಾಕಾರಲೀಲೆ ಅರ್ಪಿತಾವಧಾನ ಚೇತನಪರಿಯಂತರವು ಆಚರಿಸುವಂಥಾದ್ದೇ ದೃಢವ್ರತದೀಕ್ಷೆ, ಇಂತುಟೆಂದು ಶ್ರೀಗುರು ನಿಃಕಳಂಕ ಚನ್ನಬಸವರಾಜೇಂದ್ರನು ನಿರ್ಲಜ್ಜಶಾಂತಲಿಂಗ ದೇಶಿಕೋತ್ತಮಂಗೆ ನಿರೂಪಮಂ ಕೊಡುತಿರ್ದರು ನೋಡಾ ಸಂಗನಬಸವೇಶ್ವರಾ.

ಪಂಚೇಂದ್ರಿಯಾರ್ಪಿತ ದೀಕ್ಷೆ--೧೮. ಅಯ್ಯಾ ಶರಣಸತಿ ಲಿಂಗಪತಿ ಭಾವದಿಂದ ಸುಚಿತ್ತ ಸುಬುದ್ಧಿ ನಿರಹಂಕಾರ ಸುಮನ ಸುಜ್ಞಾನ ಸದ್ಭಾವ ನಿರುಪಾಧಿಕ ನಿಃಕಳಂಕ ನಿರಾಲಂಬನೆಂಬ ನವವಿಧಹಸ್ತಂಗಳಿಂದ ನವವಿಧ ಪದಾರ್ಥವನ್ನು ಇಷ್ಟ ಪ್ರಾಣ ಭಾವಲಿಂಗ ಆಚಾರ ಗುರು ಲಿಂಗ ಜಂಗಮ ಪ್ರಸಾದಲಿಂಗ ಮಹಾಲಿಂಗವೆಂಬ ನವವಿಧಲಿಂಗಗಳಿಗೆ ಶ್ರದ್ಧಾ ಭಕ್ತಿ ಮೊದಲಾಗಿ ನವವಿಧಭಕ್ತಿಗಳಿಂದ ಸಮರ್ಪಿಸುವ ಕ್ರಮವೆಂತೆಂದೊಡೆ, ತನು ಸಂಬಂಧವಾದ ರೂಪು ಪದಾರ್ಥವನ್ನು ಇಷ್ಟಲಿಂಗಕ್ಕೆ ಸಮರ್ಪಿಸಿ, ಮನಸಂಬಂಧವಾದ ರುಚಿ ಪದಾರ್ಥವನ್ನು ಪ್ರಾಣಲಿಂಗಕ್ಕೆ ಸಮರ್ಪಿಸಿ, ಧನಸಂಬಂಧವಾದ ತೃಪ್ತಿಪದಾರ್ಥವನ್ನು ಭಾವಲಿಂಗಕ್ಕೆ ಸಮರ್ಪಿಸಿ, ಸುಗಂಧ ಪದಾರ್ಥವನ್ನು ಆಚಾರಲಿಂಗಕ್ಕೆ ಸಮರ್ಪಿಸಿ, ಸುರಸ ಪದಾರ್ಥವನ್ನು ಗುರುಲಿಂಗಕ್ಕೆ ಸಮರ್ಪಿಸಿ, ಸುರೂಪ ಪದಾರ್ಥವನ್ನು ಶಿವಲಿಂಗಕ್ಕೆ ಸಮರ್ಪಿಸಿ, ಸುಸ್ಪರ್ಶನ ಪದಾರ್ಥವನ್ನು ಜಂಗಮಲಿಂಗಕ್ಕೆ ಸಮರ್ಪಿಸಿ, ಸುಶಬ್ದ ಪದಾರ್ಥವನ್ನು ಪ್ರಸಾದಲಿಂಗಕ್ಕೆ ಸಮರ್ಪಿಸಿ, ಸುತೃಪ್ತಿ ಪದಾರ್ಥವನ್ನು ಮಹಾಲಿಂಗಕ್ಕೆ ಸಮರ್ಪಿಸಿ, ಘ್ರಾಣ, ಜಿಹ್ವೆ, ನೇತ್ರ, ತ್ವಕ್ಕು ಶ್ರೋತ್ರ ಹೃದಯಂಗಳು ಮೊದಲಾದ ಸಮಸ್ತ ಮುಖಂಗಳಲ್ಲಿ ಬರುವ ಪದಾರ್ಥಂಗಳ ಸಮಸ್ತ ಲಿಂಗಗಳಿಗೆ ಮಿಶ್ರಾಮಿಶ್ರಂಗಳೊಡನೆ ಸಮರ್ಪಿಸಿ, ಆ ಲಿಂಗಂಗಳ ಸಂತೃಪ್ತಿ ಪರಿಣಾಮ ಪ್ರಸಾದದಲ್ಲಿ ಲೋಲುಪ್ತರಾಗಿ ಇರುವಂಥಾದ್ದೇ ಪಂಚೇಂದ್ರಿಯಾರ್ಪಿತ ದೀಕ್ಷೆ. ಇಂತುಟೆಂದು ಶ್ರೀಗುರು ನಿಃಕಳಂಕ ಚನ್ನಬಸವರಾಜೇಂದ್ರನು ನಿರ್ಲಜ್ಜ ಶಾಂತಲಿಂಗ ದೇಶಿಕೋತ್ತಮಂಗೆ ನಿರೂಪಮಂ ಕೊಡುತಿರ್ದರು ನೋಡಾ ಸಂಗನಬಸವೇಶ್ವರಾ.

ಅಹಿಂಸಾ ದೀಕ್ಷೆ— ೧೯. ಅಯ್ಯಾ, ಶ್ರೀಗುರು ಲಿಂಗ ಜಂಗಮದ ಕರುಣಾಕಟಾಕ್ಷೆಯಿಂದುತ್ಪತ್ಯವಾಗಿ ನಿರ್ಮಾಯ ಕಂಥೆಯ ಧರಿಸಿದ ಶಿವ

ಶರಣಂಗೆ ಅನಂತ ಲೀಲೆಯುಳ್ಳಿ ಬೆಂಬತ್ತಿ ಬಂದ ಪಾಪವೇ ಒಂದು ರೂಪಾಗಿ ಮಾಯಾಜಡಜೀವ ಶರೀರವ ಧರಿಸಿ, ಪರಿಪರಿಯಿಂದ ನಿಂದೆಕುಂದು ಅಪ ಮೃತ್ಯುಗಳು ಬಂದು ತಟ್ಟಿದಲ್ಲಿ, ಅರ್ಪಿತಾವಧಾನ ಸುಖದುಃಖಗಳು ಬಂದು ಸೋಂಕಲೊಡನೆ, ಶಿವಶರಣನು ಸ್ವಾತ್ಮಜ್ಞಾನದಿಂದರಿದು ನೋಡಿದಲ್ಲಿ, ಈ ಮಾಯಾ ಜಡ ಜೀವಾತ್ಮರಿಗೆ ಸೂತ್ರಧಾರಿ ಶಿವನು ಕಪಟನಾಟಕ ಲೀಲೆಯು ಧರಿಸಿ ಸಕಲ ಜೀವಾತ್ಮರ ಮಧ್ಯದಲ್ಲಿ, ಅಣುವಿಗಣುವಾಗಿ, ಮಹತ್ತಿಂಗೆ ಮಹತ್ತಾಗಿ ಆ ಜೀವನೆಂಬ ವಿಧಿಗೆ ಸ್ತುತಿ ನಿಂದೆ ಪುಣ್ಯ ಪಾಪ, ಸಂಕಲ್ಪ ವಿಕಲ್ಪವೆಂಬ ಕುಟಿಲ ವ್ಯವಹಾರವ ಕಲ್ಪಿಸಿ, ಆ ಜೀವನಿಂದ ಭಕ್ತಗಣಂಗ ಳಲ್ಲಿ ಅಷ್ಟಾವರಣದ ನಿಷ್ಠಾ ಪರತ್ವವ ನೋಡಬೇಕೆಂದು ಅನಂತ ಬಾಧೆಗ ಳಿಂದ ಬಾಧಿಸಿದಲ್ಲಿ ಶಿವಶರಣಗಣಂಗಳು ಆ ಬಾಧೆಗೆ ಅಳುಕದೆ ಚಿಂತಿಸದೆ, ಅಷ್ಟಾವರಣ ಭರಿತರಾಗಿ ದೇಹಾಭಿಮಾನದ ಹಸಿವು ತೃಷೆ ನಿದ್ರೆ ಆಲಸ್ಯ ಸಂಗವೆಂಬ ಕಾಲಕಾಮರ ಪಾಶದಲ್ಲಿ ಬೀಳದೆ, ಭವಿ ಭಕ್ತನೆಂಬ ವಿಚಾರ ವನರಿಯದ ದುಷ್ಟರ ಕಂಡರೆ ದೂರದಲ್ಲಿರಬೇಕೆಂಬ ಗುರುವಾಕ್ಯವ ತಿಳಿದು, ಅವರ ಸಂಭಾಷಣೆ ಸಂಸರ್ಗವ ಮಾಡದೆ, ಅವರ ಸ್ತುತಿ ನಿಂದ್ಯಾದಿಗಳಾಲಿ ಸದೆ ನಿಃಕಳಂಕ ಪರಬ್ರಹ್ಮ ಪರಶಿವಲಿಂಗದಲ್ಲಿ ಸದಾ ಸನ್ಮಾರ್ಗಿಯಾಗಿ, ಸು ಸಂಗಿಗಳಿಂದ ಶ್ರದ್ಧಾತುರ ಪರಿಣಾಮದಲ್ಲಿ ಬಂದು ತಟ್ಟಿದ ಪರಿಣಾಮ ಪಾದೋದಕ ಪ್ರಸಾದದಲ್ಲಿ ಲೋಲುಪ್ತರಾಗಿ ತನ್ನ ನಡೆನುಡಿಗಳ ಸ್ವಾತ ಜ್ಞಾನದಿಂದ ವಿಚಾರಿಸಿ, ಪಕ್ಷ ಮಾಡುವಂಥ ನಿಂದಸಿಲುಕದೆಯ ಅಹಿಂಸಾ ದೀಕ್ಷೆ ಇಂತುಟೆಂದು ಶ್ರೀಗುರು ನಿಃಕಳಂಕ ಚನ್ನ ಬಸವರಾಜೇಂದ್ರನು ನಿರ್ಲಜ್ಜ ಶಾಂತಲಿಂಗ ದೇಶಿಕೋತ್ತಮಂಗೆ ನಿರೂಪಮಂ ಕೊಡುತಿರ್ದರು ನೋಡಾ ಸಂಗನಬಸವೇಶ್ವರಾ.

ಲಿಂಗನಿಷ್ಠಾ ದೀಕ್ಷೆ— ೨೦. ಅಯ್ಯಾ, ಸತ್ತು ಚಿತ್ತಾನಂದ ನಿತ್ಯಪರಿ ಪೂರ್ಣ ಅವಿರಳ ಪರಂಜ್ಯೋತಿ ಸ್ವರೂಪ ಪರಮಾರಾಧ್ಯ ವೀರಶೈವಾಚಾರ ಷಟ್ಸ್ಥಲ ಪ್ರತಿಪಾದಕ ಶ್ರೀಗುರು ಲಿಂಗ ಜಂಗಮ ಕರುಣಾಕಟಾಕ್ಷೆಯಿಂದ ಅಂಗಮನಭಾವಂಗಳೆಲ್ಲ ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದಸ್ವರೂಪವಾದ ಇಷ್ಟ ಪ್ರಾಣ ಭಾವಲಿಂಗವಾದ ಮೇಲೆ ಭೃಂಗಿಕೀಡೆಯೋಪಾದಿಯಲ್ಲಿ ಗುರು ಲಿಂಗ ಜಂಗಮ ಬೇರೆ, ನಾನು ಬೇರೆಂಬ ಭಿನ್ನಭಾವವಳಿದು, ಗುರುಮಾ ರ್ಗಾಚಾರದಲ್ಲಿ ಪ್ರೇಮವುಳ್ಳಾತನಾಗಿ ಜ್ಞಾತೃ ಜ್ಞಾನ ಜ್ಞೇಯವೆಂಬ ಅಷ್ಟಾಂ ಗಯೋಗ ಭ್ರಮಿತರಾದ ಜಡಕರ್ಮ ಶೈವಮಾರ್ಗದಲ್ಲಿ ಸಾಕ್ಷಾತ್ಶಿವನೇ

ಇಷ್ಟಲಿಂಗಧಾರಕನಾಗಿ ಗುರು ರೂಪ ಧರಿಸಿ ಭವಿ ಭಕ್ತಮಾರ್ಗವ ತೋರದೆ ಇಚ್ಛೆಯನುಡಿದು ಉದರವ ಹೊರೆವ ವೇಷವಕಂಡು, ಶರಣೆಂದು ಮನ್ನಣೆಯಕೊಡದೆ, ಭೂತ ಸೋಂಕಿದ ಮನುಜನೋಪಾದಿಯಲ್ಲಿ ತನ್ನ ಪವಿತ್ರಸ್ವರೂಪ ಪರತತ್ವ ಮಾರ್ಗಧ್ಯಾನದಿಂದ ಚಿನ್ಘನ ಲಿಂಗದೊಳಗೆ ತಾನಾಗಿ, ತನ್ನೊಳಗೆ ಚಿನ್ಘನ ಲಿಂಗವಾಗಿ ಸಪ್ತಧಾತು ಸಪ್ತವ್ಯಸನಂಗಳಲ್ಲಿ ಕೂಡದೆ, ಲಿಂಗವೇ ತಾನಾದ ಸ್ವಸ್ವರೂಪು ನಿಲುಕಡೆಯೇ ಲಿಂಗನಿಷ್ಠಾದೀಕ್ಷೆ ಇಂತುಟೆಂದು ಶ್ರೀಗುರು ನಿಃಕಳಂಕ ಚನ್ನಬಸವ ರಾಜೇಂದ್ರನು ನಿರ್ಲಜ್ಜಶಾಂತಲಿಂಗ ದೇಶಿಕೋತ್ತಮಂಗೆ ನಿರೂಪಮಂ ಕೊಡುತಿರ್ದರು ನೋಡಾ ಸಂಗನಬಸವೇಶ್ವರಾ.

ಮನೋಲಯದೀಕ್ಷೆ—೨೧. ಅಯ್ಯಾ, ಸತ್ಯಸದಾಚಾರ ಸದ್ಭಕ್ತಿ ಜ್ಞಾನವೈರಾಗ್ಯ ಸತ್ಕ್ರಿಯೆ ಸತ್ಕಾಯಕ ಸತ್ಪಾತ್ರಭಿಕ್ಷವೆಯಧರಿಸಿ ಲೋಕಪಾವನಾರ್ಥವಾಗಿ ಇಚ್ಛೆಯನುಡಿಯದೆ, ನಡೆನುಡಿಹೀನವಾದ ಸೂತಕಪಾತಕರ ಸಂಗವ ಹೊದ್ದದೆ, ಗುರುಮಾರ್ಗಾಚಾರಕ್ಕೆ ಕುಂದುಕೊರತೆಗಳ ತಾರದೆ, ಸನ್ಮಾರ್ಗದಲ್ಲಾಚರಿಸಿ, ಗುರುಲಿಂಗಜಂಗಮ ಸದ್ಭಕ್ತಿಚಾರಿತ್ರವುಳ್ಳ ಶಿವಶರಣಗಣಂಗಳಲ್ಲಿ ಕುಂದುನಿಂದೆಗಳ ಕಲ್ಪಿಸದೆ ಎಚ್ಚರದಪ್ಪಿದಲ್ಲಿ, ಬಹುಪರಾಕು ಸ್ವಾಮಿ ಶರಣಗಣಂಗಳು ಹೋದ ಮಾರ್ಗವಿದಲ್ಲವೆಂದು ಭೃತ್ಯಭಕ್ತಿಯಿಂದ ಹೇಳಿ, ಅಜ್ಞಾನ ಅಕ್ರಿಯೆ ಅನಾಚಾರನೆಂಬ ಮಾಯಾಶರಧಿಯಲ್ಲಿ ಮುಳುಗಿ ಹೋಗುವ ಇಷ್ಟಲಿಂಗಧಾರಕ ಭಕ್ತಗಣಂಗಳಕಂಡು, ಅಗಸ ತನ್ನ ಮಡಿಮೈಲಿಗೆಯು ಹೊರುವ ಕತ್ತೆಯು ಜಿಹ್ವಾಲಂಪಟ ಗುಹ್ಯಾಲಂಪಟದಿಂದ ಹೋಗಿ ಹಳ್ಳ ಕೊಳ್ಳ ಕೆರೆ ಬಾವಿಯೊಳಗೆ ಬಿದ್ದು ಹೋಗುವದ ಕಂಡು ಕಪಿಯುಹಿಡಿದು ಎಳೆದುಕೊಂಡೋಪಾದಿಯಲ್ಲಿ ಹಸ್ತವಾದಹಿಡಿಹಿಡಿದು ಕಡೆಗೆಳೆದು ಶೃತಿಗುರುಸ್ವಾನುಭಾವವತೋರಿ ಮತ್ತವರ ಕರುಣವಪಡೆದು ಏಕಮಾರ್ಗದಲ್ಲಿ ಆಚರಿಸಿ ನಿಃಕಲ ಪರಶಿವಲಿಂಗದಲ್ಲಿ ಶಿಖಿ ಕರ್ಪುರದಂತೆ ರತಿಸಂಯೋಗವುಳ್ಳಂಥಾದ್ದೇ ಮನೋಲಯ ದೀಕ್ಷೆ ಇಂತುಟೆಂದು ಶ್ರೀಗುರು ನಿಃಕಳಂಕಮೂರ್ತಿ ಚನ್ನಬಸವ ರಾಜೇಂದ್ರನು ನಿರ್ಲಜ್ಜಶಾಂತಲಿಂಗ ದೇಶಿಕೋತ್ತಮಂಗೆ ನಿರೂಪಮಂ ಕೊಡುತಿರ್ದರು ನೋಡಾ ಸಂಗನಬಸವೇಶ್ವರಾ.

ಸದ್ಯೋನ್ಮುಕ್ತಿದೀಕ್ಷೆ-೨೨. ಅಯ್ಯಾ ಶ್ರೀಗುರುಲಿಂಗಜಂಗಮದಕರುಣಾಕಟಾಕ್ಷಯಿಂದ ಶೃತಿಗುರುಸ್ವಾನುಭಾವವಿಡಿದು ಹಿಡಿದಂಥ ಸನ್ಮಾರ್ಗ

ಚಾರ ಕ್ರಿಯೆಗಳ ಅಪಮೃತ್ಯು ಬಂದುತಟ್ಟಿ, ಪ್ರಾಣತ್ಯಾಗವ ಮಾಡಿದರೂ ಅಂಜಿ ಅಳುಕದೆ, ಪರಮಪತಿವ್ರತತ್ವದಿಂದೆ ಹಿಂದುಮುಂದಣ ಪುಣ್ಯಪಾಪವನೆಣಿಸದೆ, ಇಂತು ಶ್ರೀಗುರುವಾಕ್ಯ ನಿಜನೈಷ್ಠೆಯಿಂದರಿದು ನಿಜವೀರಶೈವ ಸದ್ಭಕ್ತಾಚಾರಲಿಂಗಮುಖದಿಂದ ಬಂದ ಸ್ವಪಾಕವಾದರೂ ಸರಿಯೇ. ಭಕ್ತಾತ್ರಯದಲ್ಲಿ ಸ್ವಪಾಕವಮಾಡಿ ಸಂಬಂಧಾಚರಣೆಗಳಿಂದ ಪವಿತ್ರಸ್ವರೂಪಪಾದೋದಕ ಪ್ರಸಾದವೆನಿಸಿ, ನಿರ್ವಂಚಕತ್ವದಿಂದ ಸಂಚಲಚಿತ್ತವನುಳಿದು ಮಂತ್ರಸ್ಮರಣೆಯಿಂದ ಸರ್ವಾಚಾರ ಸಂಪತ್ತಿನಾಚರಣೆಯನ್ನೊಳಕೊಂಡು, ಸಮಸ್ತ ಲೋಕಪಾವನ ಮೂರ್ತಿ ನಿಃಕಲ ಪರಶಿವಲಿಂಗ ಜಂಗಮಕ್ಕೆ ಕೊಟ್ಟು ಕೊಂಬ ಸದ್ಭಕ್ತಜಂಗಮದ ಚರಣಕಮಲ ಧೂಳನವೇ ದ್ವಿತೀಯ ಕೈಲಾಸ ಶಿವಮಂದಿರವೆಂದು ಹಿಂದುಮುಂದಣ ಆಶೆ ಆಮಿಷದ ಭ್ರಾಂತು ಭ್ರಮೆಗಳನುಳಿದು, ಧ್ಯಾನ ಮೌನ ನೇಮ ನಿತ್ಯ ಸತ್ಯ ಸದ್ಭಾವವೆಂಬ ಷಡ್ಗುಣೈಶ್ವರ್ಯ ಸಂಪದವ ನಿಃಕಲಪರತತ್ವ ಲಿಂಗದಿಂಪಿಡಿದು ಆ ಲಿಂಗದೊಡನೆ ಭೋಗಿಸಿ ನಿಃಕಲಪರತತ್ವ ಮೂರ್ತಿತಾನಾದ ನಿಜಮೋಕ್ಷದರವೇ ಸದ್ಯೋನ್ಮುಕ್ತಿದೀಕ್ಷೆ ಇಂತೆಂಬುದು ಶ್ರೀಗುರು ನಿಃಕಳಂಕ ಚನ್ನಬಸವರಾಜೇಂದ್ರನು ನಿರ್ಲಜ್ಜಶಾಂತಲಿಂಗ ದೇಶಿಕೋತ್ತಮಂಗೆ ನಿರೂಪಮಂ ಕೊಡುತಿರ್ದರು ನೋಡಾ ಸಂಗನಬಸವೇಶ್ವರಾ.

೨೩. ಅಯ್ಯಾ, ಇಂತು ಅನಾದಿ ವಸ್ತುವೇ ಗುರುಶಿಷ್ಯ ಭಕ್ತಜಂಗಮ ಅಂಗಲಿಂಗ ಶರಣ ಸತಿ ಲಿಂಗಪತಿಯೆಂಬ ಸಾಕಾರಲೀಲೆಯಧರಿಸಿ, ಅವಿರಳಾನಂದ ವೇಧಾ ಮಂತ್ರ ಕ್ರಿಯಾದೀಕ್ಷೆಯುಕ್ತವಾದ ೨೧ ದೀಕ್ಷೆಯು ಭಿನ್ನವಿಲ್ಲದೆ ಸದ್ಗುರುಮುಖದಿಂದರಿದಾಚರಿಸಬಲ್ಲಡೆ ಸಹಜ ದೀಕ್ಷೆಯುಳ್ಳ ಶ್ರೀಗುರು ಲಿಂಗಜಂಗಮ ಭಕ್ತಮಹೇಶ ಪ್ರಸಾದಿ ಪ್ರಾಣಲಿಂಗಿ ಶರಣಐಕ್ಯ ನಿರವಯ ಮೂರ್ತಿ ಎಂಬನಯ್ಯ, ಕೂಡಲಚನ್ನಸಂಗನಲ್ಲಿ ಇಂತು ನಿರ್ಲಜ್ಜಶಾಂತಲಿಂಗ ದೇಶಿಕೋತ್ತಮಂಗೆ ಪರಮ ನಿರಾಭಾರಿ ವೀರಶೈವ ಷಟ್‍ಸ್ಥಲಾಚಾರ್ಯ ಚಿಕ್ಕದಂಡ ಪ್ರಮಥರು ಬೋಧಿಸಿದಂಥ ಮಹಾಪ್ರಸಾದವ ನಿನಗೆ ಹರದನಹಳ್ಳಿ ಸ್ಥಾಪನಾಚಾರ್ಯ ಶಿವಲಿಂಗಶಕ್ತಿವಲ್ಲಭನಾದ ಪರಮಾರಾಧ್ಯ ಬಸವಲಿಂಗ ಸಾಕ್ಷಿಯಾಗಿ ಅರುಹಿಸಿ ಕೊಟ್ಟೆವು ನೋಡಾ ಸಂಗನಬಸವೇಶ್ವರಾ.

೨೪ ಅಯ್ಯಾ ಪ್ರಮಥ ಗಣಂಗಳೆಲ್ಲಿ ಷಡ್ವಿಧ ಭಕ್ತಿಯೆಂಬ ಪರಮಾ
ಮೃತವ ಸೇವಿಸಿ ಪ್ರವೃತ್ತಿ ಮಾರ್ಗದಲ್ಲಿ ಚರಿಸುವ ಅರಿವೈರಿಗಳ ಸಂಗವ
ತ್ಯಜಿಸಿ, ನಿವೃತ್ತಿ ಮಾರ್ಗದಲ್ಲಿ ಚರಿಸುವ ಷಡ್ಗುಣಗಳ ಸಂಗವ ಸಾಧಿಸಿ
ಜಂಗಮದಾಚಾರದ ವಿಚಾರವ ತಿಳಿದು ಷಟ್‌ಸ್ಥಲ ಮಾರ್ಗದಲ್ಲಿ ನಿಂದು
ಭಕ್ತಿ ಜ್ಞಾನ ವೈರಾಗ್ಯದಲ್ಲಿ ಆಚರಿಸಿದ ವಿಚಾರವೆಂತೆಂದೊಡೆ, ಅನಾದಿ
ನಿರಂಜನ ಅಕಾಯ ಚರಿತ್ರ ನಿರಾಳೆಂಬ ಪರಶಿವ ಮೂರ್ತಿ ಸಾಕ್ಷಾತ್ ಶ್ರೀ
ಗುರು ದೇವನಿಂದ ಏಕವಿಂಶತಿ ವೇಧಾಮಂತ್ರ ಕ್ರಿಯಾದೀಕ್ಷೆಯ ಪಡೆದು
ತನ್ನ ತಾನರ್ಚಿಸಿ ಆ ಶ್ರೀ ಗುರುದೇವನ ಲಿಂಗ ಜಂಗಮದ ಲೀಲೆ
ಹೇಗುಂಟೋ ಹಾಗೆ ಭಕ್ತಿಯಮಾಡಿ, ಶ್ರೀಗುರು ಲಿಂಗ ಜಂಗಮದ
ಅಂತಃಕರಣವೆಂಬ ಪರಮಾಮೃತ ಸುಧೆಯೊಳಗೆ ಲೋಲುಪ್ತರಾಗಿ ನಿರ
ವಯ ಸಮಾಧಿಯಲ್ಲಿ ಬಯಲಾದರು ನೋಡಾ, ಅದರ ವಿಚಾರ
ವೆಂತೆಂದೊಡೆ ಭಕ್ತಿ ಸ್ಥಲಕ್ಕೆ ಕಾರಣವಾದ ಬಸವಣ್ಣನೆ ಲಿಂಗಲಾಂಛನಂಗಳ
ನೋಡಿ ತನುಮನ ಧನವನೊಪ್ಪಿಸಿ ಶರಣೆಂದರಯ್ಯಾ; ಮಹೇಶ್ವರ ಸ್ಥಲಕ್ಕೆ
ಕಾರಣವಾದ ಮಡಿವಾಳ ಪ್ರೇತಿಕೇಂದ್ರನೇ ಲಿಂಗಲಾಂಛನ ವಿಭೂತಿ
ರುದ್ರಾಕ್ಷಿ ಪಂಚಾಚಾರವ ನೋಡಿ ತನುಮನಧನವ ನೊಪ್ಪಿಸಿ ಶರಣೆಂದ
ರಯ್ಯಾ. ಪ್ರಸಾದಿ ಸ್ಥಲಕ್ಕೆ ಕಾರಣವಾದ ಮರುಳ ಶಂಕರ ದೇವನೇ ಲಿಂಗ
ಲಾಂಛನ ವಿಭೂತಿ ರುದ್ರಾಕ್ಷಿ ಮಂತ್ರ ಪಂಚಾಚಾರದಾಚರಣೆ ಸಪ್ತಾಚಾ
ರವ ಸಂಬಂಧದ ನಡೆನುಡಿಯ ವಿಚಾರಿಸಿ ತನುಮನ ಧನವನೊಪ್ಪಿಸಿ ಶರ
ಣೆಂದರಯ್ಯಾ. ಪ್ರಾಣಲಿಂಗಿ ಸ್ಥಲಕ್ಕೆ ಕಾರಣವಾದ ಸಿದ್ಧರಾಮೇಶ್ವರನೇ
ಲಿಂಗಲಾಂಛನ ಶ್ರೀ ವಿಭೂತಿ ರುದ್ರಾಕ್ಷಿ ಮಂತ್ರ ದ್ವಾದಶಾಚಾರ ಮೊದ
ಲಾದ ಸರ್ವಾಚಾರ ಸಂಪತ್ತಿನಾಚರಣೆಯ ಸರ್ವಾಂಗದಲ್ಲಿ ನ್ಯೂನಗಳಿಲ್ಲದೆ
ನಡೆನುಡಿಗಳು ಹೊದ್ದದೆ ನಿರಾಭಾರಿ ವೀರಶೈವ ನೋಡಿ ಇದೇ ಪರವಸ್ತು
ವೆಂದು ತನುಮನ ಧನವನೊಪ್ಪಿಸಿ ಶರಣೆಂದರಯ್ಯಾ. ಶರಣ ಸ್ಥಲಕ್ಕೆ ಕಾರ
ಣವಾದ ಚನ್ನಬಸವ ರಾಜೇಂದ್ರನೇ ಇಂತು ಚತುರ್ವಿಧ ಮೂರ್ತಿಗಳ
ವಿಚಾರಿಸಿ ಆಚರಣೆಯ ನೋಡಿ ಗುರು ಸೂತ್ರ ಗೋತ್ರ ದೀಕ್ಷೆಯ ವಿಚಾ
ರಿಸಿ ಲಿಂಗಾಂಗ ಷಟ್‌ಸ್ಥಾನಂಗಳ ನೋಡಿ ಗುರುಮಾರ್ಗಾಚಾರ ನಡೆನುಡಿ
ಗಳ ವಿಚಾರಿಸಿ ಸ್ವಾನುಭವ ಸಕೀಲದ ಗೊತ್ತು ತಿಳಿದು ಲಾಂಛನವ ನೋಡಿ
ಮನ್ನಿಸಿ ತನುಮನ ಧನವನೊಪ್ಪಿಸಿ ಶರಣೆಂದರಯ್ಯಾ. ಐಕ್ಯ ಸ್ಥಲಕ್ಕೆ ಕಾರಣ
ವಾದ ಅಜಗಣ್ಣಗಂಳೇ ಬಸವ ಮಡಿವಾಳ ಮರುಳಶಂಕರ ಸಿದ್ಧರಾಮ

ಚನ್ನಬಸವ ಮೊದಲಾದ ಮಹಾಗಣಂಗಳು ಅರ್ಥಿ ಉತ್ಸಾಹದಿಂದ ಭಕ್ತಿಯ ಮಾಡಿದ ಜಂಗಮವೇ ನನಗೆ ಮಹಾ ಪ್ರಸಾದವೆಂದು ಅವರಡಿಗಳಿಗೆ ವಂದಿಸಿ ತನುಮನಧನವನೊಪ್ಪಿಸಿ ಶರಣೆಂದರಯ್ಯ. ಸಿರವಯ ಸ್ಥಲಕ್ಕೆ ಕಾರಣವಾದ ಪ್ರಭುದೇವನೇ ಆವ ಮತವೆಂದು ನೋಡದೆ ಬಾಲ ಬ್ರಹ್ಮಿ ಬಳಸಿ ಬ್ರಹ್ಮಿಯೆಂಬ ಸಂಸಾರ ಸಂಕಲ್ಪ ಸೂತಕವನೆಣಿಸದೆ ಸರ್ವಾಂಗದ ವಯವಗಳ ನೋಡಿ ಸರ್ವಸಂಗ ಪರಿತ್ಯಾಗತ್ವದಿಂದ ದ್ವಾದಶ ಮಲಂಗಳಂ ತ್ಯಜಿಸಿ, ಭಕ್ತಿಜ್ಞಾನವೈರಾಗ್ಯದಿಂದ ಸಮಸ್ತವಾದ ಭೋಗಯೋಗಾದಿಗಳಿಗೆ ಹೇವರಿಸಿ ನಿರಾಸಕತ್ವದಿಂ ಶಿವಧೋಯೆಂದು ಗುರೂಪಾವಸ್ಥೆಯ ಮಾಡು ವಂಥ ಜ್ಞಾನಕಲಾತ್ಮಂಗೆ ಜಂಗಮಾಕೃತಿಯಿಂದ ಪ್ರತ್ಯಕ್ಷನಾಗಿ ಆ ಜ್ಞಾನಕ ಲಾತ್ಮನ ಉಪಾವಸ್ಥೆಯನೊಂದಿಸಿ ಆತನಿಗೆ ಅಂಜಬೇಡೆಂದು ಅಭಯಹಸ್ತವ ನಿತ್ತು ರೇವಣಸಿದ್ಧೇಶ್ವರ ಮೊದಲಾದ ಗಣಾಚಾರರ ಮಧ್ಯದಲ್ಲಿ ಈ ಜ್ಞಾನ ಕಲಾತ್ಮನನೊಪ್ಪಿಸಿ ಅವರಿಂದ ನಿರಾಕಾರವಾದ ಪ್ರಾಣಲಿಂಗವ ಬಹಿಷ್ಕರಿಸಿ ಪಂಚಕಲಶ ಸೂತ್ರದಿಂದ ಪ್ರಮಥಗಣ ಸಾಕ್ಷಿಯಾಗಿ ಆತನ ಷಡ್ವಿಧಸ್ಥಾನ ದಲ್ಲಿ ಸ್ಥಿರಂಗೊಳಿಸಿ, ಅಂತರಂಗ ಬಹಿರಂಗದಲ್ಲಿ ಅಷ್ಟವಿಧಾರ್ಚನೆ ಷೋಡ ಶೋಪಚಾರಗಳ ಭಕ್ತಿಯನರುಹಿ, ಆ ಪರಶಿವಲಿಂಗದಲ್ಲಿ ನೈಷ್ಠೆಯನೋಡಿ, ಪ್ರಮಥಗಣಾರಾಧ್ಯ ಭಕ್ತಮಾಹೇಶ್ವರರೊಡಗೂಡಿ ಏಕವಿಂಶತಿ ದೀಕ್ಷೆ ಮೊದಲಾಗಿ ಪ್ರಮಥರು ನುಡಿದ ಎರಡೆಂಬತ್ತುಕೋಟಿ ವಚನಾನುಭವ ಉದ್ಧರಣೆಯ ಬೋಧಿಸಿ ಸ್ವಸ್ವರೂಪು ನಿಲುಕಡೆಯ ಬೋಧಿಸಿ ನಾನುನೀನು ಎಂಬ ಭಿನ್ನಭಾವವನಳಿದು ಏಕ ಸ್ವರೂಪವೆಂಬ ಅಭಿನ್ನ ಲೀಲೆಯಿಂದ ಪಾದೋದಕ ಪ್ರಸಾದದಲ್ಲಿ ಏಕಭಾಜನವ ಮಾಡಿದ ಮೇಲೆ, ಶ್ರೀಗುರು ಬಸವ ಮೊದಲಾದ ಪ್ರಮಥಗಣಾರಾಧ್ಯರ ಕರೆದು ಇಲ್ಲೊಂದು ನಿಜವಸ್ತು ಉಂಟೆಂದು ತಾವು ಮೊದಲು ಶರಣ್ಬೊಕ್ಕು ತಮ್ಮ ಹಿಂದೆ ಶರಣಗಣಂಗ ಳೆಲ್ಲ ಶರಣ್ಬೊಕ್ಕು, ಅಡಿಮುಡಿಯಿಂದ ವಸ್ತುವ ಬೆಸಗೊಂಡು ಆ ಲಿಂಗ ಜಂಗಮ ದೇವರೊಡಗೂಡಿ ಬಯಲೊಳಗೆ ಮಹಾಬಯಲಾದರು ನೋಡಾ ಸಂಗನ ಬಸವೇಶ್ವರಾ.

ಭಕ್ತಿಜ್ಞಾನ ಸತ್ಕ್ರಿಯೆಗಳ ಮಹತ್ವ.

೧. ಹರಗಣಂಗಳಾಚಸಿರಿದ ಸತ್ಕ್ರಿಯಾಕದಿಂದೆ ಬಹುಜನ್ಮದದೋಷ

ತೊಲಗುವವಯ್ಯ. ಸತ್ಕ್ರಿಯೆಯಿಂದ ಕಾಲಕಾಮರ ಭಯ ಹರಿವುದಯ್ಯ. ಸಮ್ಯಜ್ಞಾನದಿಂದ ಮಾಯಾಪಾಶ ಹಿಂದಾಗುವದಯ್ಯ. ಸದ್ಭಕ್ತಿಯಿಂದ ಪಾವನ ಸ್ವರೂಪವಾಗುವರಯ್ಯ. ಲಿಂಗಾಚಾರದಿಂದ ತನ್ನಂಗ ಶುದ್ಧವಾಗುವದಯ್ಯ. ಸದಾಚಾರದಿಂದ ಮನಶುದ್ಧವಾಗುವದಯ್ಯ ಶಿವಾಚಾರದಿಂದ ಧನ ಪ್ರಸಿದ್ಧವಾಗುವದಯ್ಯ. ಗಣಾಚಾರದಿಂದ ನಡೆಪರುಷವಾಗುವದಯ್ಯ. ಭೃತ್ಯಾಚಾರದಿಂದ ನುಡಿ ಪರುಷವಾಗುವದಯ್ಯ. ಕ್ರಿಯಾಚಾರದಿಂದ ಕರ್ಮೇಂದ್ರಿಯಂಗಳು ಪವಿತ್ರವಾಗುವವಯ್ಯ. ಜ್ಞಾನಾಚಾರದಿಂದ ಜ್ಞಾನೇಂದ್ರಿಯಂಗಳು ಪಾವನವಾಗುವವಯ್ಯ. ಭಾವಾಚಾರದಿಂದ ಕರಣಂಗಳು ನಿಜಸ್ವರೂಪವಾಗುವವಯ್ಯ. ಸತ್ಯಾಚಾರದಿಂದ ವಾಯುಗಳು ಮಹಾ ಪ್ರಸಾದವಾಗುವವಯ್ಯ. ಸರ್ವಾಚಾರದಿಂದ ಸರ್ವಾಂಗ ಜ್ಞಾನಜ್ಯೋತಿಯಪ್ಪುದು ತಪ್ಪದು ನೋಡಾ. ಧರ್ಮಾಚಾರದಿಂದ ಲಿಂಗಾಂಗಗಳು ಏಕವಾಗುವವಯ್ಯಾ. "ಲಿಂಗಾಚಾರ ಸದಾಚಾರ ಶಿವಾಚಾರ ಸ್ತಥೈವಚ। ಗಣಾಚಾರ ಭೃತ್ಯಾಚಾರ ಪಂಚಾಚಾರ ಪ್ರಕೀರ್ತಿತಃ ||೧|| ಕ್ರಿಯಾಚಾರ ಜ್ಞಾನಾಚಾರೊ, ಭಾವಾಚಾರ ಸ್ತಥೈವಚ। ಸತ್ಯಾಚಾರೋ ನಿತ್ಯಾಚಾರೊ ಧರ್ಮಾಚಾರವರಾನನೇ ||೨|| ಸರ್ವಾಚಾರ ಸಂಪನ್ನೇನ ಸದಾಸನ್ನಿಹಿತಃ ಶಿವಃ। ಲಿಂಗಾವ ಸಾನಕಾಲೇಸು ದ್ವಾದಶಾಚಾರಕಂ ಶ್ರುಣಿ ||೩|| ಇಂತೆಂದುದಾಗಿ ಸತ್ಕಾಯಕ ಮೊದಲಾದ ಷೋಡಶ ಕಲೆಗಳ ಸದ್ಗುರು ಮುಖದಿಂದ ಚಿದ್ಘನಲಿಂಗವ ಮಾಡಿಕೊಂಡು, ಷೋಡಶವರ್ಣವ ಸದ್ಗುರು ಮುಖದಿಂದ ಚಿದಂಗವ ಮಾಡಿಕೊಂಡು, ಸದ್ಗುರು ಮುಖದಿಂದ ಎರಡಳಿದು ಏಕಸ್ವರೂಪದಿಂದ ಜ್ಯೋತಿಯು ಜ್ಯೋತಿ ಬೆರೆದಂತೆ, ಬಸವ ಮೊದಲಾದ ಪ್ರಮಥಗಣಂಗಳೆಲ್ಲ ಬಯಲೊಳಗೆ ಮಹಾಬಯಲಾದರು ನೋಡಾ ಸಂಗನ ಬಸವೇಶ್ವರಾ.

೨. ಅಯ್ಯಾ ಲಿಂಗಜಂಗಮದನುಮತವಾದ ಕ್ರಿಯಾಜ್ಞಾನದಿಂದ ಅಹುದಾಗದೆಂಬ ಸಂದೇಹಬೇಡ. ಅದೆಂತೆಂದೊಡೆ "ಕ್ರಿಯಾದ್ವೈತನಕರ್ತವ್ಯಂ ಭಾವಾದ್ವೈತಂ ಸಮಾಚರೇತ್। ಜ್ಞಾನಕ್ರಿಯಾ ಸಮಾಯುಕ್ತಂ ಭಾವಶುದ್ಧಂತು ಶಾಂಕರಿ ||೧|| ಇಂತೆಂದುದಾಗಿ ಕೂಡಲ ಚನ್ನಸಂಗಯ್ಯನಲ್ಲಿ ಸಕಲೇಂದ್ರಿಯಂಗಳು ತಲ್ಲೀಯ ತದ್ರೂಪು. ಇಂತು ಚಿಕ್ಕ ದಂಡನಾಥನ ಪ್ರಸನ್ನ ಪ್ರಸಾದದಿಂದ ಅಂತರಂಗದಜ್ಞಾನ ಬಹಿರಂಗದಕ್ರಿಯೆಯ ಸಾಧಿಸು. "ಅಂತರ್ಜ್ಞಾನ ಬಹಿಃ ಕ್ರಿಯಾ ಏಕೀಭಾವ ವಿಶೇಷತಃ। ತತ್ರಭೇದ ನಜಾ

ನಾತಿ ನಚಜ್ಞಾನ ನಚಕ್ರಿಯಾ ||೨|| ನ ಕ್ರಿಯಾರಹಿತಂ ಜ್ಞಾನಂ ನಜ್ಞಾನ ರಹಿತಂ ಕ್ರಿಯಾ| ನಪಶ್ಯಂ ತ್ಯಂಧಕಂ ದಗ್ಧಂ ತಸ್ಯದಾಹತಿ ಪಂಗುಃ ||೩|| ಕ್ರಿಯಾಜ್ಞಾನ ಸ್ತಥಾ ಭಾವಾತ್ ಸ್ಥಾಣೂರ ಮಿತ ತೇಜಸಃ| ಜ್ಞಾನನಂತ ಕ್ರಿಯಾ ನಿಷ್ಠಾ ಸಾಕ್ಷಾದ್ದೇವ ಮಹೇಶ್ವರಃ||೪|| ಇಂತು ಸತ್ಕ್ರಿಯೆ ಸಮ್ಯ ಜ್ಞಾನ ಸದ್ಭಾವವ ಪರಗುರು ವಚನೋಕ್ತಿಯಿಂದಾಚರಿಸಿ ಭಿನ್ನ ಕ್ರಿಯೆ ಜ್ಞಾನವಳಿದು ಹರುಕಿಲ್ಲದ ಚಿಂತಾಲಿನ ತ್ರಾಸಿನಂತೆ ಸಕಲ ಪ್ರಮಥಗಣಂ ಗಳು ನಿರಾಲಂಬ ಮಹಾಲಿಂಗೈಕ್ಯಾನುಭಾವದ ಬೆಳಗಿನೊಳಗೆ ಬಯಲಾ ದರು ನೋಡಾ ಸಂಗನ ಬಸವೇಶ್ವರಾ.

೩. ಅಯ್ಯಾ ಒಂದು ಜೀವಾತ್ಮನೇ ನಾಲ್ಕು ತೆರನಾಗಿಪ್ಪುದಯ್ಯ. ಅದೆಂತೆಂದೊಡೆ, ಒಂದು ಜೀವಾತ್ಮನೇ ಅಂಡಜ ಪ್ರಾಣಿಯಾಗಿರ್ಪುದಯ್ಯ. ಮತ್ತೊಂದು ಜೀವನೆ ಪಿಂಡಜ ಪ್ರಾಣಿ, ಉದ್ಭಿಜ ಪ್ರಾಣಿ, ಜರಾಯುಜ ಪ್ರಾಣಿಯಾಗಿರ್ಪುದಯ್ಯ. ಈ ಚತುರ್ವಿಧ ಜೀವನೊಳಗೆ ೭ಲಕ್ಷ ಮಲ ಜೀವನ, ೭ಲಕ್ಷ ಜಡಜೀವನ, ೭ಲಕ್ಷ ಕುಜೀವನ, ೭ಲಕ್ಷ ದುರ್ಜೀವನ, ೭ಲಕ್ಷ ಕಪಟ ಜೀವನ, ೭ಲಕ್ಷ ಸಂಚಲ ಜೀವನ, ೭ಲಕ್ಷ ವಂಚಕ ಜೀವನ, ೭ಲಕ್ಷ ನಿರ್ಮಲ ಜೀವನ, ೭ಲಕ್ಷ ಅಜಡ ಜೀವನ, ೭ಲಕ್ಷ ಸುಜೀವನ, ೭ಲಕ್ಷ ಸಜ್ಜೀವನ, ೭ಲಕ್ಷ ಪರಮ ಜೀವನ ಈ ತೆರವಾದ ಎಂಬತ್ತುನಾಲ್ಕು ಲಕ್ಷ ಜೀವಿಗಳೆಲ್ಲ, ಶಿವನ ಪೂರ್ವಭಾಗ. ಪ್ರವೃತ್ತಿ ಮಾರ್ಗದ ಕರ್ಮೇಂ ದ್ರಿಯ ಜ್ಞಾನೇಂದ್ರಿಯವೆಂಬ ದ್ವಾದಶೇಂದ್ರಿಯಂಗಳಲ್ಲಿ ಜೀವಿಸುತ್ತಿಪ್ಪ ವಯ್ಯ. ಆ ದ್ವಾದಶ ಜೀವನ ವರ್ತನ ಭೇದದಿಂದ ಒಂದು ಜೀವನೆ ಹನ್ನೆ ರಡು ತೆರನಾಗಿರ್ಪುದಯ್ಯ. ಅದರ ಗುಣಭೇದವೆಂತೆಂದೊಡೆ, ಉಚ್ಛಿಷ್ಟವ ತಿಂದು ಬದುಕುವ ಜೀವನೇ ಮಲಜೀವನೆನಿಸುವನಯ್ಯ. ಚಾಡಿ ಕ್ಷುದ್ರತ ನದಿಂದ ಒಡಲ ಹೊರೆವ ಜೀವನೇ ಜಡಜೀವನೆನಿಸುವನಯ್ಯ. ಕಡೆದು ಹೊಡೆದು ಬಡಿದು ಬಂಧಿಸಿ ಒಡಲಹೊರೆವ ಜೀವನೆ ಕಪಟ ಜೀವನ. ಗಾರುಡಿಗ ವಿದ್ಯದಿಂದ ಒಡಲಹೊರೆವ ಜೀವನೆ ಸಂಚಲ ಜೀವನೆನಿಸುವ ನಯ್ಯ. ದೇಶಕ್ಕೊಂದು ಭಾಷೆ, ದೇಶಕ್ಕೊಂದು ವೇಷವ ಧರಿಸಿ, ಒಡಲ ಹೊರೆವ ಜೀವನೆ, ವಂಚಕ ಜೀವನೆನಿಸುವನಯ್ಯ. ಷಟ್ಕೃಷಿ ವ್ಯಾಪಾರದೊ ಳಗೆ ಆವುದಾನೊಂದು ವ್ಯವಹಾರವಮಾಡಿ ಸತ್ಯದಿಂದ ಬಾಳುವನೆ ನಿರ್ಮ ಲಜೀವನೆನಿಸುವನಯ್ಯ. ಆವ ಮತವಾದರೇನು ಆವ ಜಾತಿಯಾದರೇನು ಘುಲ ಮಾಯಾ ಸಂಸಾರ ಬಂಧಮಂ ತ್ಯಜಿಸಿ, ಅಷ್ಟಾಂಗಯೋಗಮಂ

ತ್ಯಜಿಸಿ, ಶ್ರೀಗುರು ಪರಮಾರಾಧ್ಯನ ಉಪಾವಸ್ಥೆಯಂ ಮಾಡುವನೆ ಸು ಜೀವ ನೆನಿಸುವನಯ್ಯಾ. ಮಹಾಚಿದ್ಘನ ಗುರುದೇವನ ಪ್ರತ್ಯಕ್ಷವ ಮಾಡಿ ಕೊಂಡು, ಘನಗುರುಭಕ್ತಿಯಲ್ಲಿ ನಿಷ್ಠೆಯುಳ್ಳಾತನೆ ಸಜ್ಜೀವನೆನಿಸುವನಯ್ಯಾ ಶ್ರೀಮದ್ಘನ ಗುರುವ ಮೆಚ್ಚಿಸಿ ಇಷ್ಟಪ್ರಾಣ ಭಾವಲಿಂಗವ ಪಡೆದಾತನೆ ಪರಾತ್ಪರ ಪರಮ ಜೀವನೆನಿಸುವನಯ್ಯಾ. ಇಂತೀ ಜೀವನ ಬುದ್ಧಿಯುಗುರು ಕಟಾಕ್ಷದಿಂ ನಿವೃತ್ತಿಯ ಮಾಡಿ ತ್ರಿವಿಧಾಂಗವೆಲ್ಲ ದೀಕ್ಷಾತ್ರಯಂಗಳಿಂದ ಶುದ್ಧ ಪ್ರಸಾದವಾಗಿ, ತ್ರಿವಿಧಮನವೆಲ್ಲ ಶಿಕ್ಷಾತ್ರಯಂಗಳಿಂದ ಸಿದ್ಧಪ್ರಸಾದ ವಾಗಿ, ಭಾವತ್ರಯಂಗಳೆಲ್ಲಾ ಮೋಕ್ಷತ್ರಯಂಗಳಿಂದ ಪ್ರಸಿದ್ಧ ಪ್ರಸಾದ ವಾಗಿ, ಸತ್ಯವಾಣಿ, ಸತ್ಯಪಾಣಿ, ಸತ್ಯಮಾಣಿ ಉಳಿದವಯವಂಗಳೆಲ್ಲಾ ಸತ್ಯವನೆ ಹಾಸಿಹೊದ್ದು ಸತ್ಯಕಾಯಕವನೆ ಮಾಡಿ, ಸತ್ಯ ಭಿಕ್ಷವ ಬೇಡಿ, ಮರ್ತ್ಯದಲ್ಲಿ ಬಂದು ಬಾರದಂತೆ ಸತ್ಯಸದಾಚಾರದಿಂದ ನಡೆನುಡಿ ಸಂಪ ನ್ನರೇ ಕೇವಲ ಪರಮ ಶಿವಗಣಂಗಳು ನೋಡಾ ಸಂಗನ ಬಸವೇಶ್ವರಾ.

ತನಗೂ ಅಷ್ಟಾವರಣಕ್ಕೂ ಇರುವ ಸಂಬಂಧ.

೧. ಅಯ್ಯಾ ಆಚರಣೆಯಲ್ಲಿ ಇಷ್ಟಪ್ರಾಣಭಾವ ಲಿಂಗಗಳಿಗೆ ಗುರು ಚರಭಕ್ತರೆ ಮೂಲ ಚೈತನ್ಯಮೂರ್ತಿ, ಅನಾದಿ ಚಿದ್ಘನಪಾದೋದಕ ಪ್ರಸಾದ ಮಂತ್ರಸ್ವರೂಪ ನೋಡಾ. ಅಯ್ಯಾ ಸಂಬಂಧದಲ್ಲಿ ಗುರುಚರ ಭಕ್ತಂಗೆ ಇಷ್ಟಪ್ರಾಣಭಾವ ಲಿಂಗಂಗಳಿಗೆ ಮೂಲಚೈತನ್ಯಮೂರ್ತಿ ಅನಾದಿ ಚಿದ್ಘನ ಪಾದೋದಕ ಪ್ರಸಾದ ಮಂತ್ರಸ್ವರೂಪ ನೋಡಾ. ಈ ವಿಚಾರವ ನಿನ್ನ ನೀನರಿದಡೆ ಅನಾದಿ ಗುರುಚರಭಕ್ತ ಇಷ್ಟ ಪ್ರಾಣ ಭಾವ ಪಾದೋದಕ ಪ್ರಸಾದ ಮಂತ್ರ ನಿನ್ನ ಸರ್ವಾಂಗದಲ್ಲುಂಟು ನೋಡಾ ಸಂಗನಬಸವೇಶ್ವರಾ.

೧ನೇ ವಿಧ.

೨. ದೀಕ್ಷಾತ್ರಯಂಗಳಲ್ಲಿ ನಿಜಗುರುವ ಸಂಬಂಧವ ಮಾಡಿಕೊಂಡು, ಪೂಜಾತ್ರಯಂಗಳಲ್ಲಿ ನಿಜಲಿಂಗವ ಸಂಬಂಧವ ಮಾಡಿಕೊಂಡು, ಭೋಗ ತ್ರಯಂಗಳಲ್ಲಿ ನಿಜಜಂಗಮವ ಸಂಬಂಧವ ಮಾಡಿಕೊಂಡು, ಕ್ರಿಯಾತ್ರ ಯಂಗಳಲ್ಲಿ ನಿಜಪಾದೋದಕವ ಸಂಬಂಧವ ಮಾಡಿಕೊಂಡು, ಜ್ಞಾನತ್ರ ಯಂಗಳಲ್ಲಿ ನಿಜಪ್ರಸಾದವ ಸಂಬಂಧವ ಮಾಡಿಕೊಂಡು, ಆಚಾರತ್ರಯಂ

ಗಳಲ್ಲಿ ನಿಜ ಚಿದ್ಭಸಿತವ ಸಂಬಂಧವ ಮಾಡಿಕೊಂಡು, ಸರ್ವಾಂಗದಲ್ಲಿ ನಿಜ ರುದ್ರಾಕ್ಷಿಗಳ ಸಂಬಂಧವ ಮಾಡಿಕೊಂಡು, ಪಂಚಾಕ್ಷರ ಷಡಕ್ಷರಂಗಳೇ ನಡೆನುಡಿಯಾಗಿ, ಸಕಲ ಶಾಸ್ತ್ರಾಗಮ ಪುರಾಣಂಗಳೇ ಹಸ್ತಪಾದಂಗಳಾಗಿ ಎರಡೆಂಬತ್ತು ಕೋಟಿ ವಚನಂಗಳೇ ಮಹಾ ಮಂತ್ರಂಗಳ ಸಂಬಂಧವ ಮಾಡಿಕೊಂಡರು ನೋಡಾ. "ಪೂಜಾಮೂರ್ತಿರ್ಭವೇಲ್ಲಿಂಗಂ ದೀಕ್ಷಾಮೂರ್ತಿರ್ಗುರುಸ್ತಥಾ। ಜಂಗಮಂ ಭೋಗಮೂರ್ತ್ಯಂಚ ಸತ್ಯಂ ಸತ್ಯಂ ನ ಸಂಶಯಃ ॥೧॥ ಕ್ರಿಯಾ ಸಂಬಂಧಯೋ ತೀರ್ಥಂ ಜ್ಞಾನ ಸಂಬಂಧ ಶೇಷಯೋ। ಸರ್ವಾಂಗಭೂತಿರುದ್ರಾಕ್ಷಂ ಶರಣಂ ಮಂತ್ರರೂಪಕಃ ॥೨॥ ಇಂತೆಂದುದಾಗಿ ಪರಹಿತಾರ್ಥಕ್ಕೋಸ್ಕರ ಸ್ಥೂಲ ಕಂಥೆಯ ಧರಿಸಿ ನಿರ್ವಂಚಕ ಲೀಲಾಮೂರ್ತಿಯಾಗಿ ಇಂತೀ ಏಕಲಿಂಗ ನಿಷ್ಠಾಪರತ್ವದಿಂದ ಅರಿದಾಚರಿಸುವರೆ ನೂತನ ಸದ್ಭಕ್ತ ಶಿವಶರಣ ಗಣಂಗಳು ನೋಡಾ ಸಂಗನಬಸವೇಶ್ವರಾ.

೨ ನೇ ವಿಧ.

೩. ಆಚಾರ ಅರುಹಿನಲ್ಲಿ ಸತ್ಕ್ರಿಯಾ ಸುಜ್ಞಾನ ಗುರುವ ಸಂಬಂಧವ ಮಾಡಿಕೊಂಡು, ಪಾಣಿ ಪ್ರಾಣದಲ್ಲಿ ಸತ್ಕ್ರಿಯ ಸುಜ್ಞಾನ ಲಿಂಗಸಂಬಂಧವಮಾಡಿಕೊಂಡು, ಆಚರಣೆ ಸಂಬಂಧಗಳಲ್ಲಿ ಸತ್ಕ್ರಿಯಾ ಸುಜ್ಞಾನ ಜಂಗಮವ ಸಂಬಂಧವ ಮಾಡಿಕೊಂಡು, ನಡೆನುಡಿಗಳಲ್ಲಿ ಸತ್ಕ್ರಿಯಾ ಸುಜ್ಞಾನ ಪಾದೋದಕವ ಸಂಬಂಧವ ಮಾಡಿಕೊಂಡು, ಜಿಹ್ವೆನಾಸಿಕದಲ್ಲಿ ಸತ್ಕ್ರಿಯಾ ಸುಜ್ಞಾನ ಪ್ರಸಾದವ ಸಂಬಂಧವ ಮಾಡಿಕೊಂಡು, ಸರ್ವಾಂಗ ಸುಮನ ಸತ್ಕ್ರಿಯಾ ಸುಜ್ಞಾನ ಚಿದ್ವಿಭೂತಿಯ ಸಂಬಂಧವ ಮಾಡಿಕೊಂಡು, ತತ್ತತ್ಸ್ಥಾನಂಗಳಲ್ಲಿ ಚಿದ್ವಕ್ತ್ರನಲ್ಲಿ ಸತ್ಕ್ರಿಯಾ ಸುಜ್ಞಾನ ಚಿದ್ರುದ್ರಾಕ್ಷಿಯ ಸಂಬಂಧವ ಮಾಡಿಕೊಂಡು, ಕ್ರಿಯಾಕಾಶ ಜ್ಞಾನಾಕಾಶಂಗಳಲ್ಲಿ ಸತ್ಕ್ರಿಯಾ ಸುಜ್ಞಾನ ಚಿನ್ಮಂತ್ರವ ಸಂಬಂಧವ ಮಾಡಿಕೊಂಡರು ನೋಡಾ. ಅದೆಂತೆಂದೊಡೆ "ಅಂತರ್ಜ್ಞಾನ ಬಹಿಃಕ್ರಿಯಾ ಏಕೀಭಾವ ವಿಶೇಷತಃ। ಷೋಡಶ ವರ್ಣರೂಪಂಚ ಸಾಕ್ಷಾತ್ ಪ್ರಭು ಮಹೇಶ್ವರೀ" ॥೧॥ ಇಂತೆಂದುದಾಗಿ ಸೂಕ್ಷ್ಮ ಕಂಥೆಯ ಧರಿಸಿ ಸಚ್ಚಿದಾನಂದ ಲೀಲಾಮೂರ್ತಿಗಳಾಗಿ ಇಂತು ಉಭಯ ವಿಚಾರವಿಡಿದು ಆಚರಿಸುವರೆ ಅನಾದಿ ಸದ್ಭಕ್ತ ಶಿವಶರಣಗಣಂಗಳು ನೋಡಾ ಸಂಗನ ಬಸವೇಶ್ವರಾ.

೩ ನೇ ವಿಧ.

೪. ತನುತ್ರಯಂಗಳಲ್ಲಿ ಕ್ರಿಯಾಗುರು ಜ್ಞಾನಗುರು ಮಹಾಜ್ಞಾನ ಗುರು ಸಂಬಂಧವ ಮಾಡಿಕೊಂಡು, ಮನತ್ರಯಂಗಳಲ್ಲಿ ಕ್ರಿಯಾಲಿಂಗ ಜ್ಞಾನಲಿಂಗ ಮಹಾಜ್ಞಾನಲಿಂಗವ ಸಂಬಂಧವ ಮಾಡಿಕೊಂಡು, ಭಾವ ತ್ರಯಂಗಳಲ್ಲಿ ಕ್ರಿಯಾಜಂಗಮ ಜ್ಞಾನಜಂಗಮ ಮಹಾಜ್ಞಾನಜಂಗಮವ ಸಂಬಂಧವ ಮಾಡಿಕೊಂಡು, ಆತ್ಮತ್ರಯಂಗಳಲ್ಲಿ ಕ್ರಿಯಾಪಾದೋದಕ ಜ್ಞಾನಪಾದೋದಕ ಮಹಾಜ್ಞಾನಪಾದೋದಕ ಸಂಬಂಧವ ಮಾಡಿಕೊಂಡು, ಅವಸ್ಥಾ ತ್ರಯಂಗಳಲ್ಲಿ ಕ್ರಿಯಾಪ್ರಸಾದ, ಜ್ಞಾನಪ್ರಸಾದ, ಮಹಾಜ್ಞಾನಪ್ರಸಾದವ ಸಂಬಂಧವ ಮಾಡಿಕೊಂಡು, ಕರಣ ತ್ರಯಂಗಳಲ್ಲಿ ಕ್ರಿಯಾಭಸಿತ, ಜ್ಞಾನಭಸಿತ, ಮಹಾಜ್ಞಾನಭಸಿತವ ಸಂಬಂಧವ ಮಾಡಿಕೊಂಡು, ಜೀವತ್ರಯಂಗಳಲ್ಲಿ ಕ್ರಿಯಾರುದ್ರಾಕ್ಷಿ, ಜ್ಞಾನರುದ್ರಾಕ್ಷಿ, ಮಹಾಜ್ಞಾನರುದ್ರಾಕ್ಷಿಗಳ ಸಂಬಂಧವ ಮಾಡಿಕೊಂಡು, ಗುಣತ್ರಯಂಗಳಲ್ಲಿ ಕ್ರಿಯಾಮಂತ್ರ, ಜ್ಞಾನಮಂತ್ರ, ಮಹಾಜ್ಞಾನಮಂತ್ರಗಳ ಸಂಬಂಧವ ಮಾಡಿಕೊಂಡರು ನೋಡಾ. ಅದೆಂತೆಂದೊಡೆ "ತ್ರಿತನುಂ ಗುರುಸಂಬಂಧಂ ತ್ರಿಮಲಂ ಲಿಂಗಸಂಯುತಂ। ತ್ರಿಭಾವ ಜಂಗಮಶ್ಚೈವ ತ್ರಿಯಾತ್ಮತೀರ್ಥರೂಪಕಂ ॥೧॥ ತ್ರಿಯಾವಸ್ಥೇ ಶೇಷರೂಪಂ ಕರಣಂ ಭೂತಿರೂಪಕಂ। ತ್ರಿಜೀವ ಅಕ್ಷಮಾಲಿಕ್ಯಂ ತ್ರಿಗುಣಂ ಮಾತ್ರರೂಪಕಂ ॥೨॥ ಆಗಮಾಚಾರ ಲಿಂಗಂಚ ಆತ್ಮಂಚಗುರು ಲಿಂಗಕಂ। ತತ್ಪ್ರಾಣ ಶಿವಲಿಂಗಂಚ ಇಂದ್ರಿಯಂ ಚರಲಿಂಗಕಂ ॥೩॥ ವಿಷಯಂಚ ಪ್ರಸಾದಾಖ್ಯಂ ತೃಪ್ತಿಶ್ಚ ಮಹಾಲಿಂಗಕಂ। ಸರ್ವಾಂಗ ಷಡು ಲಿಂಗಂಚ ಷಟ್ಸ್ಥಲ ಬ್ರಹ್ಮಮುಚ್ಯತೆ॥೪॥ ಶಿವಾಂಗ ಇಷ್ಟಲಿಂಗಂಚ ಮನಸ್ತತ್ಪ್ರಾಣ ಲಿಂಗಯೋಃ। ಆತ್ಮಾನಂ ಭಾವಲಿಂಗಶ್ಚ ತ್ರಿವಿಧಂ ಜ್ಯೋತಿರೂಪಕಂ ॥೫॥ ಇಂತೆಂದುದಾಗಿ ಕಾರಣ ಕಂಥೆಯ ಧರಿಸಿ ತ್ರಿವಿಧ ವಿಚಾರವಿಡಿದು ಆಚರಿಸುವಡೆ ಅನಾದಿ ಸದ್ಭಕ್ತ ಶಿವಶರಣಗಣಂಗಳು ನೋಡಾ ಸಂಗನ ಬಸವೇಶ್ವರಾ.

ಗುರುಮಹಾತ್ಮೆ.

೧. ಗುರುವೇ ಸಕಲಲೋಕ ಜನಕನಯ್ಯ, ಸರ್ವಲೋಕ ಜನನಿಯಯ್ಯ. ಗುರುವೇ ಸಮಸ್ತ ಕುಟುಂಬಿಯಯ್ಯ, ಸ್ವತಂತ್ರನಯ್ಯ. ಗುರುವೇ

ಘನ ಮಹಿಮನಯ್ಯ, ಮುಕ್ತಿಗೆ ಮೂಲಾಧಾರನಯ್ಯ. ಗುರುವೇ ಸುರು ಚಿರ ಭೇದ್ಯನಯ್ಯ, ಸತ್ಕ್ರಿಯಾಜ್ಞಾನಕ್ಕೆ ಮಂದಿರನಯ್ಯ. ಗುರುವೇ ಕಾಲ ಹರನಯ್ಯ, ಕರ್ಮಹರನಯ್ಯ, ದುರಿತಹರನಯ್ಯ, ಪಾಪಹರನಯ್ಯ. ಗುರುವೇ ದೀಕ್ಷಾಕಾರಣ ಶಿಕ್ಷಾಕಾರಣ ಮೋಕ್ಷಕಾರಣನಯ್ಯ. ಪರಮಾ ಮೃತ ಸುಧಾರಸವಯ್ಯ. ಗುರುವೇ ಭಕ್ತಿಗೆ ಬೀಜವಯ್ಯ. ಅನಾಚಾರ ಸಂಹ ರನಯ್ಯ, ದುಷ್ಟ ನಿಗ್ರಹನಯ್ಯ, ಶಿಷ್ಟ ಪರಿಪಾಲನಯ್ಯ, ಸ್ತುತಿನಿಂದೆ ರಹಿ ತನಯ್ಯ. ಗುರುವೇ ಅಪ್ರಮಾಣನಯ್ಯ, ಅಗಮ್ಯ ಅಗೋಚರನಯ್ಯ. ಕಾಮಧೇನು ಕಲ್ಪವೃಕ್ಷ ನೋಡಾ. "ಗುರುಃಪಿತಾ ಗುರುರ್ಮಾತಾ ಗುರುರೇ ವೈವಬಾಂಧವಃ। ಗುರುದೈವಾತ್ಪರಂನಾಸ್ತಿ ತಸ್ಮೈ ಶ್ರೀ ಗುರವೇನಮಃ। ನಮುಕ್ತಿರ್ನಚ ಧರ್ಮಂಚ ನಪುಣ್ಯಂಚ ನಪಾಪ ನಕರ್ಮ ಜನ್ಮನಶ್ಚರ್ಯ ಗುರುಪಾದ ನಿರೀಕ್ಷಣಾತ್" ಗುರುವಿನಿಂ ಪೆರತೊಂದು ಅಧಿಕ ವಸ್ತುವಿಲ್ಲ ಸಂಗನ ಬಸವೇಶ್ವರಾ.

ಲಿಂಗ ಮಹಾತ್ಮೆ.

೧. ಶ್ರೀಗುರುವಿನ ಕರಂಗಳು ಹೃದಯ ಮಧ್ಯದಲ್ಲಿ ಉದಯವಾದ ಇಷ್ಟಮಹಾಲಿಂಗವೇ ಪರಮ ಪಾವನವಯ್ಯ. ಆ ಮಹಾಲಿಂಗವೇ ಪರಮ ಪ್ರಕಾಶವಯ್ಯ. ಆ ಮಹಾಲಿಂಗವೇ ಪರಂಜ್ಯೋತಿ ಸ್ವರೂಪವಯ್ಯ. ಆ ಮಹಾಲಿಂಗವೇ ಪರಮ ನಿಷ್ಕಳಂಕನಯ್ಯ, ಚಿದ್ಘನವಸ್ತುವಯ್ಯ. ಆ ಮಹಾ ಲಿಂಗವೇ ಚಿನ್ಮಯ ಸ್ವರೂಪನಯ್ಯ. ಆ ಮಹಾಲಿಂಗವೇ ಚಿದಾನಂದ ಮೂರ್ತಿಯಯ್ಯಾ, ಚಿತ್ಪ್ರಕಾಶ ಮೂರ್ತಿಯಯ್ಯಾ. ಆ ಮಹಾಲಿಂಗವೇ ಚಿದ್ರೂಪ ಮೂರ್ತಿಯಯ್ಯಾ. ಸಹಜ ಸನ್ಮಾರ್ಗ ಸ್ವರೂಪನಯ್ಯಾ. ಆ ಮಹಾಲಿಂಗವೇ ಸತ್ತುಚಿತ್ತಾನಂದ ಮೂರ್ತಿಯಯ್ಯಾ. ಸರ್ವ ಸಾಕ್ಷಿಕ ಮೂರ್ತಿಯಯ್ಯಾ. ಸರ್ವ ಚೈತನ್ಯ ಮೂರ್ತಿಯಯ್ಯಾ. ಆ ಮಹಾಲಿಂಗವೇ ಸರ್ವಾಂತರ್ಯಾಮಿ ನೋಡಾ. ಅದೆಂತೆಂದೊಡೆ "ಲಿಂಗಮಧ್ಯೆ ಜಗತ್ಸರ್ವಂ ತ್ರೈಲೋಕ್ಯ ಸಚರಾಚರಂ। ಲಿಂಗಬಾಹ್ಯಪರಂ ನಾಸ್ತಿ ತಸ್ಮಾತ್ ಲಿಂಗಂ ಪ್ರಪೂಜಯೇತ್ ॥೧॥ ಲೀಯತೆ ಗಮ್ಯತೆ ಯತ್ರ ಯೇನಸರ್ವ ಚರಾಚರಂ। ತದೇವಲಿಂಗಮಿತ್ಯುಕ್ತಂ ಲಿಂಗತತ್ವಪರಾಯಣೈಃ ॥೨॥" ಎಂಬುದಾಗಿ

ಇಷ್ಟ ಮಹಾಚಿದ್ಘನಲಿಂಗವೇ ಸರ್ವ ತತ್ವಂಗಳಿಗೆ ಮೂಲಾಧಾರ ಮೂರ್ತಿ ನೋಡಾ ಸಂಗನ ಬಸವೇಶ್ವರಾ.

೨. ಆ ಮಹಾಲಿಂಗವೇ ಚಿನ್ನಾದ ಮೂರ್ತಿನೋಡಾ. ಪರನಾದ ಮೂರ್ತಿನೋಡಾ. ಪ್ರಣವನಾದ ಮೂರ್ತಿನೋಡಯ್ಯ. ಆ ಮಹಾಲಿಂಗವೇ ಮಹಾನಾದ ಮೂರ್ತಿಯಯ್ಯ. ಚಿದ್ಬಿಂದು ಮೂರ್ತಿ ನೋಡಯ್ಯ. ಆ ಮಹಾಲಿಂಗವೇ ಪರಬಿಂದು ಮೂರ್ತಿಯಯ್ಯ ಪ್ರಣವ ಬಿಂದು ಮೂರ್ತಿಯಯ್ಯಾ. ಆ ಮಹಾಲಿಂಗವೇ ಮಹಾ ಬಿಂದು ಮೂರ್ತಿಯಯ್ಯಾ. ಚಿತ್ಕಲಾಮೂರ್ತಿಯಯ್ಯಾ, ಪರಕಲಾ ಮೂರ್ತಿಯಯ್ಯಾ- ಆ ಮಹಾಲಿಂಗವೇ ಪ್ರಣವ ಸ್ವರೂಪ ಕಲಾಮೂರ್ತಿಯಯ್ಯಾ. ಪೂರ್ಣ ಕಲಾಮೂರ್ತಿಯಯ್ಯಾ. ಮಹಾಕಲಾ ಮೂರ್ತಿಯಯ್ಯಾ ಗೋಳಾಕಾರ ಪ್ರಣವ ಮೂರ್ತಿ ನೋಡಯ್ಯ. ಗಣಿತಕ್ಕೆ ಅಗಣಿತ ನೋಡಾ. ಅದೆಂತೆಂದೊಡೆ “ ಆಕಾಶಂ ಲಿಂಗಮಿತ್ಯಾಹುಃ ಪ್ರಥ್ವೀತಸ್ಯಾದಿಪೀಠಕಂ । ಆಲಯಂ ಸರ್ವ ಭೂತಾನಿ ಆಯಾನಾಂ ಲಿಂಗಮುಚ್ಯತೆ ||೧|| ಲಿಂಗಮಧ್ಯೆ ಭವೇನ್ಮಂತ್ರಂ ಮಂತ್ರ ಮಧ್ಯೇ ಭವೇಲ್ಲಿಂಗಂ । ಲಿಂಗಮಂತ್ರದ್ವಯೋರ್ಮುಕ್ತಂ ಇಷ್ಟಲಿಂಗಂತು ಶಾಂಕರೀ ||೨|| ” ಇಂತೆಂದುದಾಗಿ ಚಿದ್ಘನ ಮಹಾಲಿಂಗವೇ ಮಂತ್ರ ಮೂರ್ತಿ ನೋಡಾ ಸಂಗನ ಬಸವೇಶ್ವರಾ.

ಲಿಂಗವನ್ನು ಬಿಟ್ಟು ಇತರ ದೇವತೆಗಳನ್ನು ಪೂಜಿಸ ಬಾರದು.

೧. ಅಂಗದ ಮೇಲೆ ಲಿಂಗವ ಧರಿಸಿ ಶಿವಭಕ್ತರೆಂದು ಹೇಳಿ, ಶಿವಾಚಾರದ ಮಾರ್ಗವಬಿಟ್ಟು, ಭವಿಶೈವ ದೈವಗಳಿಗೆ ಲಿಂಗವಡಿಯಾಗಿ ಅಡ್ಡಬಿದ್ದು ಶರಣೆಂಬ ಹೊಲೆಯರಿಗೆ ಚಂದ್ರ ಸೂರ್ಯರುಳ್ಳನಕ್ಕ ಇಪ್ಪತ್ತೆಂಟು ಕೋಟಿ ನರಕ ತಪ್ಪದು ಕಾಣಾ ಸಂಗನ ಬಸವೇಶ್ವರಾ.

೨. ಕಾಳಿಕಾ ಚಾಮುಂಡಿ ಗಂಗೆ ಗೌರಿ ಬನಶಂಕರಿ ಎಲ್ಲಿ ಎಕ್ಕ ಎಕ್ಕನಾದಿ ಹುಲಿಗಿ ಹುಸೂರಿ ಸತ್ತವರು ಹೆತ್ತವರು ಇಂತೀ ಹಲವು ಪಿಶಾಚಿಗಳ ಹೆಸರಿನಿಂದ ಇದಿರಿಟ್ಟು ಆರಾಧಿಸಿ ಆದರ ನೈವೇದ್ಯವೆಂದು ಶ್ರೀಗುರು ವಿತ್ತ ಲಿಂಗಕ್ಕೆ ತೋರಿಸಿ ಭುಂಜಿಸುವ ಶಿವದ್ರೋಹಿಗಳಿಗೆ ಗುರುವಿಲ್ಲ, ಲಿಂಗವಿಲ್ಲ, ಜಂಗಮವಿಲ್ಲ, ಪಾದೋದಕ ಪ್ರಸಾದವಿಲ್ಲ ಕಾಣಾ ಸಂಗನ ಬಸವೇಶ್ವರಾ.

ಅಂತರ್ಲಿಂಗದ ಸ್ವರೂಪು.

೧ ಆಯ್ಯಾ ಷೋಡಶ ಕಮಲಂಗಳಲಿ ನೆಲಸಿರ್ಪ ಲಿಂಗಂಗಳ ಭಿಧಾನವ ಕರುಣಿಸಬೇಕಯ್ಯಾ ಶ್ರೀಗುರುನಾಥನೇ. ಕೇಳಯ್ಯ ಎನ್ನ ಕಂಗಳ ಹೃದಯಂಗಳಲ್ಲಿ ನೆಲಸಿರ್ಪ, ಪರಕುಮಾರ ಶಿಷ್ಯೋತ್ತಮನೇ, ಸುಚಿತ್ತ ಕಮಲದಲ್ಲಿ ಆಚಾರ ಲಿಂಗವಾಗಿ ನೆಲಸಿರ್ಪುದಯ್ಯ. ಸುಬುದ್ಧಿ ಕಮಲ ದಲ್ಲಿ ಗುರುಲಿಂಗವಾಗಿ ನೆಲಸಿರ್ಪುದಯ್ಯ. ನಿರಹಂಕಾರ ಕಮಲದಲ್ಲಿಶಿವ ಲಿಂಗವಾಗಿ ನೆಲಸಿರ್ಪುದಯ್ಯ. ಸುಮನ ಕಮಲದಲ್ಲಿ ಜಂಗಮಲಿಂಗ ವಾಗಿ ನೆಲಸಿರ್ಪುದಯ್ಯ. ಸುಜ್ಞಾನ ಕಮಲದಲ್ಲಿ ಪ್ರಸಾದ ಲಿಂಗವಾಗಿ ನೆಲ ಸಿರ್ಪುದಯ್ಯ. ಸದ್ಭಾವ ಕಮಲದಲ್ಲಿ ಮಹಾಲಿಂಗವಾಗಿ ನೆಲಸಿರ್ಪುದಯ್ಯ. ನಿರುಪಾಧಿ ಕಮಲದಲ್ಲಿ ಚಿದ್ಘನ ಲಿಂಗವಾಗಿ ನೆಲಸಿರ್ಪುದಯ್ಯ. ನಿಃಪ್ರ ಪಂಚ ಕಮಲದಲ್ಲಿ ಚಿತ್ಪ್ರಾಣಲಿಂಗವಾಗಿ ನೆಲಸಿರ್ಪುದಯ್ಯ. ಇಂತೀ ಸಾಕಾ ರವಾದ ಅಷ್ಟದಳ ಕಮಲಂಗಳಲ್ಲಿ ಅಷ್ಟವಿಧ ಲಿಂಗಂಗಳಾಗಿ ನೆಲಸಿರುವಾ ತನು ತಾನೇ ನೋಡಾ. ಇನ್ನು ನಿರಾಕಾರವಾದ ಅಷ್ಟದಳ ಕಮಲಂಗಳಾ ವವೆಂದೊಡೆ, ನಿರಾಲಂಬ ಕಮಲದಲ್ಲಿ ನಿಃಕಳಲಿಂಗವಾಗಿ ನೆಲಸಿರ್ಪುದು ನೋಡಾ. ನಿರಾತಂಕ ಕಮಲದಲ್ಲಿ ನಿಃಶೂನ್ಯ ಲಿಂಗವಾಗಿ ನೆಲಸಿರ್ಪು ದಯ್ಯ. ನಿಃಕಾಮ್ಯ ಕಮಲದಲ್ಲಿ ನಿರಂಜನ ಲಿಂಗವಾಗಿ ನೆಲಸಿರ್ಪುದಯ್ಯ. ನಿಃಪ್ರಪಂಚ ಕಮಲದಲ್ಲಿ ನಿಃಪ್ರಪಂಚ ಲಿಂಗವಾಗಿ ನೆಲಸಿರ್ಪುದಯ್ಯ. ಸಚ್ಚಿ ದಾನಂದ ಕಮಲದಲ್ಲಿ ಸಚ್ಚಿದಾನಂದ ಲಿಂಗವಾಗಿ ನೆಲಸಿರ್ಪುದಯ್ಯ. ನಿರ್ನಾಮ ಕಮಲದಲ್ಲಿ ನಿರ್ನಾಮ ಲಿಂಗವಾಗಿ ನೆಲಿಸಿರ್ಪುದಯ್ಯ. ನಿರಾಳ ಕಮಲದಲ್ಲಿ ನಿರಾಳ ಲಿಂಗವಾಗಿ ನೆಲಸಿರ್ಪುದಯ್ಯ. ಸುರಾಳ ಕಮಲದಲ್ಲಿ ಸುರಾಳ ಲಿಂಗವಾಗಿ ನೆಲಸಿರ್ಪುದು ನೋಡಾ. ಇಂತು ಸಾಕಾರ ನಿರಾಕಾರ ಲೀಲೆಯಿಂದ ತಿಳಿದುಪ್ಪ ಹೆರೆದುಪ್ಪದೋಪಾದಿಯಲ್ಲಿ ಷೋಡಶ ಕಮಲಂಗ ಳಲ್ಲಿ ಷೋಡಶ ಲಿಂಗಂಗಳಾಗಿ ನೆಲಸಿರ್ಪ ಅನಾದಿ ನಿಃಕಳಂಕ ಜ್ಯೋತಿ ರ್ಮಯ ಪರಶಿವಲಿಂಗ ಪ್ರಭು ತಾನೇ ನೋಡಾ. ಸಂಗನ ಬಸವೇಶ್ವರಾ.

೨. ಆಯ್ಯಾ ಪರಕುಮಾರ ದೇಶಿಕೇಂದ್ರನೆ ನಿನ್ನಾದಿ ಮಧ್ಯಾವಸಾನ ಸ್ವರೂಪವಾದ ಶ್ರೀಗುರುಲಿಂಗ ಜಂಗಮದ ಕರುಣಾಕಟಾಕ್ಷೆಯಿಂದ ದಶ ವಿಧ ಲಿಂಗಂಗಳ ಪಡೆದು, ಆ ಲಿಂಗ ನಿಷ್ಠಾಪರತ್ವದಿಂದ ನಿನ್ನ ಪ್ರಾಣನ ಮಧ್ಯದಲ್ಲಿ ನೆಲಿಸಿರ್ಪ ದಶವಿಧ ಚಿದ್ವಾಯುಗಳು ದಶವಿಧ ಸುನಾದಗಳು

ದಶವಿಧ ಸತ್ಕರಣಂಗಳನ್ನು ಮಹಾ ಜ್ಯೋತಿರ್ಮಯ ಲಿಂಗದತ್ತ ಮುಖ ನಾಗಿ ನೋಡಲು ಮಹಾ ಶರಣಗಣ ಮಾರ್ಗದ ಬಟ್ಟೆಬಯಲು ನಿಜಾಚ ರಣೆ ದೊರೆವುದು ನೋಡಾ. ಇಂತು ಮಹಾ ಪ್ರಮಥಗಣಂಗಳಾಚರಿಸಿದ ಸನ್ಮಾರ್ಗವನರಿದಾಚರಿಸಿದರೆ ನಿನ್ನಿಂದ ಬಿಟ್ಟು ಪರವಸ್ತು ಇಲ್ಲ ನೋಡಾ ಸಂಗನ ಬಸವೇಶ್ವರಾ.

೩. ಅಯ್ಯಾ ಎನ್ನ ಕರ ಮನ ಭಾವ ಕಂಗಳ ಕೊನೆಯಲ್ಲಿ ಬೆಳಗುವ ಪರಂಜ್ಯೋತಿ ಮೂರ್ತಿ ಕೇಳಾ. ನಿತ್ಯ ನಿಜಾನಂದ ಪರಿಪೂರ್ಣದಿರವೆ ಆದಿಯಲ್ಲಿ ಪ್ರಸಾದವಯ್ಯಾ, ಅಂತ್ಯದಲ್ಲಿ ಪ್ರಸಾದವಯ್ಯ, ಮಧ್ಯದಲ್ಲಿ ಪದಾ ರ್ಥವಯ್ಯ. ಈ ಪ್ರಸಾದ ಪದಾರ್ಥವನರಿಯದವರೆಲ್ಲಾ ಹುಟ್ಟಂಧಕರೆಂಬೆ ನಯ್ಯ. ಈ ಪ್ರಸಾದ ಪದಾರ್ಥವ ಭೇದಿಸಿ ಬಸವಣ್ಣ ಬಯಲಾದ. ಚನ್ನ ಬಸವಣ್ಣ ಸಿದ್ಧರಾಮ ಅಜಗಣ್ಣ ಮರುಳಶಂಕರ ನೀಲಲೋಚನೆ ಅಕ್ಕ ಮಹಾದೇವಿ ಮುಕ್ತಾಂಗನೆ ಮೊದಲಾದ ಮಹಾ ಚಿದ್ಘನಗಣಂಗಳೆಲ್ಲ ಜ್ಯೋತಿರ್ಮಯವಾದರು ನೋಡಾ. ಮತ್ತು ಸಚ್ಚಿದಾನಂದ ನಿಜದಿಂದ ಭೇದಿಸಿ ಆನಂದ ಜಲವುಕ್ಕಿ ಅತಿ ಮೋಹದಿಂದ ಪದವನೆ ನೂರೆಂಟೆಳೆಯ ದಾರವ ಮಾಡಿ ಅರ್ಥವನೆನವ ವರ್ಣಯುಕ್ತವಾದ ಮಣಿಯಮಾಡಿ ಮಹಾ ಪರಿಪೂರ್ಣ ಜ್ಞಾನವೆಂಬ ರಂಧ್ರವ ರಚಿಸಿ ಮಹಾ ಚಿದ್ಘನ ಪ್ರಕಾ ಶವೆಂಬ ಬಣ್ಣವನಿಟ್ಟು ಒಂದು ದಾರದಲ್ಲಿ ೧೨ ಮಣಿಯ ಪವಣಿಸಿದರಯ್ಯ ಮತ್ತೊಂದು ದಾರದಲ್ಲಿ ೨೪ ಮಣಿಯನ್ನು ಮತ್ತೊಂದರಲ್ಲಿ ೩೬ ಮಣಿ ಯನ್ನು ಮಿಗಿಲೊಂದು ದಾರದಲ್ಲಿ೪೮ ಮಣಿಯ ಪವಣಿಸಿದರಯ್ಯ. ಮತ್ತೊಂ ದರಲ್ಲಿ ೭೨ ಮತ್ತೊಂದರಲ್ಲಿ ೮೪ ಮತ್ತೊಂದರಲ್ಲಿ ೯೬ ಮತ್ತೊಂದರಲ್ಲಿ ೧೦೮ ಮತ್ತೊಂದರಲ್ಲಿ ೨೧೬ ಮತ್ತೊಂದರಲ್ಲಿ ೪೩೨ ಮತ್ತೊಂದರಲ್ಲಿ ೮೬೪ ಮತ್ತೊಂವರಲ್ಲಿ ೧೭೨೮ ಮತ್ತೊಂದು ದಾರದಲ್ಲಿ ಅನಂತನಂತ ಮಣಿ ಗಳ ಪವಣಿಸಿದರಯ್ಯಾ. ಈ ಪ್ರಕಾರದಿಂದ ಹದಿಮೂರೆಳೆಯ ಮಣಿ ಗಳ ಸರಗೊಳಿಸಿ ಆಯಾಯ ಸರದ ಎಸಳುಗಳ ಮಧ್ಯದಲ್ಲಿ ಮುತ್ತು ಮಾಣಿಕ್ಯ ನವರತ್ನ ಪ್ರಕಾಶಕ್ಕೆ ಮಿಗಿಲಾದ ಮಹಾ ಜ್ಯೋತಿರ್ಮಯ ಶ್ರೀ ಗುರುಲಿಂಗ ಜಂಗಮವೆಂಬ ಮಹಾ ಪ್ರಸಾದವ ಪದಕವ ಮಾಡಿ ರಚಿಸಿ ಅಂಗಲಿಂಗ ಪ್ರಾಣಲಿಂಗ ಭಾವಲಿಂಗವೆಂಬ ವುಭಯ ಚಿನ್ನ ವಳಿದು ಮಹಾ ಬೆಳಗಿನೊಳಗೆನ್ನಿಂದು ಸರ್ವಾವಸ್ಥೆಗಳಿಲ್ಲದೆ ಕಂಠಾಭರಣವ ಮಾಡಿ ಧರಿಸಿ ಮಹಾ ಪರಿಪೂರ್ಣ ಮಹಾ ಪ್ರಕಾಶವೆಂಬ ಮಹಾ ಚಿದ್ಘನ

ಪ್ರಸಾದ ಭಾಜನದಲ್ಲಿ ಪರಿಪೂರ್ಣರಾಗಿ ಸತ್ಯ ಸದಾಚಾರ ಸತ್ಕ್ರಿಯಾಯುಕ ಸದ್ಭಕ್ತಿಯಾನಂದ ಸತ್ಕ್ರಿಯೆ ಸಮ್ಯಜ್ಞಾನದ ಬೆಳಗಿನೊಳಗಣ ಮಹಾ ಬೆಳಗ ಸಾಧಿಸಿ ಅನಾದಿಯ ಬಯಲೊಳಗಣ ಮಹಾ ಬಯಲೊಳಗೆ ಜನಿತರಾಗಿ ಚತುರ್ಮುಖನ ಜಡಸಂಸಾರಕ್ಕೊಳಗಾಗದೆ ಯದ್ದೃಷ್ಟಂತನ್ನಷ್ಟಂ ಎಂದುದಾಗಿ ಮತ್ತೆ ಮರಳಿ ಬಯಲೊಳಗಣ ಮಹಾ ಬಯಲಾದರು ನೋಡಾ ಸಂಗನಬಸವೇಶ್ವರಾ.

ಜಂಗಮ.

೧. ಹರಹರಾ ಶಿವಶಿವಾ ಕರುಣಾಕರ ಮತ್ಪ್ರಾಣನಾಥ ಮಹಾಪ್ರಭು ಜಂಗಮವೇ, ಸರ್ವಥಾ ಪರಬ್ರಹ್ಮ ಘನ ಗಂಭೀರ ಪರತತ್ವ ಮೂರ್ತಿ ನೋಡಾ ಜಂಗಮವೇ, ನಿರುಪಮ ನಿರವಯ ನೋಡಾ. ನಿಶ್ಚಿಂತ ನಿಷ್ಕಳಂಕ ನೋಡಾ. ಜಂಗಮವೇ ಸ್ವಯಚರ ಪರವಸ್ತು ನೋಡಯ್ಯ. ಭೂರುದ್ರ ಮೂರ್ತಿ ನೋಡಯ್ಯ. ಸತ್ಯ ಸದಾಚಾರ ಮೂರ್ತಿ ನೋಡಯ್ಯ. ಜಂಗಮವೇ ಸತ್ಕ್ರಿಯಾ ಸಮ್ಯಜ್ಞಾನ ಮೂರ್ತಿ ನೋಡಯ್ಯ. ಸದ್ಭಕ್ತಿ ಪ್ರಿಯ ಜಂಗಮವೆ ಗುರುಲಿಂಗ ಭಕ್ತಂಗೆ ಹರಣ ಕಿರಣ ಚೈತನ್ಯ ಮೂರ್ತಿ ನೋಡಯ್ಯ. ಪರಮಾನಂದ ಪರಿಣಾಮಿ ನೋಡಯ್ಯ. ಜಂಗಮವೇ ಸಚ್ಚಿದಾನಂದ ಮೂರ್ತಿ ನೋಡಯ್ಯ. ಜಗತ್ಪಾವನ ಮೂರ್ತಿ ನೋಡಯ್ಯ ಕಾರಣಾವತಾರ ಮೂರ್ತಿ ನೋಡಯ್ಯ. ಜಂಗಮವೆ ಅಂಗಲಿಂಗ ವೆರಡಕೆ ಹರಣ ಕಿರಣ ಚೈತನ್ಯ ಮೂರ್ತಿ ನೊಡಯ್ಯ ಅದೆಂತೆಂದೊಡೆ " ಭೂಸುರೋ ಬ್ರಾಹ್ಮಣಶ್ಚೈವ ಭೂರುದ್ರೋ ಜಂಗಮಸ್ತಥಾ । ಸುರರುದ್ರದ್ವಯೋರ್ಮಧ್ಯೇ ರುದ್ರಯೋರ್ವವಿಶೇಷಿತಃ ॥೧॥ ನಾದ ಬಿಂದು ಕಲಾತೀತಂ ವೇದಶಾಸ್ತ್ರಾತಿವರ್ತನಂ । ಆದಿ ಮಧ್ಯಾಂತರಹಿತಂ ನಿಶ್ಯಾನಂದಾತ್ಮಕಂ ನಿಜಂ ॥೨॥ ಎಂದುದಾಗಿ ಜಂಗಮವೇ ಸದ್ಭಕ್ತ ಮಾಹೇಶ್ವರರ ಸದ್ಧರ್ಮ ಸರ್ವಾಚಾರ ಸಂಪತ್ತಿನಾಚರಣೆಗೆ ಕಾರಣ ಕರ್ತ ನೋಡಾ ಸಂಗನಬಸವೇಶ್ವರಾ.

೨. ಅಯ್ಯಾ ಜಂಗಮನೆಂದೊಡೆ ಬಾಯಲೆಕ್ಕವೇ? ಜಂಗಮವೆಂದೊಡೆ ಉಪಾಧಿಕನೆ? ಜಂಗಮವೆಂದೊಡೇನು ಸ್ತ್ರೀಲಂಪಟನೆ? ಈ ಗುಣವುಳ್ಳವನ ಚರ ಜಂಗಮ ವೆಂಬೆನೆ? ಎನ್ನೆನು. ಈ ಪಾತಕದ ನುಡಿಯ ಕೇಳಲಾಗದು. ಜಂಗಮನೆಂತವನೆಂದೊಡೆ, ನಿರ್ಲೇಪ ನಿರುಪಾಧಿಕ

ನಿರ್ಬೋಧ, ನಿರಾಶ್ರಿತ ನಿಷ್ಕಾರಣ ನಿರ್ಲಂಪಟ. ಜಂಗಮ ಈ ಷಡ್ಗುಣ ಭರಿತನಾದೊಡೆ ಜಂಗಮವೆಂಬೆನಯ್ಯ. ಇಂತಿಪ್ಪುದೆ ಕಾರಣವಾಗಿ ಪ್ರಭು ದೇವರೇ ಶರಣೆಂದು ಬದುಕನೇ ಬಸವಣ್ಣ? ಇವರಿಬ್ಬರು ಒಕ್ಕುದಕೊಂಡು ನಾನು ಬದುಕಿದೆನು ಕಾಣಾ. ಇಂತು ಪ್ರಮಥಗಣಮಾರ್ಗದಲ್ಲಿ ದೃಢ ಚಿತ್ತ ದಿಂದ ನಿಂದ ಮಹಂತ ಶರಣಂಗೆ ನಾನು ನೀನು, ಗುರುವು ಶಿಷ್ಯ, ಭಕ್ತ ಜಂಗಮ, ಸತಿಪತಿ, ತಂದೆ ಮಗನೆಂಬ, ಉಭಯ ಶಬ್ದ ಉಂಟೆ ನೋಡಾ ಸಂಗನಬಸವೇಶ್ವರಾ?

ಪ್ರಸಾದ.

೧. ಅಯ್ಯಾವರಕುಮಾರ ದೇಶಿಕೋತ್ತಮನೇ ಕೇಳಾ. ಕಲ್ಯಾಣ ಪಟ್ಟಣದ ಅನುಭಾವ ಮಂಟಪದಲ್ಲಿ ಬಸವ ಮೊದಲಾದ ಪ್ರಮಥರೆಲ್ಲ ಚನ್ನಬಸವರಾಜೇಂದ್ರಂಗೆ ಮಹಾಲಿಂಗೈಕ್ಯಾನುಭಾವವ ಬೆಸಗೊಳಲು, ಅದೇ ಪ್ರಸಾದವ ನಿನಗೆ ಅರುಹಿಸಿ ಕೊಟ್ಟೆವು ಕೇಳಾ ನಂದಿ ಸಂಗನ ಬಸ ವೇಶ್ವರಾ.

೨. ಆದಿಯನು ಲಿಂಗಮುಖದಲ್ಲಿ ಅರ್ಪಿತವ ಮಾಡಿ, ಅನಾದಿ ಯನು ಲಿಂಗಮುಖದಲ್ಲಿ ಅರ್ಪಿತವ ಮಾಡಿ, ಮನವೆಂಬುದ ನಿರಾಕಾರದಲ್ಲಿ ನಿಲಿಸಿ, ಪರಿಣಾಮ ಪ್ರಸಾದದಲ್ಲಿ ತದ್ಗತನಾಗಿ ಪ್ರಸಾದವೇ ಪ್ರಾಣ ಪ್ರಸಾದವೇ ಜ್ಞಾನ ಪ್ರಸಾದವೇ ಧ್ಯಾನ ಪ್ರಸಾದವೇ ಭೋಗವಾಗಿಪ್ಪ ಸಂಗಮೇಶ್ವರ ಲಿಂಗ ದಲ್ಲಿ ಮರುಳ ಶಂಕರದೇವನ ನುಪಮಿಸಬಾರದು ನೋಡಾ ಬಸವಣ್ಣ.

೩. ಬಸವಣ್ಣ ಚನ್ನಬಸವಣ್ಣ ಪ್ರಭುದೇವ ಮರುಳ ಶಂಕರ ಸಿದ್ಧ ರಾಮಯ್ಯ ಅಜಗಣ್ಣ ಅಕ್ಕನಾಗಲೆ ನೀಲಲೋಚನೆ ಮುಕ್ತಾಂಗನೆ ಮಹಾ ದೇವಿಯಕ್ಕ ಮೊದಲಾದ ಮಹಾ ಪ್ರಮಥಗಣಂಗಳೆಲ್ಲ ಸುಗಂಧದೊಳಗಣ ಮಹಾ ಗಂಧ ಪ್ರಸಾದವ ಕೊಂಡರಯ್ಯ. ಸುರಸದೊಳಗಣ ಮಹಾ ರಸಪ್ರ ಸಾದವ ಕೊಂಡರಯ್ಯಾ. ಸುರೂಪಿನೊಳಗಣ ಮಹಾ ಸ್ಪರ್ಶನ ಪ್ರಸಾದವ ಕೊಂಡರಯ್ಯ. ಇಂತೀ ಸುಗಂಧ ಸುರಸ ಸುರೂಪು ಸುಶಬ್ದ ಸತ್ತು ಚಿತ್ತಾ ನಂದ ಮೂರ್ತಿ ಶ್ರೀಗುರು ಲಿಂಗ ಜಂಗಮಕ್ಕೆ ಪವಿತ್ರ ಮುಖದಿಂದ ಸಮ ರ್ಪಿಸಿ ಅವರೊಕ್ಕು ಮಿಕ್ಕ ಪ್ರಸಾದವ ಹಾರೈಸಿ ಪರತತ್ವ ಲಿಂಗಮುಖದಲ್ಲಿ

ನಿಜ ಪ್ರಸಾದವೆಂದು ಸಂಬಂಧಿಸಿ ನಿರವಯ ಸಮಾಧಿಸ್ಥರಾದರು ನೋಡಾ. ಅಂದಿನ ಮಹಾಗಣಂಗಳ ಚಿತ್ರ್ಪಭೆಯೆ ಇಂದಿನ ಗುರುಲಿಂಗಜಂಗಮದ ಪಾದೋದಕ ಪ್ರಸಾದವೆಂದು ನಿರ್ವಂಚಕತ್ವದಿಂದ ಪ್ರಸಾದದೊಳಗಣ ಮಹಾ ಪ್ರಸಾದವೆಂದರಿದು ಆಚರಿಸುವ ನಿತ್ಯ ತೃಪ್ತಿಯೇ ಘನ ಪ್ರಸಾದ. ಆ ಪ್ರಸಾದವೇ ಪರಮಾನಂದ. ಈ ವಿಚಾರವನರಿದುಕೊಂಡು ಕೊಡಬಲ್ಲಾತನೆ ಸದ್ಗುರು ಲಿಂಗ ಜಂಗಮ ಪಾದೋದಕಪ್ರಸಾದ. ಈ ಗುರುಲಿಂಗ ಜಂಗಮ ಪಾದೋದಕ ಪ್ರಸಾದವನರಿದು ಕೊಳಬಲ್ಲಾತನೆ ಸದ್ಭಕ್ತ ಪ್ರಸಾದಿ ಶಿವಶರಣ ನೋಡಾ. ಈ ವಿಚಾರವನರಿಯದೆ ಕೊಟ್ಟು ಕೊಂಬ ಭ್ರಷ್ಟರನೇನೆಂಬೆನಯ್ಯ? ಆದಿ ಅನಾದಿಯಿಂದತ್ತತ್ತ ಮೀರಿ ತೋರುವ ಸದ್ಗುರು ಲಿಂಗ ಜಂಗಮದಿಂದ ಸದ್ಗುರು ಲಿಂಗ ಜಂಗಮ ಸದ್ಭಕ್ತಿ ಪ್ರಸಾದಿ ಶರಣತ್ವದ ವಿಚಾರವ ತಿಳಿದು ಮಹಾಗಣಂಗಳಿಗೆ ಪಾತಕ ಸೂತಕ ದರಿದ್ರ ದುಃಖಗಳು ಬಂದು ತಟ್ಟಲುಂಟೆ? ಅದೆಂತೆಂದೊಡೆ “ ಯಥಾ ಅಗ್ನಿ ಸ್ತಥಾ ಕಾಷ್ಠಂ ಯಥಾ ಕ್ಷೀರ ತಥಾ ಘೃತಂ। ಯಥಾ ಜ್ಯೋತಿ ಸ್ತಥಾ ಸಾರಂ ಸರ್ವತ್ರಾವಸ್ಥಿತಂ ಕಲಾ ॥೧॥ ಯಥಾ ಕಲಾ ತಥಾ ಭಾವಂ ಯಥಾ ಭಾವ ಸ್ತಥಾ ಮನಃ। ಯಥಾ ಮನ ಸ್ತಥಾ ದೃಷ್ಟಿಃ ಯಥಾ ದೃಷ್ಟಿ ಸ್ತಥಾ ಶಿವಃ॥೨॥ ಇಂತೆಂದುದಾಗಿ ಅಗ್ನಿಯಲ್ಲಿ ದಗ್ಧವಾದಕಾಷ್ಠಂಗಳಿಗೆ ಮರಳಿ ಅಗ್ನಿಯುಂಟೆ? ಕ್ಷೀರವಳಿದು ಘೃತವಾದ ಮೇಲೆ ಮರಳಿ ಕ್ಷೀರವಪ್ಪುದೆ? ಜ್ಯೋತಿಯಲ್ಲಿ ಘನಸಾರ ಮರಳಿ ಸಾಕಾರವಪ್ಪುದೆ? ಸರ್ವಾವಸ್ಥೆಯಲ್ಲಿ ಪರತತ್ವ ಮೂರ್ತಿಯಲ್ಲಿ ಕೂಡಿದ ಸದ್ಭಕ್ತ ಮರಳಿ ಭವಿಯಪ್ಪನೆ? ಜಾತಿಸೂತಕ ಪಾತಕವಳಿದ ಸದ್ಭಕ್ತ ಶರಣಗಣಂಗಳ ಭಾವಮನದೃಷ್ಟ ಅವಸ್ಥೆಗಳೆಲ್ಲ ಪರಶಿವಲಿಂಗ ಪ್ರಕಾಶ ನೋಡಾ. ಅಂದಿಂದು ಎಂಬ ಸಂದೇಹವಳಿದು ಕೃತಿಗುರು ಸ್ವಾನುಭಾವದಿಂದ ಅಂಗಲಿಂಗವೆಂಬುಭಯ ಭೇದವಳಿದು ತ್ರಿವಿಧದೀಕ್ಷೆ ತ್ರಿವಿಧ ಸ್ವಸ್ವರೂಪು ನಿಲುಕಡೆ ತ್ರಿವಿಧ ಗುರುಲಿಂಗಜಂಗಮ ತ್ರಿವಿಧ ಪಾದೋದಕ ಪ್ರಸಾದ ತ್ರಿವಿಧ ಚಿದ್ವಿಭೂತಿ ರುದ್ರಾಕ್ಷಿ ಮಂತ್ರ ತ್ರಿವಿಧಾಚಾರ ಭಕ್ತಿ ಜ್ಞಾನ ವೈರಾಗ್ಯವಿಡಿದಾಚರಿಸುವ ಭಕ್ತಗಣಂಗಳ ಕಾಯವೇ ಚಿತ್ಕಾಯ. ಅವರಂಗಮನಃ ಪ್ರಾಣಭಾವಂಗಳೇ ಮಹಾಘನ ನಿಜಪ್ರಸಾದಪಾದೋದಕ ನೋಡಾ ಸಂಗನ ಬಸವೇಶ್ವರಾ.

೪. ಅಷ್ಟಾಷಷ್ಟಿಕೋಟಿ ತೀರ್ಥಮಿಂದರಿಲ್ಲ ಕಾಣಿರಣ್ಣಾ. ಲಕ್ಷಕೋಟಿ ಜಪವ ಮಾಡಿದರಿಲ್ಲ. ಧ್ಯಾನ ಮೌನ ಹೋಮನೇಮ ಅನುಷ್ಠಾನವ ಮಾಡಿ

ದರಿಲ್ಲ ಕಾಣಿರಣ್ಣ. ಅನಂತ ವೇಳೆ ಸೂರ್ಯಚಂದ್ರ ಭೂಪ್ರದಕ್ಷಿಣೆ ಮಾಡಿ ದರಿಲ್ಲ. ಕಾಶಿ ಕೇದಾರ ಹಂಪೆ ಗಯಾ ಪ್ರಯಾಗ ರಾಮೇಶ್ವರ ಶ್ರೀಶೈಲ ಹೇಮಾದ್ರಿ ರಜತಾದ್ರಿ ಮಹಾಮೇರು ಹಿಮವತ್ಕೇದಾರ ವೀರಣ್ಣ ಶಿವಗಂಗೆ ಅಮರಗುಂಡ ಗೋಕರ್ಣ ಹೋದರಿಲ್ಲ ಕಾಣಿರಣ್ಣ. ಇವೆಲ್ಲ ಕುಚಿತ್ತ ಕುಬುದ್ಧಿ ಅಹಂಕಾರ ಕುಮನ ಅಜ್ಞಾನ ದುರ್ಭಾವ ಮೊದಲಾದ ಕರಣೇಂದ್ರಿಯಂಗಳು ತನ್ನ ತನು ತುಂಬಿ, ಬರಿಯ ಭ್ರಾಂತು ಕಾಣಿರಣ್ಣ. ಇನ್ನು ನಿಜವಸ್ತು ಪರಶಿವಲಿಂಗವಿಪ್ಪ ಠಾವಹೇಳಿಹೆ. ಶ್ರೀಗುರು ಕರುಣಾಕಟಾಕ್ಷೆಯಿಂ ಕರುಣಿಸಿಕೊಟ್ಟ ಪರಶಿವಲಿಂಗವ ಮನತುಂಬಿ ಭಾವತುಂಬಿ ಕರತುಂಬಿ ಕಂಗಳುತುಂಬಿ ಹೃದಯತುಂಬಿ ಸರ್ವಾಂಗತುಂಬಿ ಹಲವು ಕಡೆಗೆ ಹರಿದಾಡುವ ಹಂಸನಾತ್ರ ಜೀವಧ್ಯಾನ ಮೌನ ನೇಮ ನಿತ್ಯ ಸತ್ಯ ಸದ್ಭಾವವೆಂಬ ಹಸ್ತದಲ್ಲಿ ಪಿಡಿದು, ಆ ಮಹಾಲಿಂಗವೆಂಬ ಸ್ತಂಭದಲ್ಲಿ ಕಟ್ಟಿ, ಆ ಹಸ್ತದಲ್ಲಿಪ್ಪ ಘನಮಹಾ ಪರಶಿವಲಿಂಗವ ಕೂಡಿ ನೆರೆಯ ಬಲ್ಲರೆ ಇದೇ ನಿಶ್ಚಯ ಕಾಣಾ. ಶ್ರೀಗುರು ಲಿಂಗ ಜಂಗಮದ ಕರುಣಾ ಕಟಾಕ್ಷೆಯಿಂದ ಅಂಗದ ಮೇಲೆ ಪರಶಿವಲಿಂಗವ ಧರಿಸಿದ ಶಿವಭಕ್ತ ಶಿವಭಕ್ತೆ ಶಿವಪುತ್ರರಿಗೆ ಶ್ರೀಗುರು ದೇವನೇ ಕುಲದೈವವಯ್ಯಾ. ಚಿಷ್ಠನ ಇಷ್ಟಮಹಾಲಿಂಗವೇ ಮನೆ ದೈವವಯ್ಯಾ. ಇಂತೀ ಕುಲದೈವ ಮನೆದೈವವ ಕಂಡು, ಅರ್ಥ ಪ್ರಾಣಾಭಿಮಾನಂಗಳ ಸಮರ್ಪಿಸಿ ಕಾಯದ ಮಧ್ಯದಲ್ಲಿ ನೆಲಿಸಿರ್ಪ ಇಷ್ಟಲಿಂಗದೇವಂಗೆ ಕಾಯವನರ್ಪಿಸಿ, ಮನ ಮಧ್ಯದಲ್ಲಿ ನೆಲಿಸಿರ್ಪ ಪ್ರಾಣಲಿಂಗ ದೇವಂಗೆ ಮನವನರ್ಪಿಸಿ, ಭಾವದಮಧ್ಯದಲ್ಲಿ ನೆಲಿಸಿರ್ಪ ಭಾವಲಿಂಗ ದೇವಂಗೆ ಭಾವನನರ್ಪಿಸಿ, ಪ್ರಾಣದಲ್ಲಿ ನೆಲಿಸಿರ್ಪ ಆಚಾರ ಲಿಂಗದೇವಂಗೆ ಸುಗಂಧವನರ್ಪಿಸಿ, ಜಿಹ್ವೆಯ ಮಧ್ಯದಲ್ಲಿ ನೆಲಿಸಿರ್ಪ ಗುರುಲಿಂಗದೇವಂಗೆ ಸುರಸವನರ್ಪಿಸಿ, ನೇತ್ರ ಮಧ್ಯದಲ್ಲಿ ನೆಲಿಸಿರ್ಪ ಜಂಗಮ ಮಹಾಲಿಂಗ ದೇವಂಗೆ ಸುಸ್ಪರ್ಶನವನರ್ಪಿಸಿ, ಶ್ರೋತ್ರದ ಮಧ್ಯದಲ್ಲಿ ನೆಲಿಸಿರ್ಪ ಪ್ರಸಾದ ಲಿಂಗದೇವಂಗೆ ಸುಶಬ್ದವನರ್ಪಿಸಿ, ಹೃದಯ ಮಧ್ಯದಲ್ಲಿ ನೆಲಿಸಿರ್ಪ ಮಹಾ ಲಿಂಗದೇವಂಗೆ ಸುತೃಪ್ತಿಯನರ್ಪಿಸಿ, ಅರುಹಿನ ಮಧ್ಯದಲ್ಲಿ ನೆಲಿಸಿರ್ಪ ನಿಃಕಲ ಲಿಂಗದೇವಂಗೆ ತನ್ನ ನಿತ್ಯ ಸುನಿಜವನರ್ಪಿಸಿ, ಸುಜ್ಞಾನದ ಮಧ್ಯದಲ್ಲಿ ನೆಲಿಸಿರ್ಪ ಶೂನ್ಯ ಲಿಂಗದೇವಂಗೆ ಮಹಾಸಂತೃಪ್ತಿಯ ಪರಿಣಾಮವನರ್ಪಿಸಿ ಇಂತೀ ಏಕಾದಶ ಸ್ಥಾನದಲ್ಲಿ ನೆಲಿಸಿರ್ಪ ಜ್ಯೋತಿರ್ಮಯ ಪರತತ್ವಲಿಂಗಕ್ಕೆ ಏಕಾದಶ ಭಕ್ತಿವಿಡಿದು ಏಕಾದಶ ಸುಪದಾರ್ಥವನರ್ಪಿಸಿ ನಿಜಸದ್ಭಕ್ತಿ ನೈಷ್ಠೆ

ಕರಿಗೊಂಡು ಅವರ ಒಕ್ಕುಮಿಕ್ಕ ಪರಿಣಾಮ ಪ್ರಸಾದದಲ್ಲಿ ನಿಮ್ಮ ಶರಣರು ಲೋಲುಪ್ತರಲ್ಲದೆ ಉಳಿದ ಜಡಜೀವಿಕರ್ಮ ಭೂಭಾರಿ ಕಣ್ಣಗೆಟ್ಟಣ್ಣಗಳೆತ್ತ ಬಲ್ಲರಯ್ಯ ನಿಮ್ಮ ನಿಜಾಚರಣೆಯ ನಿಲುಕಡೆಯ ನಿಜಪ್ರಸಾದವ? ಇಂತು ಮಹಾ ಪ್ರಮಥ ಗಣಂಗಳೆಲ್ಲ ಆಚಾರವನುವನರಿದು ಸನ್ಮಾರ್ಗದಿಂದಾಚರಿಸಿ ನುಡಿದಂತೆ ನಡೆದು ಎರಡೆಂಬತ್ತುಕೋಟಿ ವಚನವ ನುಡಿದು ಜ್ಞಾನೋದಯವಾಗಿ ಬಂದ ಸದ್ಭಕ್ತ ಶಿಷ್ಯೋತ್ತಮಂಗೆ ಪಂಚಮಹಾ ಪಾತಕ ಸೂತಕಂಗಳ ಬಿಡಿಸಿ, ಇಷ್ಟಲಿಂಗ ಬಾಹ್ಯವಾದ ಶಿವಮಾರ್ಗವ ಹರಿದು ತ್ರಿವಿಧ ದೀಕ್ಷಾಕರ್ತೃವಾದ ಇಷ್ಟಲಿಂಗವ ಸರ್ವಾಂಗದಲ್ಲಿ ಸಂಬಂಧಿಸಿ ನಿಜ ವೀರಶೈವ ಸನ್ಮಾರ್ಗವ ಬೋಧಿಸಿ ಸದ್ಭಕ್ತಿ ಸತ್ಕಾಯಕ ಸತ್ಕ್ರಿಯೆ ಸಮ್ಯಜ್ಞಾನ ಸದ್ಭಾವ ಸದಾಚಾರವೆಂಬ ಷಟ್‌ಸ್ಥಲ ಸಂಪದವನಿತ್ತರು ನೋಡಾ ಸಂಗನ ಬಸವೇಶ್ವರಾ.

೫. ಇಂತು ಸದ್ಗುರು ಕರಜಾತರು ಪಂಚಪಾತಕ ಪಂಚಸೂತಕವ ಹೊರ್ದಲಾಗದು. ಶೈವಮಾರ್ಗವ ಮೆಟ್ಟಲಾಗದು. ಪ್ರಮಥರಾಚರಿಸಿದ ಸನ್ಮಾರ್ಗವನುಳಿದು ಶೈವ ಜಡಜೀವಿಗಳ ಮಾರ್ಗದ ಸೋಂಕಿನಲ್ಲಿ ಅರ್ಚನಾರ್ಪಣ ಕ್ರಿಯೆಗಳನಾಚರಿಸಲಾಗದು. ದಾಕ್ಷಿಣ್ಯದಿಂದ ಅನಾಚಾರದುರ್ಜೀವಿಗಳ ಸಮಪಂಕ್ತಿಯಲ್ಲಿ ಅರ್ಪಿತವ ಮಾಡಲಾಗದು. ಷಡ್ವಿಧ ಶೀಲವ್ರತಾಚಾರ ಹೀನರಲ್ಲಿ ಪಾದೋದಕ ಪ್ರಸಾದವಕೊಳಲಾಗದು. ಪ್ರಮಥರಾಚರಿಸಿದ ಪೂಜಾ ಪೂಜಕತ್ವವ ತಿಳಿದು, ತ್ರಿಕೂಟಗಿರಿ ಸಂಗಮದಲ್ಲಿ ನೆಲಿಸಿರ್ಪ ಮಹಾಪ್ರಭು ತಾನೇ ನೋಡಾ ಸಂಗನ ಬಸವೇಶ್ವರಾ.

ಇಷ್ಟ ಲಿಂಗಾರ್ಪಣ.

ಅಯ್ಯಾ ಚಿದ್ಘನ ತೀರ್ಥವ ಇಷ್ಟಲಿಂಗಾರ್ಪಿತವ ಮಾಡುವ ವಿಚಾರವೆಂತೆಂದೊಡೆ, ಗುರುಲಿಂಗ ಮುಖದಲ್ಲಿ ಅಚ್ಚ ಪ್ರಸಾದ ಸ್ವರೂಪವಾದ ಇಷ್ಟಲಿಂಗಕ್ಕರ್ಪಿತವಯ್ಯ. ಗುರುಲಿಂಗ ಶಿವಲಿಂಗ ಮುಖದಲ್ಲಿ ಆಚರಣೆ ಸಂಬಂಧದಿಂದೆ ನಿಚ್ಚಪ್ರಸಾದ ಸಮಯಪ್ರಸಾದ ಸ್ವರೂಪವಾದ ಇಷ್ಟಲಿಂಗಕ್ಕರ್ಪಿತವಯ್ಯ. ಗುರುಲಿಂಗ ಶಿವಲಿಂಗ ಜಂಗಮಲಿಂಗ ಮುಖದಲ್ಲಿ ತ್ರಿವಿಧಾಚರಣೆಯ ಕರ್ತೃವಾದುದರಿಂದ ಸ್ವಯಚರ ಪರಗುರು ಮೂರ್ತಿ ಚಿತಲಾಪ್ರಸಾದ ಸ್ವರೂಪವಾದ ಇಷ್ಟಲಿಂಗ ದೇವಂಗೆ ಅರ್ಪಿತವಯ್ಯ. ಆ ನಿಲುಕಡೆ ಎಂತೆಂದೊಡೆ ಶ್ರೀಗುರುಲಿಂಗಜಂಗಮವು ಹಸ್ತಮಸ್ತಕ ಸಂಯೋ

ಗವ ಮಾಡಿ ವೇಧಾಮಂತ್ರ ಕ್ರಿಯಾದೀಕ್ಷೆಯ ಕರುಣಿಸುವಲ್ಲಿ ಕರಕಮಲದ ದಶಾಂಗುಳಮಧ್ಯ ಮೊದಲಾಗಿ ದ್ವಾದಶಪ್ರಣವಲಿಂಗಮೂರ್ತಿಗಳ ಮೂವತ್ತಾರು ಪ್ರಣವರೂಪಿನಿಂದ ಸಂಬಂಧಿಸಿರ್ಪರಯ್ಯಾ. ಇಂತು ಸಂಬಂಧವ ಗುರುಕಟಾಕ್ಷೆಯಿಂದ ತಿಳಿದು ಷಡಕ್ಷರ ಮಂತ್ರಸ್ವರೂಪವಾದ ದಕ್ಷಿಣಹಸ್ತದಿಂದ ಷಡಕ್ಷರ ಮಂತ್ರಸ್ವರೂಪವಾದ ವಾಮಹಸ್ತ ಕಮಲದಲ್ಲಿ ನೆಲಸಿರ್ಪ ಚಿದ್ಘನ ಇಷ್ಟಲಿಂಗ ದೇವಂಗೆ ಆಯಾಸ್ಥಲ ಬಂದು ಒದಗಿದಲ್ಲಿ ಮಕಾರ ಶಿಕಾರ ವಕಾರ ಅನಾಮಿಕ ಮಧ್ಯಾಂಗುಳಿ ತರ್ಜನಿ ಮೊದಲಾದ ತ್ರಿವಿಧಂಗುಳಿಗಳಲ್ಲಿ ತ್ರಿವಿಧಲಿಂಗ ಮಂತ್ರಗಳಿಂದ ಇಷ್ಟಮಹಾಲಿಂಗ ರೂಪಿತವ ಮಾಡಿ ಭೋಗಿಸ ಬಲ್ಲಡೆ ಅಚ್ಚ ಸ್ವಯಂಭು ಪ್ರಸಾದಲಿಂಗ ಶರಣನೆಂಬೆ ನೋಡಾ ಸಂಗನ ಬಸವೇಶ್ವರಾ.

ಚಿದ್ಘನ ಲಿಂಗಾರ್ಪಣ.

ಅಯ್ಯಾ ಗುರು ಜಂಗಮದ ಪಾದೋದಕ ಪ್ರಸಾದವ ಚಿದ್ಘನಲಿಂಗಕ್ಕರ್ಪಿತವ ಮಾಡಿಕೊಂಬಲ್ಲಿ, ಆಲಿಂಗ ಮೊದಲೋ ಗುರುಚರ ಮೊದಲೋ ಆ ವಿಚಾರವೆಂತೆಂದೊಡೆ. ಅನಾದಿ ಗುರು ಜಂಗಮದ ಪಾದೋದಕ ಪ್ರಸಾದವ ಚಿದ್ಘನ ಲಿಂಗಕ್ಕೆ ಅರ್ಪಿತವ ಮಾಡಿಕೊಂಬಲ್ಲಿ ಬೀಜಲಿಂಗ ಆದಿಬೀಜ ಗುರುಚರ ಇಂತು ಉಭಯವನರಿತಲ್ಲಿ ಗುರುಚರಕ್ಕೆ ಚಿದ್ಘನಲಿಂಗವೇ ಆದಿ ಅನಾದಿ. ಚಿದ್ಘನ ಲಿಂಗಕ್ಕೆ ಗುರುಚರವೇ ಆದಿ ಅನಾದಿ ಇಂತೀ ವಿಚಾರವತಿಳಿದಲ್ಲಿ, ಚಿದ್ಘನಲಿಂಗವ ಬಿಟ್ಟು ಗುರುಚರ ಉಂಟೆ? ಗುರುಚರನಬಿಟ್ಟು ಚಿದ್ಘನ ಲಿಂಗ ಉಂಟೆ? ಇವು ಮೂರು ಒಂದೇ ವಸ್ತುವಯ್ಯಾ. ಆವರಿಂದ ಆಚರಣೆಗೋಸ್ಕರ ಗುರುಭಕ್ತನಾಗಿ ಪೂಜೆಗೆ ನಿಂತಿರ್ಪುದಯ್ಯಾ. ಲಿಂಗಜಂಗಮವಾಗಿ ಪೂಜ್ಯಕ್ಕೆ ನಿಂತಿರ್ಪುದಯ್ಯಾ. ಅದೆಂತೆಂದೊಡೆ, "ಅಕಾಯಂ ಭಕ್ತಕಾಯಂಚ ಮಹಾಕಾಯಸ್ತು ಭಕ್ತಯೋಃ" ಇ ತೆಂದುದಾಗಿ ಗುರು ಭಕ್ತನಾಗಿರ್ಪುದಯ್ಯಾ. "ಮಹತೋ ಲಿಂಗರೂಪೇಣ ಮಹತೋ ಜಂಗಮಸ್ತಥಾ" ಇಂತೆಂದುದಾಗಿ ಲಿಂಗಜಂಗಮವಾಗಿರ್ಪುದಯ್ಯಾ. ಇಚ್ಛೆಅನಿಚ್ಛೆ ಬೇಕು ಬೇಡೆನ್ನದೆ ಗುರುಭಕ್ತರಿಂದ ಬಂದುದ ಕೈಕೊಂಡು ಸಂತೃಪ್ತಿಯಲ್ಲಿರ್ಪುದೆ ಲಿಂಗ ಜಂಗಮ. ಇದನರಿದ ಮೇಲೆ ಮತ್ತೊಂದು ಪ್ರಕಾರ ಪ್ರಸಾದ ಉಂಟು. ಅದರವಿಚಾರವೇನೆಂದೊಡೆ, ಗುರುವ ಮುಟ್ಟದ್ದು ಪ್ರಸಾದವೆಂಬೆನೆ? ಅಲ್ಲಲ್ಲ ಅದೇನು ಕಾರಣವೆಂದೊಡೆ, ಅನಾದಿ ಲಿಂಗ ತೋರಲರಿಯನಾಗಿ.

ಲಿಂಗ ಮುಟ್ಟಿದ್ದು ಪ್ರಸಾದವೆಂಬೆನೆ? ಅಲ್ಲಲ್ಲ. ಅದೇನು ಕಾರಣವೆಂದೊಡೆ, ಅಷ್ಟವಿಧಾರ್ಚನೆ ಷೋಡಶೋಪಚಾರಕ್ಕೆ ಒಳಗಾಯಿತ್ತಾಗಿ. ಜಂಗಮ ಮುಟ್ಟಿದ್ದು ಪ್ರಸಾದವೆಂಬೆನೆ? ಅಲ್ಲಲ್ಲ. ಅದೇನು ಕಾರಣವೆಂದೊಡೆ, ಅಶಿ ಆಮಿಷಕ್ಕೊಳಗಾಯಿತ್ತಾಗಿ. ಮತ್ತೆಂತುಂಟು? ಗುರು ಲಿಂಗ ಜಂಗಮ ಪ್ರಸಾದ ಅನಾದಿ ಲಿಂಗವನರಿತು ಅಸ್ವತನುವೇ ಅಷ್ಟವಿಧಾರ್ಚನೆಯಾಗಿ ಮಲಮಾಯಾ ಪಾಶದಾಶಯುವ ನೀಗಿ ನಿಂದಡೆ ಗುರುಲಿಂಗಜಂಗಮ. ಆತತಟ್ಟಿದ್ದು ಮುಟ್ಟಿದ್ದೆಲ್ಲ ಮಹಾ ಪ್ರಸಾದ ನೋಡಾ. ಲಿಂಗವಿಲ್ಲದ ಜಂಗಮ ಜಂಗಮವಿಲ್ಲದ ಲಿಂಗ ಈ ಲಿಂಗ ಜಂಗಮ, ಜಂಗಮ ಲಿಂಗವೆಂಬ ವಿಚಾರವನರಿಯುವ ಗುರುಭಕ್ತರೆಂತೋ ಮರುಳೆ? ಅದಕ್ಕೆ ಸಾಕ್ಷಿ" ಉಭೌ ಕಾಮಾದಿಚಶಕ್ತಿ ಉಭಯಾತ್ರಮ ಆತ್ರನಃ। ಲಿಂಗಜಂಗಮ ತೀರ್ಥಂಚ ಜಂಗಮಂ ಲಿಂಗ ಶೇಷಯೋಃ ॥೧॥ ಇಂತೆಂದುದಾಗಿ ಲಿಂಗಜಂಗಮದಲ್ಲಿ ಚಿಪ್ಪನ ತೀರ್ಥವಕೊಂಡು ಜಂಗಮಲಿಂಗದಲ್ಲಿ ಚಿಪ್ಪನ ಮಹಾ ಪ್ರಸಾದವ ಮುಗಿಯಬಲ್ಲಾತನೇ ಆದಿ ಅನಾದಿಯಿಂವತ್ತತ್ತ, ಮೀರಿತೋರುವ ಗುರುಭಕ್ತ ಶರಣಪ್ರಸಾದ ಲಿಂಗಮೂರ್ತಿ ತಾನೆ ನೋಡಾ ಸಂಗನಬಸವೇಶ್ವರಾ.

ನಿಜಪ್ರಸಾದಿ.

೧. ಅಯ್ಯಾ ನಿರಾಲಂಬ ನಿಃಕಳಂಕ ನಿಃಪ್ರಪಂಚತ್ವದಿಂದ ನಾಲ್ವತ್ತೆಂಟು ಪ್ರಣವ ಸ್ಮರಣೆಯಿಂದ ಏಕಾದಶ ಲಿಂಗಂಗಳಿಗೆ ಏಕಾದಶಪ್ರಸಾದವ ಸಮರ್ಪಿಸಿ ತಾನಾ ಸಂತೃಪ್ತಿ ಮಹಾ ಪ್ರಸಾದದಲ್ಲಿ ಲೋಲುಪ್ತನಾದಡೆ ನಿಜಪ್ರಸಾದಿ ಎಂಬೆ ನೋಡಾ. ಅದರ ವಿಚಾರವೆಂತೆಂದೊಡೆ, ನಾಲ್ವತ್ತೆಂಟು ಪ್ರಣವದೊಳಗೆ ದ್ವಾದಶ ಪ್ರಣವ ಸ್ಮರಣೆಯಿಂದ ಪಂಚೇಂದ್ರಿಯ ವಿರಹಿತ ಪ್ರಸಾದ. ಕರಣ ಚತುಷ್ಟಯ ವಿರಹಿತ ಪ್ರಸಾದಲಿಂಗಪ್ರಸಾದವ ಶಿವಲಿಂಗ ಜಂಗಮಲಿಂಗ ಪ್ರಾಣಲಿಂಗ ದೇವಂಗೆ ನಿರಹಂಕಾರ ಸುಮನ ನಿರಾಲಂಬ ಹಸ್ತದಿಂದ ಸಮರ್ಪಿಸಿ ಆ ತೃಪ್ತಿಯ ಲೋಲುಪ್ತಿಯಲ್ಲಿ ತಾನಾದೊಡೆ ಅನಾದಿ ನಿಃಕಾಮ್ಯ ಶೂನ್ಯಲಿಂಗಸ್ವರೂಪ ಚನ್ನಬಸವರಾಜನೆಂಬೆ ನೋಡಾ. ಇಪ್ಪತ್ತುನಾಲ್ಕು ಪ್ರಣವದೊಳಗೆ ದ್ವಾದಶ ಪ್ರಣವ ಸ್ಮರಣೆಯಿಂದ ಸಮತಾಪ್ರಸಾದ ಪ್ರಸಾದಿಯ ಪ್ರಸಾದ ಜಂಗಮಪ್ರಸಾದವ ಪ್ರಸಾದಲಿಂಗ ಮಹಾಲಿಂಗ ಭಾವಲಿಂಗ ದೇವಂಗೆ ಜ್ಞಾನ ಸದ್ಭಾವ ನಿಃಪ್ರ

ಪಂಚ ಹಸ್ತದಿಂದ ಸಮರ್ಪಿಸಿ ಆ ಪರಿಣಾಮ ಲೋಲುಪ್ತಿಯಲ್ಲಿ ತಾನಾದೊಡೆ, ಅನಾದಿ ನಿರಂಜನ ಜಂಗಮ ಸ್ವರೂಪು ಪ್ರಭುದೇವನೆಂಬೆ ನೋಡಾ. ಇನ್ನುಳಿದ ದ್ವಾದಶ ಪ್ರಣವ ಸ್ಮರಣೆಯಿಂದ ಸದ್ಭಾವಪ್ರಸಾದ ಜ್ಞಾನಪ್ರಸಾದವ ಇಂತು ನವಲಿಂಗಪ್ರಸಾದ ಪಾದೋದಕಂಗಳ ಸಂತೃಪ್ತಿಯಲ್ಲಿ ಸಾಕಾರ ನಿರಾಕಾರನಾದ ಪರತತ್ವ ಜ್ಯೋತಿರ್ಮಯಲಿಂಗದೇವಂಗೆ ನಿಜಾನಂದ ಹಸ್ತದಿಂದ ಸಮರ್ಪಿಸಿ ಮತ್ತು ಅನಾದಿಕುಲ ಸಮ್ಮತವಾದ ದಶವಿಧ ಪಾದೋದಕ ಏಕಾದಶ ಪ್ರಸಾದದಲ್ಲಿ ಕೂಡಿ ಘನಸಾರದಂತಾದೊಡೆ ಅನಾದಿ ಪೂರ್ಣಮಯ ನಿಜವಸ್ತು ತಾನೇ ನೋಡಾ ಸಂಗನಬಸವೇಶ್ವರಾ.

೨. ಅಯ್ಯಾ ನಿರ್ವಂಚಕತ್ವದಿಂದ ದಶವಿಧಲಿಂಗಂಗಳಿಗೆ ಏಕವಿಂಶತಿ ಮಂತ್ರ ಸ್ಮರಣೆಯಿಂದ ದಶವಿಧ ಪಾದೋದಕವನರ್ಪಿಸಿ ಸಂತೃಪ್ತಾನಂದ ಜಲದಲ್ಲಿ ಪರಿಣಾಮಿಸಬಲ್ಲಡೆ, ನಿಜಪ್ರಸಾದಿ ಎಂಬೆನಯ್ಯ. ಆದರ ವಿಚಾರವೆಂತೆಂದೊಡೆ, ಏಕವಿಂಶತಿ ಪ್ರಣವದೊಳಗೆ ಷಡ್ವಿಧ ಪ್ರಣವ ಸ್ಮರಣೆಯಿಂದ ಆಪ್ಯಾಯನೋದಕ ಹಸ್ತೋದಕ ಲಿಂಗಪಾದೋದಕ ಶಿವಲಿಂಗ ಜಂಗಮಲಿಂಗ ಪ್ರಾಣಲಿಂಗದೇವಂಗೆ ಸಮರ್ಪಿಸಿ ತಾನಾ ಪರಿಣಾಮದಲ್ಲಿ ಲೋಲುಪ್ತನಾದೊಡೆ, ಅನಾದಿ ಜಂಗಮಸ್ವರೂಪವಾದ ಅಲ್ಲಮ ಪ್ರಭುರಾಯ ನೋಡಾ. ಇನ್ನುಳಿದ ತ್ರಿವಿಧ ಪ್ರಣವ ಸ್ಮರಣೆಯಿಂದ ನವವಿಧೋದಕವನೊಳಕೊಂಡ ಸತ್ಯೋದಕವ ನವವಿಧ ಲಿಂಗಕ್ಕೆ ಮಾತೃಸ್ವರೂಪವಾದ ನಿಃಕಲ ಪರತತ್ವ ದೇವಂಗೆ ಸಮರ್ಪಿಸಿ ನಿತ್ಯತೃಪ್ತತ್ವದಿಂದ ಸರ್ವಾವಸ್ಥೆಯ ನೀಗಬಲ್ಲಡೆ, ಅನಾದಿ ಶರಣಪ್ರಸನ್ನ ಮೂರ್ತಿ ಎಂಬೆ ನೋಡಾ ಸಂಗನಬಸವೇಶ್ವರಾ.

ಶುದ್ಧ, ಸಿದ್ಧ ಪ್ರಸಿದ್ಧ ಪ್ರಸಾದ.

ಇಂದ್ರಿಯಂಗಳ ದುರ್ವರ್ತನ ಗುಣಂಗಳ ಜಯಿಸಿದಾತಂಗೆ ಬ್ರಹ್ಮನು ತ್ಪತ್ತಿಗೆ ಹೊರಗಾಗಿ ಶ್ರೀ ಗುರುವಿನಿಂದ ಸರ್ವಾಂಗವೆಲ್ಲಾ ಶುದ್ಧಪ್ರಸಾದವಾಗುವದಯ್ಯ. ಸಮಸ್ತ ವಿಷಯಂಗಳ ದುರ್ವರ್ತನ ಗುಣಂಗಳ ಜಯಿಸಿದಾತಂಗೆ ವಿಷ್ಣುವಿನ ಸ್ಥಿತಿ ಹೊರಗಾಗಿ ಚಿದ್ಘನ ಮಹಾಲಿಂಗದಿಂದ ಸರ್ವಾಂಗವೆಲ್ಲ ಸಿದ್ಧಪ್ರಸಾದವೆನಿಸುವದಯ್ಯ. ಸಮಸ್ತ ಕರಣಂಗಳ ದುರ್ವರ್ತನ ಗುಣಂಗಳ ಜಯಿಸಿದಾತಂಗೆ ರುದ್ರನ ಲಯಕ್ಕೆ ಹೊರಗಾಗಿ ನಿರಾ

ಲಂಬ ನಿಃಕಲ ಜಂಗಮದಿಂದ ಸರ್ವಾಂಗವೆಲ್ಲ ಪ್ರಸಿದ್ಧ ಪ್ರಸಾದವಾಗುವದಯ್ಯ. ಇಂತು ಇಂದ್ರಿಯ ವಿಷಯ ಕರಣ ಗುಣಧರ್ಮಗಳಳಿದು ಲಿಂಗೇಂದ್ರಿಯ ವಿಷಯ ಕರಣಗಳಾಗಿ ಬ್ರಹ್ಮನುತ್ಪತ್ಯ ವಿಷ್ಣುವಿನ ಸ್ಥಿತಿ ರುದ್ರನ ಲಯಕ್ಕೆ ಹೊರಗಾಗುವದಲ್ಲದೆ ಮಹಾ ಪ್ರಸಾದಿಸ್ಥಲವೊಳಗಣ ಷಟ್ಸ್ಥಲ ದೊರೆಯದು ನೋಡಾ ಸಂಗನಬಸವೇಶ್ವರಾ.

ಸರ್ವಾಂಗ ಪಾದೋದಕ ಪ್ರಸಾದ ಮಯದ ರೀತಿ.

ಅಯ್ಯಾ ಏಕವಿಂಶತಿ ದೀಕ್ಷೆಯ ನಿಲುಕಡೆ ದ್ವಾದಶಾಚಾರ ವೊದಲಾಗಿ ಸರ್ವಾಚಾರ ಸಂಪತ್ತಿನಾಚರಣೆಯ ಅರ್ಪಿತಾವಧಾನವನರಿದು ಆಚರಿಸಿದೊಡೆ, ನಿನ್ನ ಸರ್ವಾಂಗವೆಲ್ಲ ಪಾದೋದಕ ಪ್ರಸಾದ ಮಂತ್ರಮಯ ಪರಬ್ರಹ್ಮ ಸ್ವರೂಪ ನೋಡಾ. ಅದರ ವಿಚಾರವೆಂತೆಂದೊಡೆ, ಕಾಯದ ಮಧ್ಯದಲ್ಲಿ ಅನಾದಿ ಗುರು ಬಸವೇಶ್ವರ ಸ್ವಾಮಿಗಳೇ ಇಷ್ಟಲಿಂಗ ಮಂತ್ರ ಚಿದ್ವಿಭೂತಿ ರುದ್ರಾಕ್ಷಿ ದೀಕ್ಷಾ ಪಾದೋದಕ ಶುದ್ಧ ಪ್ರಸಾದವಾಗಿ ನೆಲಿಸಿರ್ಪರು ನೋಡಾ. ನಿನ್ನ ಮನದ ಮಧ್ಯದಲ್ಲಿ ಅನಾದಿ ಚರರೂಪ ಚನ್ನಬಸವೇಶ್ವರ ಸ್ವಾಮಿಗಳೇ ಪ್ರಾಣಲಿಂಗ ಸಪ್ತಕೋಟಿ ಮಹಾಮಂತ್ರ ಶಿಕ್ಷಾ ಪಾದೋದಕ ಸಿದ್ಧ ಪ್ರಸಾದ್ರವಾಗಿ ನೆಲಿಸಿರ್ಪರು ನೋಡಾ. ನಿನ್ನ ಭಾವ ಮಧ್ಯದಲ್ಲಿ ಅನಾದಿ ಪರಶಿವರೂಪ ಅಲ್ಲಮ ಪ್ರಭು ಸ್ವಾಮಿಗಳೇ ಭಾವ ಲಿಂಗ ಅಗಣಿತ ಮಂತ್ರ ಜ್ಞಾನ ಪಾದೋದಕ ಪ್ರಸಿದ್ಧ ಪ್ರಸಾದವಾಗಿ ನೆಲಿಸಿರ್ಪರು ನೋಡಾ. ನಿನ್ನಾಧಾರ ಚಕ್ರ ಮಧ್ಯದಲ್ಲಿ ಆಚಾರ ಮೂರ್ತಿ ಮಡಿವಾಳ ಸ್ವಾಮಿಗಳ ಪಂಚಾಚಾರ ಮೂರ್ತಿ-ಆಚಾರಲಿಂಗ ಮಂತ್ರ ಸ್ಪರ್ಶನೋದಕ ಆಪ್ಯಾಯನ ಪ್ರಸಾದವಾಗಿ ನೆಲಿಸಿರ್ಪರು ನೋಡಾ. ನಿನ್ನ ಸ್ವಾಧಿಷ್ಠಾನ ಚಕ್ರಮಧ್ಯದಲ್ಲಿ ಸತ್ಕ್ರಿಯಾ ಮೂರ್ತಿ ಮರುಳ ಶಂಕರ ಸ್ವಾಮಿಗಳೇ ಮಂತ್ರ ಮೂರ್ತಿ ಗುರುಲಿಂಗ ಮಂತ್ರ ಅವಧಾನೋದಕ ಸಮಯ ಪ್ರಸಾದವಾಗಿ ನೆಲಿಸಿರ್ಪರು ನೋಡಾ. ನಿನ್ನ ಮಣಿ ಪೂರಕ ಚಕ್ರ ಮಧ್ಯದಲ್ಲಿ ಸಮ್ಯಜ್ಞಾನ ಮೂರ್ತಿ ಸಿದ್ಧರಾಮೇಶ್ವರ ಸ್ವಾಮಿಗಳೇ ನಿರೀಕ್ಷಣ ಮೂರ್ತಿ ಶಿವಲಿಂಗ ಮಂತ್ರ ಆಪ್ಯಾಯನೋದಕ ಪ್ರಸಾದಿಯ ಪ್ರಸಾದವಾಗಿ ನೆಲಿಸಿರ್ಪರು ನೋಡಾ. ನಿನ್ನ ಅನಾಹತ ಚಕ್ರಮಧ್ಯದಲ್ಲಿ ಷಡ್ಗುಣೈಶ್ವರ್ಯ ಸಂಪನ್ನ ನೀಲಲೋಚನೆ ತಾಯಿಗಳ ಯಜನ ಸ್ವರೂಪ ಮೂರ್ತಿ ಜಂಗಮಲಿಂಗ ಮಂತ್ರ ಹಸ್ತೋದಕ ಪಂಚೇಂದ್ರಿಯ ವಿರಹಿತ ಪ್ರಸಾ

ದವಾಗಿ ನೆಲಿಸಿರ್ಪರು ನೋಡಾ. ನಿನ್ನ ವಿಶುದ್ಧಿ ಚಕ್ರಮಧ್ಯದಲ್ಲಿ ಪರಮ ವಿರಾಗತನುವುಳ್ಳ ಮಹಾದೇವಿ ತಾಯಿಗಳೇ ಈಶನ ಸ್ವರೂಪವಾದ ಪ್ರಸಾದಲಿಂಗ ಮಂತ್ರ ಪರಿಣಾಮೋದಕ ಕರಣ ಚತುಷ್ಟಯ ವಿರಹಿತ ಪ್ರಸಾದವಾಗಿ ನೆಲಿಸಿರ್ಪರು ನೋಡಾ. ನಿನ್ನ ಆಜ್ಞಾಚಕ್ರದ ಮಧ್ಯದಲ್ಲಿ ಷಟ್ಸ್ಥಲ ಸಂಪನ್ನೆಯಾದಂಥಾ ಅಕ್ಕನಾಗಲಾಂಬಿಕೆ ತಾಯಿಗಳೇ ಮೇದ್ಯಸ್ವರೂಪವಾದ ಮಹಾಲಿಂಗ ಮಂತ್ರ ನಿರ್ನಾಮೋದಕ ಸಮತಾ ಪ್ರಸಾದವಾಗಿ ನೆಲಿಸಿರ್ಪರು ನೋಡಾ. ನಿನ್ನ ಬ್ರಹ್ಮಚಕ್ರ ಮಧ್ಯದಲ್ಲಿ ಸರ್ವಾಚಾರ ಸಂಪನ್ನೆಯಾದಂಥ ಮುಕ್ತಾಯಕ್ಕಗಳೇ ನಿರಾಲಂಬ ಮೂರ್ತಿಯಾದಂಥ ನಿಃಕಳಲಿಂಗ ಮಂತ್ರ ಸತ್ಯೋದಕ ಸದ್ಭಾವ ಪ್ರಸಾದ ಜ್ಞಾನಪ್ರಸಾದವಾಗಿ ನೆಲಿಸಿರ್ಪರು ನೋಡಾ. ನಿನ್ನ ಶಿಖಾ ಪಶ್ಚಿಮ ಚಕ್ರಮಧ್ಯದಲ್ಲಿ ಪರಿಪೂರ್ಣಾನಂದಮೂರ್ತಿ ಅಜಗಣ್ಣ ತಂದೆಗಳು ನಿಃಪ್ರಪಂಚ ಮೂರ್ತಿ ಶೂನ್ಯ ನಿರಂಜನ ಲಿಂಗಮಂತ್ರ ಕರುಣಜಲ ವಿನಯಜಲ ಸಮತಾಜಲ ಚಿತ್ಕಲಾ ಪ್ರಸಾದ ನಿಜಪ್ರಸಾದ ಚಿದ್ರೂಪ ಪ್ರಸಾದವಾಗಿ ನೆಲಿಸಿರ್ಪರು ನೋಡಾ. ಇಂತು ನಿನ್ನ ಕರಾಚೈತನ್ಯನಾಗಿ ನಿನ್ನ ಸರ್ವಾಂಗದಲ್ಲಿ ಪ್ರಮಥ ಗಣಂಗಳ ಪಾದೋದಕ ಪ್ರಸಾದಲಿಂಗ ಮಂತ್ರವಾಗಿರ್ಪುದು ನೋಡಾ ಸಂಗನಬಸವೇಶ್ವರಾ.

ಪಾದೋದಕ ವಿಧಿಯ ತತ್ವಗಳು.

೧. ಅಯ್ಯಾ ನೀನು ಅಷ್ಟಭೋಗಂಗಳ ತ್ಯಜಿಸಿ ನಿನ್ನ ನಿಜದಿಂದ ನಿನ್ನಾದಿ ಮಧ್ಯಾವಸಾನವ ತಿಳಿದು ನೋಡಿದರೆ ನಿನ್ನ ಕಣ್ಣಮುಂದೆ ಬಂದಿರ್ಪುದು ನೋಡಾ ಮಹಾಪ್ರಸಾದ. ಅದೆಂತೆಂದೊಡೆ, ಮಹಾಜ್ಞಾನ ತಲೆದೋರಿ ಸರ್ವಾಂಗ ಪರಿತ್ಯಾಗವ ಮಾಡಿ ಗುರೂಪಾವಸ್ಥೆಯ ಮಾಡಿದ ಶಿಷ್ಯೋತ್ತಮಂಗೆ ಸೇವ್ಯರ ಭೃತ್ಯದಿಂದ ಪಂಚಕಲಶಂಗಳ ಸ್ಥಾಪಿಸಿ ಸೂತ್ರವ ಹಾಕಿಸಿ ಅಷ್ಟವಿಧಾರ್ಚನೆ ಷೋಡಶೋಪಚಾರಂಗಳ ಮಾಡಿಸಿ, ತಮ್ಮ ಕೃಪಾಹಸ್ತವನಿಟ್ಟು ಜಂಗಮ ಮೂರ್ತಿಗಳ ಸಿಂಹಾಸನದ ಮೇಲೆ ಮೂರ್ತವ ಮಾಡಿಸಿ ಶ್ರೀಗುರುಲಿಂಗವು ಎಂದು ಪ್ರಮಥರೊಡಗೂಡಿ ಕುಮಾರ ತಾವಮಾಡಿದಂಗಲಿಂಗವ ತನ್ನ ಚರಣತಳಕ್ಕೆ ಸೂತ್ರವ ಹಿಡಿಸಿ, ಗುರು ಶಿಷ್ಯತ್ವವೆಂಬ ಉಭಯ ಭೇದವಳಿದು ಏಕರೂಪಾಗಿ ನಿರಂಜನ ಮೂರ್ತಿಗೆ ಅಭಿವಂದಿಸಿ ಅಷ್ಟಾಂಗ ಪ್ರಣತರಾಗಿ ಅಪ್ಪಣೆಯ ಬೆಸಗೊಂಡು,

ಆ ನಿರಂಜನ ಮೂರ್ತಿಗೆ ಪ್ರತಿ ಸಿಂಹಾಸನವ ಮಾಡಿಸಿ, ಗುರು ಶಿಷ್ಯರಭಿಮುಖವಾಗಿ, ಗುರುವಿನ ದೃಕ್ಕು ಶಿಷ್ಯನ ಮಸ್ತಕದಲ್ಲಿ ಸೂಸೆ, ಶಿಷ್ಯನ ದೃಕ್ಕು ಗುರುವಿನ ಚರಣ ಕಮಲದಲ್ಲಿ ಸೂಸೆ, ಏಕಲಿಂಗ ನಿಷ್ಠೆಯಿಂದೆ ಸಾವಧಾನ ಭಕ್ತಿಕರಿಗೊಂಡು, ಆ ಲಿಂಗಾಂಗದ ಭಾಳದ ಪೂರ್ವಲಿಖಿತವ ಜಂಗಮ ಚರಣೋದ್ಧೂಳನದಿಂದೆ ತೊಡೆದು, ಲಿಂಗಾಂಗಕ್ಕೆ ೨೧ ಪೂಜೆಯ ಮಾಡಿಸಿ, ಲಿಂಗಕ್ಕೆ ಅಂಗವ ತೋರಿ, ಅಂಗಕ್ಕೆ ಲಿಂಗವ ತೋರಿ, ಪಾಣಿಗ್ರಹಣವ ಮಾಡಿ ಮಂತ್ರ ವರ್ಣದಲ್ಲಿ ಉಸುರಿ ಪ್ರಮಥರೊಡಗೂಡಿ ಸೇಸೆಯ ನೆರೆದು ಕಂಕಣವಕಟ್ಟಿ ನಿಮಿಷಾರ್ಧವಗಲಬೇಡೆಂದು ಅಭಯ ಹಸ್ತವಿಟ್ಟು ಸರ್ವಾಂಗದಲ್ಲಿ ಚಿದ್ಘನಲಿಂಗವನಿತ್ತುದೇ ಪ್ರಥಮದಲ್ಲಿ ಗುರು ಪ್ರಸಾದ ನೋಡಾ. ಅದರಿಂ ಮೇಲೆ ಕ್ರಿಯಾಮಂತ್ರವ ಹೇಳಿದ ದಶವಿಧ ಪಾದೋದಕ ಏಕಾದಶ ಪ್ರಸಾದವ ಕರುಣಿಸಿದ್ದುದೇ ದ್ವಿತೀಯದಲ್ಲಿ ಲಿಂಗಪ್ರಸಾದ ನೋಡಾ. ಅದರಿಂ ಮೇಲೆ ಲಿಂಗಾಂಗ ಷಟ್‌ಸ್ಥಾನಂಗಳಲ್ಲಿ ಅಷ್ಟವಿಧ ಸಕೀಲು ಮೊದಲಾಗಿ ಸಮಸ್ತ ಸಕೀಲಮರ್ಮವ ಕರುಣಿಸಿದ್ದುದೇ ತೃತೀಯದಲ್ಲಿ ಜಂಗಮ ಪ್ರಸಾದ ನೋಡಾ. ಅದರಿಂವತ್ತತ್ತ ಲಿಂಗಾಂಗವೆರಡಳಿದು ಸರ್ವಾಚಾರ ಸಂಪತ್ತಿನ ಆಚರಣೆಯ ತೋರಿ ಮಹಾಪ್ರಸಾದ ಶಿವಾನುಭಾವರೂಪವ ಬೋಧಿಸಿ ಶ್ರೀಗುರುಲಿಂಗ ಜಂಗಮದಂತರಂಗದಲ್ಲಿ ಬೆಳಗುವ ಚಿಜ್ಜ್ಯೋತಿ ಶರಣನೇ ಚತುರ್ಥದಲ್ಲಿ ನಿಜಪ್ರಸಾದ ನೋಡಾ. ಈ ಚತುರ್ವಿಧ ಪ್ರಸಾದ ಸ್ವರೂಪವೇ ನೀನೆಂದರಿದು ಇನ್ನಾವ ಭಯಕ್ಕೆ ಹೆದರಬೇಡಯ್ಯ. ಪ್ರಮಥರಾಚರಿಸಿದ ಆಚಾರ ಕ್ರಿಯಾಜ್ಞಾನಾಚರಣ ಸಂಬಂಧಕ್ಕೆ ಬಂದುದಕೊಂಡು ಬಾರದುದನುಳಿದು ಚಿದ್ಘನ ಮಹಾಲಿಂಗವಲ್ಲೇಕವಾಗಿ ಬಾರಾ ಸಂಗನ ಬಸವೇಶ್ವರಾ.

೨. ಅಯ್ಯಾ ಜಗತ್ಪಾವನ ನಿಮಿತ್ಯಾರ್ಥವಾಗಿ ಸಾಕಾರ ಲೀಲೆಯ ಧರಿಸಿದ ಸ್ವಯಂಚರಪರ ಗುರುಮೂರ್ತಿಗಳ ಆಶ್ರಿತಾವಧಾನದ ನಿಲುಕಡೆ ಎಂತೆಂದೊಡೆ, ಲಿಂಗಾಚಾರ ಮೊದಲಾದ ಸದ್ಭಕ್ತಶರಣಗಣಂಗಳಲ್ಲಿ ಲಿಂಗಾರ್ಪಿತ ಭಿಕ್ಷಲೀಲೆಯ ಧರಿಸಿ ಹೋದವೇಳೆಯೊಳು ಆ ಭಕ್ತಗಣಂಗಳು ಶರಣುವೊಕ್ಕು ಸಮಸ್ತ ಆಚರಣೆಯ ಒದಗಿಸಿ ಕೊಟ್ಟಲ್ಲಿ ದಶವಿಧ ಪಾದೋದಕ ಏಕಾದಶ ಪ್ರಸಾದದಾಚರಣೆಯಾಗುವದಯ್ಯ. ಇಂತು ಲಿಂಗಾಚಾರ ಭಕ್ತಗಣಂಗಳು ದೊರೆಯದಿರ್ದೊಡೆ, ವೇದಾಂತಿ ಸಿದ್ಧಾಂತಿ ಭಿನ್ನಯೋಗಿ ಮೊದಲಾದ ಸಮಸ್ತ ಮತದಿಂದ ಏಕಶಬ್ದ ಭಿಕ್ಷಸಪ್ತಗ್ರಹವ ಬೇಡಿ

ದುರ್ಗಂಧಯುಕ್ತವಾದ ಅಯೋಗ್ಯ ದ್ರವ್ಯವನುಳಿದು ಸದ್ಗುಣಯುಕ್ತವಾದ ಯೋಗ್ಯ ದ್ರವ್ಯವಕೈಕೊಂಡು ಧೂಳಸಾದ ಜಲದಿಂದ ಭವಿತನವ ಕಳೆದು ಭಕ್ತ ಪದಾರ್ಥವೆನಿಸಿ ಅರ್ಘ್ಯ ಪಾದ್ಯಾಚಮನವ ಮಾಡಿ ಧಾನ್ಯವಾದೊಡೆ ಪರಿಣಾಮ ಜಲದಿಂ ಶೋಧಿಸಿ, ಪಾಕವಮಾಡಿ, ಫಲಾಹಾರವಾದೊಡೆ ಶೋಧಿಸಿ ಪಕ್ವವ ಮಾಡಿಟ್ಟು, ಆ ಮೇಲೆ ಅಯ್ಯ ನಿನಗೆ ಭಕ್ತಗಣಂಗಳು ದೊರೆಯದ ಸಮಯದಲ್ಲಿ ಚತುರ್ವಿಧ ಪಾದೋದಕವೆಂತೆಂದೊಡೆ ಏಕಾಂತವಾಸದಲ್ಲಿ ಪರಿಣಾಮತರವಾದ ಹಳ್ಳ ಹೊಳೆ ಕೆರೆ ಬಾವಿ ಮಡು ಹೊಂಡ ಚಿಲುಮೆ ಕೊಳ ಮೊದಲಾದ ಸ್ಥಾನಕ್ಕೆ ಹೋಗಿ ಪ್ರಥಮದಲ್ಲಿ ಶಿವಶಿವ ಹರಹರಾ ಗುರುಬಸವಲಿಂಗಾ ಎಂಬ ಮಂತ್ರಸ್ಮರಣೆ ಧ್ಯಾನದಿಂದ ಪಾದವಿಟ್ಟು ಚರಣ ಸೋಂಕಿಸಿಂ ಪವಿತ್ರವಾದುದುಕವೆ ಪಾದೋದಕವೆನಿಸುವದಯ್ಯ. ಆ ಮೇಲೆ ತಂಬಿಗೆಯೊಳಗೆ ಶೋಧಿಸಿ ಬಸವಾಕ್ಷರವ ಲಿಖಿಸುವೊಡೆ ಗುರುಪಾದೋದಕವೆನಿಸುವದಯ್ಯ. ಇಂತು ಗುರುಪಾದೋದಕದಿಂದ ಇಷ್ಟಮಹಾಲಿಂಗ ದೇವಂಗೆ ಅಭಿಷೇಕ ಮುಖದಿಂದ ಲಿಂಗೋದಕವೆನಿಸುವದಯ್ಯ. ಆ ಮೇಲೆ ಅರ್ಚನಾ ಕ್ರಿಯೆಗಳ ತೀರ್ಚಿಕೊಂಡು ನಿಚ್ಚ ಪ್ರಸಾದಿ ಸಂಬಂಧ ಆಚರಣೆಯಂತೆ ಮುಗಿದಲ್ಲಿ ಜಂಗಮ ಪಾದೋದಕವೆನಿಸುವದಯ್ಯ. ಇಂತು ಚತುರ್ವಿಧ ಪಾದೋದಕದೊಳಗೆ ಷಡ್ವಿಧ ಪಾದೋದಕ ಉಂಟು. ಅದೆಂತೆಂದೊಡೆ ಹಸ್ತವಿಟ್ಟು ಸ್ಪರ್ಶನವಮಾಡೆ ಸ್ಪರ್ಶನೋದಕವೆನಿಸುವದಯ್ಯ. ಲಿಂಗಕ್ಕೆ ಧಾರೆಯಿಂದ ಅಭಿಷೇಕವನೆರೆದಲ್ಲಿ ಅವಧಾನೋದಕವೆನಿಸುವದಯ್ಯ. ಅರ್ಪಿತ ಮುಖದಲ್ಲಿ ಹಸ್ತವ ಪ್ರಕ್ಷಾಳಿಸಿ ಖಂಡಿತ ಮಾಡಿದಲ್ಲಿಗೆ ಹಸ್ತೋದಕವೆನಿಸುವದಯ್ಯ. ಲಿಂಗಕ್ಕೆ ಸಂತೃಪ್ತಿ ಪರಿಯಂತರವು ಅರ್ಪಿತವ ಮಾಡಿದೊಡೆ ಪರಿಣಾಮೋದಕವೆನಿಸುವದಯ್ಯ. ತಟ್ಟೆಬಟ್ಟಲ ಲೇಹ್ಯವ ಮಾಡದಲ್ಲಿ ನಿರ್ನಾಮೋದಕವೆನಿಸುವದಯ್ಯ. ಲೇಹ್ಯವಮಾಡಿದ ಮೇಲೆ ದ್ರವವನಾರಿಸಿ ಸರ್ವಾಂಗದಲ್ಲಿ ಲೇಪಿಸಿದೊಡೆ ಸತ್ಯೋದಕವೆನಿಸುವದಯ್ಯ. ಇಂತೀ ದಶವಿಧ ಪಾದೋದಕದ ವಿಚಾರವ ತಿಳಿದು ಆ ಮೇಲೆ ನಿಚ್ಚ ಪ್ರಸಾದಿಯ ಸಂಬಂಧದಾಚರಣೆಯಂತೆ ಪ್ರಸಾದವ ಮುಗಿವುದಯ್ಯ. ಅದರೊಳಗೆ ಏಕಾದಶ ಪ್ರಸಾದ ವಿವರವೆಂತೆಂದೊಡೆ, ಪ್ರಥಮದಲ್ಲಿ ಸ್ಪರ್ಶನವ ಮಾಡಿದಂಥಾದ್ದೆ ಗುರುಪ್ರಸಾದವೆನಿಸುವದಯ್ಯ. ಇಷ್ಟ ಮಹಾಲಿಂಗಕ್ಕೆ ಮಂತ್ರ ಸ್ಮರಣೆಯಿಂದ ಮೂರು ವೇಳೆ ರೂಪವನರ್ಪಿಸಿದಲ್ಲಿಗೆ ಲಿಂಗಪ್ರಸಾದವೆನಿಸುವದಯ್ಯ. ಎರಡುವೇಳೆ

ಇಷ್ಟ ಮಹಾಲಿಂಗದೇವಂಗೆ ರೂಪವನರ್ಪಿಸಿ ಜಿಹ್ವೆಯುಲಿಟ್ಟಲ್ಲಿ ಜಂಗಮ ಪ್ರಸಾದವೆನಿಸುವದಯ್ಯ. ಆ ಮೇಲೆ ಲಿಂಗದೇವಂಗೆ ತೋರಿ ಭೋಜ್ಯ ಗಟ್ಟಿ, ಲಿಂಗದೇವಂಗೆ ತೋರಿ ಜಿಹ್ವೆಯುಲ್ಲಿಟ್ಟಂಥಾದ್ದೇ ಪ್ರಸಾದಿಯ ಪ್ರಸಾದವೆನಿಸುವದಯ್ಯ. ಆ ಭೋಜ್ಯರೂಪಾದ ಪ್ರಸಾದಿಯ ಪ್ರಸಾದ ದೊಳಗೆ ಮಧುರ ಒಗರು ಕಾರ ಆವ್ಲ ಕಹಿತೃಪ್ತಿ ಮಹಾತೃಪ್ತಿಯೆ ಆಪ್ಯಾ ಯನ ಸಮಯ ಪಂಚೇಂದ್ರಿಯ ವಿರಹಿತ ಕರಣಚತುಷ್ಟಯ ವಿರಹಿತ ಸಮತೆ ಸದ್ಭಾವ ಜ್ಞಾನಪ್ರಸಾದ ಮೊದಲಾದ ಸಪ್ತವಿಧ ಪ್ರಸಾದವೆನಿಸುವ ದಯ್ಯ. ಇಂತು ಪರಾಧೀನದಿಂ ಭಿಕ್ಷವ ಬೇಡಲಾರದಿದ್ದೊಡೆ ಅರಣ್ಯದಲ್ಲಿ ಫಲರಸಯುಕ್ತವಾದ ಹಣ್ಣು ಕಾಯಿಗಳ ಲಿಂಗಾರ್ಪಿತ ಭಿಕ್ಷೆ ಎಂದು ಆ ಫಲಾದಿಗಳ ತೆಗೆದುಕೊಂಡು ಶೋಧಿಸಿ ಪವಿತ್ರಪಮಾಡಿ ಲಿಂಗಾರ್ಪಿತ ಭೋಗಿ ಯಾದಾತನೆ ಸ್ವಯಂಭು ಪ್ರಸಾದಿ ಚಿತ್ಕಲಾಪ್ರಸಾದಿ ನೋಡಾ. ಇಂತು ಶ್ರೀಗುರುಲಿಂಗ ಜಂಗಮ ಕರುಣಾಕಟಾಕ್ಷೆಯಿಂದ ಅಚ್ಚಪ್ರಸಾದಿ ನಿಚ್ಚ ಪ್ರಸಾದಿ ಸಮಯಪ್ರಸಾದಿ ಚಿತ್ಕಲಾಪ್ರಸಾದಿ ನೋಡಾ. ಶರಣಗಣಂಗಳು ಆಚರಿಸುವ ದಶವಿಧ ಪಾದೋದಕ ಏಕಾದಶ ಪ್ರಸಾದದ ನಿಲುಕಡೆಯು ಅರಿದಾನಂದಿಸಿದೊಡೆ ನಿನ್ನ ಸರ್ವಾಂಗವೆಲ್ಲಾ ಚಿಷ್ಘನ ಶರಣ ಪ್ರಸಾದಲಿಂಗ ಸ್ವರೂಪು ನೋಡಾ ಸಂಗನ ಬಸವೇಶ್ವರಾ.

ಪಾದೋದಕ ಪ್ರಸಾದಗಳ ಮಹಾತ್ಮೆ.

೧. ಶ್ರೀಗುರು ಲಿಂಗಜಂಗಮದ ಧೂಳಪಾದೋದಕದಿಂದ ಸಮಸ್ತ ಲೋಕದ ಪ್ರಾಣಿಗಳ ಭವಿತ್ವವಳಿದು ಭೃತ್ಯ ಭಕ್ತಿಮಾರ್ಗವ ತೋರುವ ದಯ್ಯ. ಶ್ರೀಗುರು ಲಿಂಗಜಂಗಮದ ದೀಕ್ಷಾ ಪಾದೋದಕದಿಂದೆ ಸಮಸ್ತ ಪದಾರ್ಥಂಗಳೆಲ್ಲವ ಶಿವಗಣಪದಕ್ಕೆ ಯೋಗ್ಯವಾಗುವಂತೆ ಮಾಡುವದಯ್ಯ ಶ್ರೀಗುರುಲಿಂಗಜಂಗಮದ ಶಿಕ್ಷಾಪಾದೋದಕದಿಂ ಬ್ರಹ್ಮನುತ್ಪತ್ತಿ, ವಿಷ್ಣು ವಿನ ಸ್ಥಿತಿ, ರುದ್ರನ ಲಯ, ಈಶ್ವರನ ತಿರೋಧಾನ, ಸದಾಶಿವನನುಗ್ರಹವ ಕೊಡುವದು, ಶಿವಶರಣಗಣಂಗಳ ನಿಜನಿವಾಸವ ತೋರುವದಯ್ಯ. ಶ್ರೀಗು ರುಲಿಂಗಜಂಗಮದ ಮಹಾಜ್ಞಾನ ಪಾದೋದಕದಿಂದ ಷಡ್ವಿಧ ದೀಕ್ಷಾತ್ರ ಯವ ಕರುಣಿಸಿ ಷಟ್‌ಸ್ಥಲ ಮಾರ್ಗವ ತೋರುವದಯ್ಯ ಶ್ರೀಗುರುಲಿಂಗ ಜಂಗಮದ ಹಸ್ತೋದಕ ಪರಿಣಾಮೋದಕ ನಿರ್ನಾಮೋದಕದಿಂದ ಷಡ್ವಿಧ ಲಿಂಗಾಂಗ ಸಮರಸಾಚರಣೆಯ ಮಾರ್ಗವ ಮೀರಿದ ಕ್ರಿಯಾಜ್ಞಾನವ

ತೋರುವದಯ್ಯಾ. ಶ್ರೀಗುರುಲಿಂಗ ಜಂಗಮದ ಸತ್ಪ್ರೋದಕ ಕರುಣಜಲ ವಿನಯಜಲ ಸಮತಾಜಲದಿಂದ ಸಮಸ್ತ ಪ್ರಮಥ ಗಣಂಗಳೆಲ್ಲ ಜ್ಯೋತಿರ್ಮಯರಾದರು ನೋಡಾ. ಅದೆಂತೆಂದೊಡೆ " ಅಂಗುಷ್ಠಾಗ್ರೆ ಅಷ್ಟಷಷ್ಠಿ ತೀರ್ಥಾ ನಿತ್ಯಂವಸಂತಿಷ್ವೈ । ಸಪ್ತಸಾಗರ ಪಾದಾರ್ಘೆ ತದಾರ್ಧೇಕುಲಿಪರ್ವತಾಃ ॥೧॥ ಸಪ್ತಸಾಗರ ಪರಿಯಂತಂ ತೀರ್ಥಸ್ನಾನ ಫಲಂ ಯಥಾ ಗುರೋರಂಘ್ರಿ ಜಲೇಬಿಂದು ಸಹಸ್ರಾಂಶೇನ ಪೂರಯೇತ್ ॥೨॥ ಪಾದೋದಕ ಪರಬ್ರಹ್ಮಂ ನಿರ್ಮಲಂ ಅಘನಾಶನಂ । ಅಜಡಂ ಜಡಮಿಚ್ಛಂತಿ ಸಪಾಪಿ ಬ್ರಹ್ಮ ಘಾತಕಃ ॥೩॥ ಭವಭೂಜ ಕುಠಾರಾಯ ರೋಗಪಂಕಸ್ಯ ಭಾನುವೆ । ಅನ್ಯಾಯ ಗಿರಿವಜ್ರಾಯ ಪಾದತೀರ್ಥಾಯತೇನಮಃ ॥೪॥ ಇಂತೆಂದುದಾಗಿ ಶ್ರೀ ಗುರು ಲಿಂಗ ಜಂಗಮದ ಪಾದೋದಕವೇ ಪರಮಾರಾಧ್ಯ ಶರಣಗಣಂಗಳಾಚಾರ ಸಂಪದಕ್ಕೆ ಪರಬ್ರಹ್ಮಜ್ಯೋತಿರ್ಮಯ ವಸ್ತು ನೋಡಾ ಸಂಗನಬಸವೇಶ್ವರಾ.

೨. ಶ್ರೀ ಗುರುಲಿಂಗಜಂಗಮದ ಪಾದೋದಕದಿಂದ ತನುವಿನ ಜಡತ್ವವಳಿದು ಶಿವಭಕ್ತಿಯ ಪಥವ ತೋರುವದಯ್ಯಾ. ಪಾದೋದಕದಿಂದ ಇಂದ್ರಿಯಂಗಳ ಜಡತ್ವವಳಿದು ಲಿಂಗೇಂದ್ರಿಯಂಗಳ ಮಾಡುವದಯ್ಯಾ. ಪಾದೋದಕದಿಂದೆ ಕರಣಂಗಳ ಕಾಮವಿಕಾರವಳಿದು ಲಿಂಗನಡೆ ಲಿಂಗನುಡಿ ಲಿಂಗನೋಟ ಲಿಂಗಕೂಟ ಲಿಂಗಭೋಗ ಲಿಂಗಾಚಾರವ ತೋರುವದಯ್ಯಾ. ಪಾದೋದಕದಿಂದೆ ಪ್ರಾಣನಸಂಚಲ ಗುಣವಳಿದು ಮಂತ್ರ ಧ್ಯಾನದಲ್ಲಿ ನಿಲಿಸುವದಯ್ಯಾ. ಪಾದೋದಕದಿಂದೆ ಅಜ್ಞಾನ ಜಡತ್ವವಳಿದು ಅಜಡಸ್ವರೂಪವ ಮಾಡಿ ಸುಜ್ಞಾನ ಸುಖವ ತೋರುವದಯ್ಯಾ. ಪಾದೋದಕದಿಂದ ಬಹು ಜನ್ಮದ ಪರಮಪಾತಕದ ಮಹಾ ಪಾಪವ ತೊಳೆದು ನಿರ್ಮಲ ಲಿಂಗ ಶರೀರವೆನಿಸುವದಯ್ಯಾ. ಪಾದೋದಕದಿಂದೆ ಜೀವನ ಜಡತ್ವವಳಿದು ಅಜಡಸ್ವರೂಪವ ಮಾಡಿ ಗಣಸಮ್ಮೇಳದಲ್ಲಿರಿಸುವದಯ್ಯಾ. ಪಾದೋದಕದಿಂದ ಮಲಮಾಯಾ ಕರ್ಮ ಪಾಶವ ಹರಿದು ನಿರ್ಮಲ ನಿರ್ಮಾಯ ಸ್ವರೂಪವ ಮಾಡಿ ಚಿಜ್ಜ್ಯೋತಿ ಸ್ವರೂಪನೆಂದೆನಿಸುವದು ನೋಡಾ. ಅದೇತೆಂದೊಡೆ " ಅಗಮ್ಯ ಗಮನಶ್ಚೈವ ಪಾಪಾಚಾರಸ್ಯಯೋಶುಭಾ । ತಪಿಸೂತ ಭವಂತ್ಯಾಸು ಸದ್ಯಃಪಾದಾಂಬು ಧಾರಣಾತ್ ॥೧॥ ಶಂಭು ಪಾದೋದಕಂಪೀತ್ವಾ ಪಶ್ಚದಾ ಶುಚಿ ಶಂಕಯಃ ಅಯಾಚಮತಿ ಮೋಹೇಚ ತಂವಿದ್ಯ ಬ್ರಹ್ಮಘಾತಕಃ ॥೨॥" ಎಂದುದಾಗಿ ಶ್ರೀ ಗುರುಲಿಂಗ

ಜಂಗಮದ ಪಾದೋದಕವೇ ಪರಾತ್ಪರ ದೇವಲೋಕದ ದೇವಗಂಗಾಜಲ ಶಿವಲೋಕದ ಶಿವಗಂಗಾಜಲ ಶಾಂಭವಲೋಕದ ಪರಮಗಂಗಾಜಲವಾಗಿ ನೆಲಸಿರ್ಪುದು ನೋಡಾ ಸಂಗನಬಸವೇಶ್ವರಾ.

೩. ಅಯ್ಯಾ ಪಾದಪೂಜೆ ಎಂಬುದು ಅಗಮ್ಯ ಅಗೋಚರ ಅಪ್ರಮಾಣ ಮಹಾ ಅಸಾಧ್ಯವು. ಶ್ರೀ ಗುರು ಬಸವೇಶ್ವರ ದೇವರು ತಮ್ಮ ಅಂತರಂಗದೊಳಗಣ ಪಾದಪೂಜೆಯಿಂದಾದ ತೀರ್ಥ ಪ್ರಸಾದಮಂ ಗಣ ಸಮೂಹಕ್ಕೆ ಸಲ್ಲಲಿ ಎಂದು ನಿರ್ಮಿಸಿ ಭಕ್ತಿಯ ತೊಟ್ಟು ಮೆರೆದು ಇಂತಪ್ಪ ತೀರ್ಥಪ್ರಸಾದವ ಸೇವಿಸುವ ಕ್ರಮವೆಂತೆಂದೊಡೆ. “ ಗ್ರಾಮ ಸೇವಾ ಕರಂ ರಂಭಾಗೀತ ವಾದ್ಯನೃತ್ಯಸ್ತಥಾ ಅನಾಚಾರ ವಿಕಾರಂಚನ ಪಾದತೀರ್ಥ ಪ್ರಸಾದಃ ॥೧॥ “ ಇಂತೆಂದುದಾಗಿ ತಂಬೂರಿ ಕಿನ್ನರಿವಿಡಿದು ಮನೆಮನೆಯ ಬೇಡುವಾತ ಹಲವು ವೇಷವ ತೊಟ್ಟು ಆಡುವಾತ ನಗಾರಿ ಸಮ್ಮೇಳ ನೌಬತ್ತು ಕರ್ನೆ ಕಹಳೆ ಶಂಖ ಬಾರಿಸುವಾತ ಅಷ್ಟಾವರಣ ಪಂಚಾಚಾರದಲ್ಲಿ ಅಂಹಕರಿಸುವಾತ ಹಸ್ತಪಾದ ಬೆರಳುಗಳು ನವೆದಾತ ಮೂಕೊರೆಯ ಸೋಟೆ ಹರುಕ ನೇತ್ರಪ್ರಕಾಶ ಹೀನ ಕಿವಿಹರಕ ಅನಾಚಾರಿ ಪರ್ವತದ ಕಂಬಿ ಮಹಾ ಧ್ವಜವ ಹೊರುವಾತ, ಕತ್ತಿ ಕಠಾರಿ ಡೊಣ್ಣೆಗಳ ಹಿಡಿವಾತ, ಗುರು ಪಾದಸ್ತೋತ್ರದಿಂದ ಅಡ್ಡಬಿದ್ದು ದೀಕ್ಷೆಯಾಗದಾತ ರಾಜಾರ್ಥವಲ್ಲಿ ಅಹುದು ಅಲ್ಲವಮಾಡಿ, ಅಲ್ಲವ ಅಹುದು ಮಾಡಿ ಲಂಚಕೆ! ಕೈಯ್ಯಾಂತು ಅನಾಚಾರ ಹೇಳುವಾತ, ಸದಾಚಾರ ನುಡಿಗೆ ಇದಿರುತ್ತರ ಕೊಟ್ಟು, ಭಕ್ತಗಣಂಗಳ ನಿಂದೆಯ ಮಾಡುವಾತ, ಸದಾಚಾರ ಸದ್ಭಕ್ತ ಗಣಂಗಳ ಕಂಡರೆ ಗರ್ವಿಸುವಾತ, ಧಾನ್ಯ ಅರಿವೆ ಬೆಳ್ಳಿ ಬಂಗಾರಂಗಳ ಕ್ರಯವಿಕ್ರಯುವ ಮಾಡಿ ಪ್ರತಿಯಾಗಿ ಮಾರಿ ವ್ಯವಹಾರವ ಮಾಡುವಾತ, ಧನ ಧಾನ್ಯ ದ್ರವ್ಯವ ಡೊಂಬ ಜಾತಿಗಾರ ಮೊದಲಾದ ಭವಿ ಜನರಿಗೆ ತ್ಯಾಗವ ಮಾಡುವಾತ, ಆನೆ ಕುದುರೆ ಮಹಿಷ ಎತ್ತುಗಳು ಮೊದಲಾಗಿ ವ್ಯಾಪಾರ ಮಾಡುವಾತ, ಗುರುಹಿರಿಯರಲ್ಲಿ ಹಾಸ್ಯರಸವ ಮಾಡುವಾತ, ಪರದ್ರವ್ಯ ಪರಧನವ ಪರಸ್ತ್ರೀ ಗಮಿಸುವಾತ, ಸೂಳೆ ಬಸಿವೆಯರ ಗೃಹದಲ್ಲಿರುವಾತ, ಆಚಾರ ಭ್ರಷ್ಟಮಾನಹೀನರ ಸಂಗವ ಮಾಡುವಾತ, ಇಂಥಮರುಳ ಮಂಕುಗಳ ಗುರುಲಿಂಗಜಂಗಮವೆಂದು ನುಡಿಯಲಾಗದು. ಅದೆಂತೆಂದೊಡೆ, “ನದೀನಾಂ ರಣಶ್ಚೈವ ಸಿಂಧು ಯಾನಾಚ ದುಃಕ್ರಿಯಾ। ಜಂಗಮಾನಾನ್ಯ ಕರ್ತವ್ಯಂ ಕರ್ತವ್ಯಂ ತತ್ವ ಚಿಂತನಂ ॥೧॥ ಖೇಟ

ಕೋದಂಡ ಚಕ್ರಾಸಿ ಗದಾ ತೋಮರಧಾರಣಂ | ಜಂಗಮಾನಾನ್ಯ ಕರ್ತವ್ಯಂ ಕರ್ತವ್ಯ ಸ್ವಯ ಲಕ್ಷಣಂ ||೨|| ಆಶಾಶ್ಚ ವೇಷಧಾರೀಚ ವೇಷ ಶ್ಚಗ್ರಾಸ ಪೋಷಕಃ | ಗ್ರಾಸಶ್ಚದೋಷ ಮಾದಾಯ ಇತಿ ಭೇದವರಾ ನನೆ ||೩|| ಅನಾಚಾರ ವಿಭಾವೇನ ಆಚಾರಶ್ಚ ವಿವರ್ಜಯೇತ್ | ಸದಾ ಚಾರ ಭಕ್ತಾನಾಂಚ ಪಾದತೀರ್ಥ ಪ್ರಸಾದನಂ ||೪|| ಮಹಾ ಭೋಗಿ ಮಹಾ ತ್ಯಾಗೀ ಲೋಲುಪ್ತಂ ವಿಷಯಾತುರಂ | ನಾನಾ ಅಂಗ ವಿಕಾರಂಚ ಪಾದ ತೀರ್ಥನಕಾರಯೇತ್ ||೫|| ಪೃಷ್ಟಶ್ಚ ಕರ್ಣ ಹೀನಸ್ಯ ಬಧಿರಂ ಕಲಹ ಪ್ರಿಯಾ | ವ್ಯಾಧೀನಾಂ ಅಂಗಹೀನಂಚ ತಸ್ಯಾಚಾರ ವಿವರ್ಜಯೇತ್ ||೬|| ಇಂತಿದು ಮಾರ್ಗ ನಡತೆಗಳಿಲ್ಲದೆ, " ಶಿವಶಾಸ್ತ್ರಂ ಶಿವಜ್ಞಾನಂ ಶಿವಭಕ್ತಸ ಮ್ಮೇಳನಂ | ಶಿವಧ್ಯಾನ ಶಿವಪೂಜಂಚ ಜಂಗಮಾನಾಂಚ ಲಕ್ಷಣಂ ||೧|| ಪಾಣಿಪಾತ್ರೆ ಸದಾ ಭಿಕ್ಷಂ ಭಕ್ತಿಜ್ಞಾನ ವಿರಾಗತಃ | ಸತ್ಯ ನಿತ್ಯಂ ಜಿತೇಂ ದ್ರಿಯಂ ವಿರಕ್ತಸ್ಯ ಸುಲಕ್ಷಣಂ ||೨|| ಪಾಣಿ ಪಾತ್ರಂಚ ಕೌಪೀನಂ ಭೂಷಾ ಯಭೂತಿ ಲೇಪನಂ ನಿತ್ಯೇ ಕಾಂತ ಶೀಲತ್ವ ಮುತ್ತಮಂ ಜಂಗಮ ಸ್ಥಲಂ ||೩|| ಲಿಂಗಾರ್ಪಿತಂ ಸತ್ಯ ಮೋಕ್ಷಂ ಭಿಕ್ಷಾನ್ನೇನ ಪರಂ ನಿಜಂ | ತತ್ವಜ್ಞಾನ ಸಮಾರೂಢಂ ವಿರಕ್ತಸ್ಯ ಸುಲಕ್ಷಣಂ ||೪|| ಗುರು ಕಲ್ಪಿತ ಭಿಕ್ಷಾನ್ನಂ ಅಕಲ್ಪಿತ ಶಿವಾಜ್ಞಯಾ | ದ್ವಯಹೀನ ಭಕ್ತದೇಹೀ ಸಪಾಪೀ ಜಂಗಮಾಧಮಃ ||೫|| ಇಂತು ಎಂದುದಾಗಿ ಅಯೋಗ್ಯವಾದ ಜಂಗಮ ವನಳಿದು ಯೋಗ್ಯವಾದ ಜಂಗಮವ ವಿಚಾರಿಸಿ ತನುಮನಧನವ ವಂಚನೆ ಇಲ್ಲದೆ ಸಮರ್ಪಿಸಿ ಅವರ ತೀರ್ಥಪ್ರಸಾದವ ಕೊಳಬೇಕಲ್ಲದೆ, ದುರ್ಮಾ ರ್ಗದಲ್ಲಿ ಆಚರಿಸುವಾತನಲ್ಲಿ ತ್ರಿನೇತ್ರವಿದ್ದರೂ ತೀರ್ಥ ಪ್ರಸಾದದುಪ ದೇಶವ ಕೊಳ್ಳಲಾಗದು ಕಾಣಾ ಸಂಗನಬಸವಣ್ಣ. ಇಂತು ಗುರುವಾಕ್ಯವ ತಿಳಿದು ನೋಡಾ ಸಂಗನಬಸವೇಶ್ವರಾ.

೪. ಶ್ರೀಗುರುಲಿಂಗ ಜಂಗಮದ ನೋಟ ಪರುಷಪ್ರಸಾದದಿಂದೆ, ಸಮಸ್ತ ಲೋಕದ ಮನುಮುನಿ ಋಷಿಗಳೆಲ್ಲ ಪರಮ ಸುಖಿಗಳಾದರಯ್ಯಾ. ಶ್ರೀಗುರುಲಿಂಗ ಜಂಗಮದ ಹಸ್ತಪರುಷ ಪವಿತ್ರವಾದ ಶುದ್ಧ ಪ್ರಸಾದ ದಿಂದೆ ತನುವಿನ ಕಾಮವಿಕಾರವಳಿವುದಯ್ಯ. ಶ್ರೀಗುರುಲಿಂಗ ಜಂಗಮದ ಸಿದ್ಧ ಪ್ರಸಾದದಿಂದ ಮನದ ಕಾಂಕ್ಷೆ ಹರಿವುದಯ್ಯಾ. ಶ್ರೀಗುರುಲಿಂಗ ಜಂಗಮ ಪ್ರಸಿದ್ಧ ಪ್ರಸಾದದಿಂದೆ ಭಾವದ ಭ್ರಮೆ ಕೆಡುವುದಯ್ಯ. ಶ್ರೀಗು ರುಲಿಂಗ ಜಂಗಮದ ಪ್ರಸಾದಿ ಪ್ರಸಾದದಿಂದೆ ಪ್ರಾಣನ ಪ್ರಪಂಚು ನಷ್ಟ

ವಾಗುವವಯ್ಯಾ. ಶ್ರೀಗುರುಲಿಂಗ ಜಂಗಮದ ಘನಾಪ್ಯಾಯನ ಪ್ರಸಾದ ದಿಂದೆ ಇಂದ್ರಿಯಂಗಳೆಲ್ಲಾ ಲಿಂಗೇಂದ್ರಿಯಂಗಳಾಗುವವಯ್ಯಾ ಶ್ರೀಗುರು ಲಿಂಗ ಜಂಗಮದ ಸಮಯ ಪ್ರಸಾದದಿಂದೆ ವಿಷಯಂಗಳೆಲ್ಲ ಲಿಂಗವಿಷ ಯಂಗಳಾಗುವವಯ್ಯಾ. ಶ್ರೀಗುರುಲಿಂಗ ಜಂಗಮದ ಪಂಚೇಂದ್ರಿಯವಿರ ಹಿತ ಪ್ರಸಾದದಿಂದ ಕರಣಂಗಳೆಲ್ಲ ಲಿಂಗಕರಣಂಗಳಾಗುವವಯ್ಯಾ. ಶ್ರೀಗುರುಲಿಂಗ ಜಂಗಮದ ಕರಣ ಚತುಷ್ಟಯ ವಿರಹಿತ ಪ್ರಸಾದ, ಸಮ ತಾಪ್ರಸಾದ ಸದ್ಭಾವಪ್ರಸಾದ ಜ್ಞಾನ ಪ್ರಸಾದದಿಂದ ಸರ್ವಸಂಗ ಪರಿತ್ಯಾಗ ರಾಗಿ ಬಯಲನೇ ಹಾಸಿ ಬಯಲನೇ ಹೊದ್ದು ಬಯಲನೇ ಅರ್ಚಿಸಿ ಬಯ ಲನೇ ಭೋಗಿಸಿ ಬಸವ ಮೊದಲಾದ ಪ್ರಮಥ ಗಣಂಗಳೆಲ್ಲ ಬಯಲೊಳಗೆ ಮಹಾಬಯಲಾದರು ನೋಡಾ. ಅದೆಂತೆಂದೊಡೆ “ಜಂಗಮಾದಿ ಗುರೂ ಣಾಂಚ ಅನಾದಿಸ್ವಯಲಿಂಗವಾನ್ । ಆದಿಪ್ರಸಾದೇನ ಭುಕ್ತಿ ಇಷ್ಟಪ್ರಾಣ ಪ್ರಸಾದಕಂ ॥೧॥ ಜಂಗಮಸ್ಯ ಪ್ರಸಾದೇನ ನೈವೇದ್ಯಂಚ ಸಮರ್ಪಣಂ। ಪ್ರಸಾದೇನತು ಶುದ್ಧಾತ್ಮಾಪ್ರಸಾದಂ ಲಿಂಗರೂಪಕಂ ॥೨॥ ಭಕ್ತಿಜಿಹ್ವಾಗ್ರೇ ತೇಲಿಂಗಂ ಜಿಹ್ವಾಗ್ರೇರುಚಿ। ರುಚಿಜಿಹ್ವಾ ಪ್ರಸಾದಂಚ ಪ್ರಸಾದಂ ಪರಮಂ ಪದಂ ॥೩॥ ಪ್ರಸಾದಂ ಪರಬ್ರಹ್ಮಂಚ ಬ್ರಹ್ಮಪ್ರಸಾದಮೇವಚ । ಕೇವಲಂ ಶಿವಮೌನಂಚ ಮನಂಚ ಶಿವಲಿಂಗಕಂ ॥೪॥” ಇಂತೆಂದು ಹೇಳುತ್ತಿಹು ದಾದ ಕಾರಣ ಶ್ರೀಗುರು ಲಿಂಗಜಂಗಮದ ಪ್ರಸಾದವೆ ಪರಮಾಮೃತ ಸುಧಾ ಜ್ಯೋತಿರ್ಮಯಲಿಂಗ ನೋಡಾ ಸಂಗನಬಸವೇಶ್ವರಾ.

೫. ಶ್ರೀಗುರುಲಿಂಗ ಜಂಗಮದ ಪ್ರಸಾದದಿಂದ ನಿಜವೀರಪರಾ ಕ್ರಮ ಉಂಟಾಗುವದಯ್ಯ. ಪ್ರಮಥಗಣಂಗಳ ಸದ್ಭಕ್ತಿ ದಾಸೋಹ ದೊರೆ ವುದಯ್ಯಾ. ಪ್ರಸಾದದಿಂದೆ ಸದಾಚಾರ ಲಿಂಗನಡೆ ಲಿಂಗನುಡಿ ದೊರೆವು ದಯ್ಯ. ಕಾಲಕಾಮರು ಹೊದ್ದಲಮ್ಮರು. ಉರಗ ವೃಶ್ಚಿಕ ವ್ಯಾಘ್ರ ಭಲ್ಲೂಕ ಗಜ ಗರುಡ ಸಿಂಹ ಸೋಂಕಲಮ್ಮವಯ್ಯಾ. ಪ್ರಸಾದದಿಂದೆ ಕುಷ್ಠರೋಗ ಮೊದಲಾಗಿ ಸಮಸ್ತ ವ್ಯಾಧಿಗಳು ಪಾವನರೂಪವಾಗುವವಯ್ಯಾ. ಪ್ರಸಾ ದದಿಂದೆ ಸತ್ಕ್ರಿಯೆ ಸಮ್ಯಜ್ಞಾನದ ಚಿತ್ಕಾಂತಿ ಹೆಚ್ಚುವವಯ್ಯ. ಮಹಾಪಾತ ಕಂಗಳು ಬಿಟ್ಟೋಡುವವಯ್ಯ. ಪ್ರಸಾದದಿಂದೆ ರುದ್ರಲೋಕದ ಗಣಂಗಳು ನಾಗಲೋಕದ ನಾಗಗಣಂಗಳೆಲ್ಲ ಶಿಖಿಕರ್ಪುರ ಬೆರೆವಂತಾವರಯ್ಯಾ. ಶಿವ ಲೋಕದ ಶಿವಗಣಂಗಳೆಲ್ಲ ಕ್ಷೀರ ಕ್ಷೀರವ ಬೆರೆವಂತಾದರಯ್ಯಾ. ಪ್ರಸಾದ ದಿಂದ ದೇವಲೋಕದ ದೇವ ಗಣಂಗಳು, ಶಾಂಭವಲೋಕದ ಶಾಂಭವ

ಗಣಂಗಳು ಜ್ಯೋತಿ ಜ್ಯೋತಿಯು ಬೆರೆದಂತಾದರಯ್ಯಾ ಶ್ರೀಗುರುಲಿಂಗ ಜಂಗಮದ ಪ್ರಸಾದದಿಂದೆ ಮರ್ತ್ಯಲೋಕದ ಮಹಾಗಣಂಗಳೆಲ್ಲ ನಿಃಶ್ಚಿಂತ ನಿಃಕಾಮ್ಯ ನಿಃಪ್ರಪಂಚಿಗಳಾಗಿ ಬಯಲು ಬಯಲು ಬೆರೆದಂತಾದರಯ್ಯಾ. ಅದೆಂತೆಂದೊಡೆ " ವಸು ಅರ್ಕ ರುದ್ರರೂಪೋ ಮಧ್ಯಪಿಂಡಸ್ತು ಪುತ್ರತಾ । ವಕ್ತ್ರರುದ್ರನಿರ್ಮಾಲ್ಯಂಚ ಕಿಂಪುನರ್ಬಹುಭಾಷಣಂ ॥೧॥ ಗ್ರಾಹ್ಯಂ ಜಂಗಮ ಶೇಷಂಚ ಗುರುರ್ಲಿಂಗಂತು ಜಂಗಮಂ । ಸಂತೃಪ್ತಿ ಶೇಷರೂಪಂಚ ಭವೇನ್ಮುಕ್ತಿ ಯಥಾಭವೇತ್ ॥೨॥ " ಎಂದುದಾಗಿ ಶ್ರೀಗುರುಲಿಂಗ ಜಂಗಮದ ಪ್ರಸಾದವೆ ನಿತ್ಯನಿಷ್ಕಳ ಲಿಂಗತಾನೇ ನೋಡಾ ಸಂಗನಬಸವೇಶ್ವರಾ.

ಚಿದ್ವಿಭೂತಿ.

೧. ಹರಹರಾ ಶಿವಶಿವಾ ಮತ್ಪ್ರಾಣನಾಥಾ ಅನಾದಿ ಮಹಾಪ್ರಭು ಶ್ರೀಗುರುಲಿಂಗ ಜಂಗಮದ ಚರಣೋದ್ಧೂಳನವೆ ಚಿದ್ಭಸ್ಮ ಚಿದೈಶ್ವರ್ಯ ನೋಡಾ. ಶ್ರೀಗುರುಲಿಂಗ ಜಂಗಮದ ಕ್ರಿಯಾ ಚಕ್ಷುವಿನ ಕ್ರಿಯಾ ಪ್ರಕಾಶವೇ ಕ್ರಿಯಾಭಸಿತವಾಗಿಪ್ಪುದಯ್ಯ. ಶ್ರೀಗುರುಲಿಂಗಜಂಗಮದ ಜ್ಞಾನ ಚಕ್ಷುವಿನ ಜ್ಞಾನಪ್ರಕಾಶವೇ ಮಹಾಜ್ಞಾನ ಭಸಿತವಾಗಿಪ್ಪುದಯ್ಯ. ಇಂಥ ಚಿತ್ಪ್ರಕಾಶ ಸ್ವರೂಪವಾದ ಚಿದ್ಭಸಿತವ ಅನಾದಿ ಬಸವದಂಡ ಪ್ರಮಥರು ತಮ್ಮ ಗೋಪ್ಯ ಮುಖದಲ್ಲಿ ಸಕಲ ಕ್ರಿಯೆಗಳನಾಚರಿಸುತ್ತಿರಲು, ಆಗ ಶಿವನು ತನ್ನ ಪಂಚಮುಖದಿಂದ ಪಂಚವರ್ಣದ ಗೋವನಿರ್ಮಿಸಿ ಎಲೈ ಎನ್ನ ಚಿಚ್ಛಕ್ತಿತನ್ಮೂರ್ತಿ ಬಸವದಂಡನಾಯಕರೇ ಈ ಪಂಚಗೋವುಗಳ ಈರೇಳು ಲೋಕಕ್ಕೆ ಪಾವನಸ್ವರೂಪನವಮಾಡಿ, ನಿಮ್ಮ ಶರಣ ಗಣಂಗಳಿಗರ್ಪಿತವಾಗುವಂತೆ ಮಾಡಿರಯ್ಯಾ ಎಂದು ಅಭಿವಂದಿಸಲು, ಆಗ ಬಸವದಂಡ ಪ್ರಮಥರು ಆ ಗೋವಿನ ಸಗಣವ ಕ್ರಿಯಾಗ್ನಿಯಿಂದ ಶ್ರೀಗುರುಲಿಂಗ ಜಂಗಮದ ಚಿತ್ಪ್ರಭೆಯು ವೇಧಿಸಿ ಸಕಲ ಲೋಕಂಗಳಿಗೆ ಸಕಲ ಮುನಿಜನಕ್ಕೆಲ್ಲಾ ಕಾಲಹರ ಭಸಿತ, ಕರ್ಮಹರ ಭಸಿತ, ದುರಿತಹರ ಭಸಿತ, ಪಾಪಹರ ಭಸಿತವೆನಿಸಿ ಕೊಟ್ಟರು ನೋಡಾ. ಆ ಗೋವಿನ ಜಲಮಲ ವೀರ್ಯದಿಂದೆ ಭೂಮಿಗೆ ಸಮ್ಮಾರ್ಜನೆಗೆ ಯೋಗ್ಯವೆನಿಸಿದರಯ್ಯ. ಆ ಗೋವಿನ ಕುಚಕ್ಷೀರವ ಸರ್ವಲೋಕಂಗಳಿಗೆ ಪಂಚಾಮೃತವೆನಿಸಿದರಯ್ಯ. ಆ ಗೋವಿನ ಪುತ್ರನಿಂದ ಸಕಲ ಪ್ರಾಣಿಗಳು ಬದುಕುವಂತೆ ಮಾಡಿದರಯ್ಯ.

ಆ ಗೋವಿನ ಮಾಂಸವ ದುರಾಚಾರ ಭವಿಜನಾತ್ಮರು ಭುಂಜಿಸುವಂತೆ ಮಾಡಿದರಯ್ಯಾ. ಆ ಗೋವಿನ ಚರ್ಮವ ಶಿವಗಣಂಗಳ ಪಾದರಕ್ಷೆ ಎನಿಸಿದರಯ್ಯಾ. ಇತ್ತಲಾಗಿ ಸಕಲ ಪ್ರಮಥ ಗಣಂಗಳೆಲ್ಲ ಶ್ರೀಗುರು ಬಸವೇಶ್ವರ ಸ್ವಾಮಿಗಳ ಚಿತ್ಪ್ರಕಾಶ ಭಸಿತವ ಬೆಸಗೊಂಡು, ಆ ವಿಭೂತಿಯ ಶ್ರೀಗುರು ಲಿಂಗ ಜಂಗಮದ ದೀಕ್ಷಾಜಲ ಶಿಕ್ಷಾಜಲದಿಂದ ಸಮ್ಮಿಶ್ರವಮಾಡಿ ಇಪ್ಪತ್ತೊಂದು ದೀಕ್ಷಾಸ್ವರೂಪವಾದ ಮಹಾಪ್ರಣವವ ಸ್ಥಾಪಿಸಿ ಸಕಲಾಚಾರ ಕ್ರಿಯೆಗಳಿಗೆ ಶುಭತಿಲಕವಿದೇ ಚಿದ್ವಿಭೂತಿ ಎಂದು ನಿರಂತರ ಸ್ನಾನ ಧೂಳನ ಧಾರಣವ ಮಾಡಿದರು ನೋಡಾ. ಆದರಿಂ ಮೇಲೆ ಆ ಗೋವಿನ ಕುಚಕ್ಷೀರವ ಈ ಭಸಿತದಿಂದ ಪಾವನವ ಮಾಡಿ ಪರಮಾಮೃತವೆನಿಸಿ ಶ್ರೀಗುರು ಲಿಂಗಜಂಗಮಕ್ಕೆ ಸಮರ್ಪಿಸಿ ಅವರ ಒಕ್ಕು ಮಿಕ್ಕ ಪ್ರಸಾದ ಪರಮಾಮೃತ ಶೇಷವ ನಿಜಸ್ವೇಷ್ಟೆಯಿಂದ ಲಿಂಗಾರ್ಪಿತವ ಮಾಡಿದರು ನೋಡಾ ಅದೆಂತೆಂದೊಡೆ " ವಿಭೂತಿ ವಿಭವಶ್ಚೈವ ವಿಧಿಕರ್ಮ ವಿನಾಶನಂ। ಯಮಲೋಕ ಭಯಂನಾಸ್ತಿ ಶಿವಲೋಕಂ ಮಹೀಯತೆ॥೧॥ ಪಾದಭಿನ್ನಾಹಿಲೋಕಾನಾಂ ಮೌಳಿ ಬ್ರಹ್ಮಾಂಡ ಭಿತ್ತಯೆ । ಭುಜಪ್ರಾಂತದಿಗಂತಾನಾಂ ಭೂತಾಯ ಪತಯೆನಮಃ॥೨॥ ಇಂತೆಂದುದಾಗಿ ಶ್ರೀಗುರುಲಿಂಗ ಜಂಗಮದ ಚಿತ್ಪ್ರಕಾಶ ಭಸಿತವ ಬಹಿಷ್ಕರಿಸಿ ಸಕಲ ಪ್ರಮಥಗಣಂಗಳಿಗೆ ಪರಮಪದ ಮೋಕ್ಷದ ಕಣಿ ಎಂದು ಬೋಧಿಸಿದಂಥ ಬಸವದಂಡನಾಥನ ಚರಣಕ್ಕೆ ನಮೋ ನಮೋ ಎಂಬೆನು ನೋಡಾ ಸಂಗನ ಬಸವೇಶ್ವರಾ.

ಚಿದ್ವಿಭೂತಿಯ ಮಹತ್ವ.

೧. ಶ್ರೀಗುರುಲಿಂಗ ಜಂಗಮದ ದೀಕ್ಷಾಭಸಿತವ ನಂಬಿಗೆಯಿಂದ ಅಷ್ಟೈಶ್ವರ್ಯವಿದೆಂದು ಶ್ರೀಗುರು ಸ್ಮರಣೆಯಿಂದ ಲಲಾಟದಲ್ಲಿ ಧರಿಸಿದಾಕ್ಷಣವೆ ವಿಧಿಬರೆದ ಲಿಖಿತವಂ ತೊಡೆದು ಶಿವಲಿಖಿತವ ಲಿಖಿಸುವದಯ್ಯಾ. ಶ್ರೀಗುರುಲಿಂಗ ಜಂಗಮದ ಶಿಕ್ಷಾಭಸಿತವ ಅಷ್ಟವಿಧಸ್ಥಾನ ಷೋಡಶಸ್ಥಾನಗಳಲ್ಲಿ ಧರಿಸಿದವರಿಗೆ ಗುರುತ್ವವಕೊಟ್ಟು ಲಿಂಗನಿಷ್ಠಾ ಪರಭಕ್ತಿಯ ತ್ತೋರುವದಯ್ಯಾ. ಶ್ರೀಗುರುಲಿಂಗ ಜಂಗಮದ ದೀಕ್ಷಾ ಶಿಕ್ಷಾಜ್ಞಾನ ಭಸಿತವ ಸರ್ವಾಂಗದಲ್ಲಿ ಸ್ನಾನ ಧೂಳನವ ಮಾಡಿ ನಾಲ್ಕು ಸ್ಥಾನಂಗಳಲ್ಲಿ ಮಂತ್ರ ಸ್ಮರಣೆಯಿಂದ ಧರಿಸಿದ ಲಿಂಗಶರಣರಿಗೆ ಸರ್ವಾಚಾರ ಸಂಪತ್ತಿನ ಜಂಗಮಾನುಭಾವ ತೋರುವದಯ್ಯಾ. ಸಕಲ ಕ್ರಿಯೆಗಳಿಗೆ ಈ ಕ್ರಿಯೆ

ಚಿದ್ಭಸಿತವೇ ಕಾರಣ ಸ್ವರೂಪವಯ್ಯ. ಸಕಲಾಚಾರಂಗಳಿಗೆ ಈ ಕ್ರಿಯಾ ಚಿದ್ಭಸಿತವೆ ಶುಭ ತಿಲಕವಯ್ಯ. ಶ್ರೀಗುರುಲಿಂಗ ಜಂಗಮದ ಪಾದೋದಕ ಪ್ರಸಾದ ಚಿದ್ಭಸಿತಕಿಂತ ಪರವಸ್ತುವಿಲ್ಲ ನೋಡಾ. ಅದೆಂತೆಂದೊಡೆ "ಅನಾದಿ ಶಾಶ್ವತಂ ಶಾಂತಂ ಚೈತನ್ಯಂ ಚಿತ್ಸ್ವರೂಪಕಂ। ಚಿದಂಗಂ ವೃಷಭಾಕಾರಂ ಚಿದ್ಭಸ್ಮಂ ಲಿಂಗಸ್ನಾನಯೇತ್ ॥೧॥ ಆಪಾದಮಸ್ತಕಂ ಚೈವ ರೋಮ ರೋಮೋದ್ಭವೇಶಿವಂ । ಸ್ವಕಾಯ ಮುಚ್ಯತೆಲಿಂಗಂ ವಿಭೂತಿಧೂಳನಂ ಭವೇತ್ ॥೨॥ ಪ್ರಥಮಂ ಗೂಢನಿರ್ನಾಮಂ ದ್ವಿತೀಯಂ ಚಿತ್ಸ್ವರೂಪಕಂ। ತೃತೀಯಂ ಚಿದ್ವಿಲಾಸಂಚ ಚತುರ್ಥಂ ಭಸ್ಮಧಾರಣಾತ್ ॥೩॥" ಎಂದುದಾಗಿ ಶ್ರೀಗುರುಲಿಂಗ ಜಂಗಮದ ಚಿತ್ಪ್ರಕಾಶ ಚಿದ್ಭಸಿತವೆ ಪರಾತ್ಪರ ವಸ್ತು ನೋಡಾ ಸಂಗನ ಬಸವೇಶ್ವರಾ.

ಚಿದ್ರುದ್ರಾಕ್ಷಿ.

೧. ಹರಹರಾ ಶಿವಶಿವಾ ಮತ್ಪ್ರಾಣನಾಥ ಮಹಾ ಪರಾತ್ಪರ ಬ್ರಹ್ಮ ಪ್ರಭು ಶ್ರೀ ಗುರುಲಿಂಗಜಂಗಮದ ಕರುಣಾಕಟಾಕ್ಷೆಯಿಂದ ಹರನ ತ್ರಿಪಿಥನೇತ್ರದಿಂಮುದಯವಾದ ತ್ರಿವಿಧ ವರ್ಣದ ಬಿಂದುಗಳ ಅನಾದಿ ಚಿತ್ಪ್ರಭು ಬಸವೇಶ್ವರ ಸ್ವಾಮಿಗಳವರು ಆ ಬಿಂದುಗಳ ತನ್ನ ಅನಿಮಿಷ ದೃಷ್ಟಿಯಿಂದ ನಿರೀಕ್ಷಿಸಿ ಚಿದ್ಬಿಂದು ಚಿನ್ಮಂತ್ರ ಮಣಿ ಮಾಲಿಕೆ ಎಂದು ತಮ್ಮ ತತ್ತತ್ ಸ್ಥಾನಂಗಳಲ್ಲಿ ಧರಿಸಿ, ಮಹಾ ಪ್ರಭು ನಿರಂಜನ ಜಂಗಮಕ್ಕೆ ಇಪ್ಪತ್ತೊಂದು ಲಕ್ಷ ಮಣಿಗಳಿಂದ ಶೂನ್ಯ ಸಿಂಹಾಸನದ ಮೇಲೆ ಮಹಾ ಪ್ರಭು ನಿರಂಜನ ಜಂಗಮನ ಮೂರ್ತವ ಮಾಡಿಸಿ, ಮಹಾ ವೈಭವದಿಂದ ಸಕಲ ಮಹಾ ಪ್ರಮಥಗಣಂಗಳಿಗೆ ಆ ಚಿದ್ಬಿಂದುಗಳ ಮೂಲದಲ್ಲಿ ಅನಾದಿ ಗುರು ಅನಾದಿ ಪ್ರಣಮುವ ಸಂಬಂಧವ ಮಾಡಿ ನಾಳವಲ್ಲಿ ಅನಾದಿ ಜಂಗಮ ಚಿತ್ಪ್ರಕಾಶ ಚಿದ್ಭಸಿತವ ಸಂಬಂಧವ ಮಾಡಿ ಮಹಾ ಸಂತೋಷವೆಂಬ ಹರುಷಾನಂದ ಜಲ ಉಕ್ಕಿ ಕಡಗ ಕಂಠಮಾಲೆ ಕರ್ಣಾಭರಣ ಹಾರ ಹೀರಾವಳಿಗಳ ಮಾಡಿ ಧರಿಸಿ ಚಿಂತಾಮಣಿ ಎಂದು ಪ್ರಮಥಗಣ ರುದ್ರಗಣ ಷೋಡಶಗಣ ತೇರಸಗಣ ಮರ್ತ್ಯಲೋಕದ ಮಹಾಗಣಸಮೂಹಕ್ಕೆಲ್ಲಾ ಬೋಧಿಸಿದರು ನೋಡಾ. ಅದೆಂತೆಂದೊಡೆ "ನೇತ್ರಾತ್ ಸೂರ್ಯಾತ್ ಮನಃ ಶಂಭೋ ಕಪಿಲಾ ದ್ವಾದಶಾವೃತಃ । ಶ್ವೇತಷೋಡಶ ಸಂಜಾತಂ ಸೋಮರೂಪ ದ್ವಿಲೋಚನಾತ್ ॥೧॥ ಕೃಷ್ಣೋದಶ ವಿಘೋ

ಜಾತಾವಹ್ನಿರೂಪತ್ರಿ ಲೋಚನಾತ್ । ರುದ್ರನಯನಾಂಬು ಜಾತಾನಿ ರುದ್ರಾಕ್ಷಾಣಿ ಸರ್ವೋತ್ತಮಾ ||೨|| ಯೋಧತ್ತೆ ಭಸ್ಮ ರುದ್ರಾಕ್ಷಂ ಸರುದ್ರೋನಾತ್ರ ಸಂಶಯಃ ಎಂದುದಾಗಿ ಶ್ರೀ ಗುರುಲಿಂಗಜಂಗಮದ ಕರುಣಾಕಟಾಕ್ಷೆಯಿಂದುದಯವಾದ ಚಿನ್ಮಂತ್ರ ಮಾಲಿಕೆಯೇ ಪರಮಚಿಂತಾಮಣಿ ನೋಡಾ ಸಂಗನಬಸವೇಶ್ವರಾ.

ಚಿದ್ರುದ್ರಾಕ್ಷಿಯ ಮಹತ್ವ.

೧. ಶ್ರೀ ಗುರುಲಿಂಗಜಂಗಮದ ಕರುಣಾ ಕಟಾಕ್ಷೆಯಿಂದುದಯವಾದ ಮಂತ್ರಮಣಿಯೇ ಅಷ್ಟ ಮಹದೈಶ್ವರ್ಯ ಮಹಾರುದ್ರಾಕ್ಷಿಯ ಸಂಗದಿಂದೆ ಶಿವಗಣಂಗಳ ಭೃತ್ಯಾಚಾರ ಭಕ್ತಿ ದೊರೆವುದಯ್ಯ. ರುದ್ರಾಕ್ಷಿಯ ಸಂಗದಿಂದೆ ನಿಷ್ಕಳಂಕ ಮಹಾಲಿಂಗದ ರತಿ ಸಂಯೋಗ ದೊರೆವುದಯ್ಯ. ಶ್ರೀ ಮಹಾ ರುದ್ರಾಕ್ಷಿಯ ಸಂಗದಿಂದ ಚತುರ್ವಿಧ ಷಡ್ವಿಧ ದ್ವಾದಶ ಷೋಡಶ ತರದ ಭಕ್ತಿ ಮೊದಲಾಗಿ ೪೮ ತರದ ಸದ್ಭಕ್ತಿ ದೊರೆವುದಯ್ಯ. ರುದ್ರಾಕ್ಷಿಯ ಸಂಗದಿಂದ ನಿಜಕೈವಲ್ಯ ದೊರೆವುದಯ್ಯ. ರುದ್ರಾಕ್ಷಿಯ ಸಂಗದಿಂದೆ ನಿಜ ಮೋಕ್ಷ ದೊರೆವುದಯ್ಯ. ರುದ್ರಲೋಕದ ರುದ್ರಗಣಂಗಳು, ಶಿವಗಣಂಗಳು. ಶಾಂಭವ ಗಣಂಗಳು ನಾಗ ಗಣಂಗಳು ಪ್ರತ್ಯಕ್ಷವಾಗಿ ಅವರು ಪಾದೋದಕ ಪ್ರಸಾದಕ್ಕೆ ಯೋಗ್ಯವೆಂದೆನಿಸುವರಯ್ಯ. ಶ್ರೀ ಮಹಾರುದ್ರಾಕ್ಷಿಯು ಘನಕ್ಕೆ ಘನಮಹದೈಶ್ವರ್ಯ ನೋಡಾ. ಅದೆಂತೆಂದೊಡೆ " ಹಸ್ತೆ ಚೋರಸಿ ಕಂಠೆ ಮಸ್ತಕೇವಾಪಿ ಧಾರಯೇತ್ । ನಶ್ಯಂತಿ ಸರ್ವಪಾಪೇಭ್ಯೋ ರುದ್ರಾಕ್ಷಸ್ಯಚ ಧಾರಣಾತ್ ||೧|| ರುದ್ರಾಕ್ಷೆ ಧಾರಣಂ ಹಸ್ತೆವಕ್ಷಸ್ಥೋಪಿಚ ಮಸ್ತಕೇ। ಚಿಹ್ನಂ ಶಿವಾತ್ರಮಾಸ್ಥಾನಂ ಭಸ್ಮನಾಚ ತ್ರಿಪುಂಡ್ರಕಂ ||೨|| ಇಂತೆಂದುದಾಗಿ ಶ್ರೀ ಗುರುಲಿಂಗಜಂಗಮದ ಕರುಣಾಕಟಾಕ್ಷ ಮಣಿಯೆ ಪರಮ ಚಿದಾಭರಣ ನೋಡಾ ಸಂಗನಬಸವೇಶ್ವರಾ.

ಮಂತ್ರ.

೧. ಹರಹರಾ ಶಿವಶಿವಾ ಮತ್ಪ್ರಾಣನಾಥಾ ಮಹಾಮಂತ್ರ ಸ್ವರೂಪ ಅನಾದಿ ಮಹಾ ಪ್ರಭು ಶ್ರೀ ಗುರುಲಿಂಗಜಂಗಮದ ಕರುಣಾಕಟಾಕ್ಷೆ

ಯಿಂದುದಯುವಾದ ಮಹಾ ಪ್ರಣಮವೇ ನಿಜವಸ್ತು ನೋಡಾ. ಆ ಪ್ರಣವುದಿಂದುದಯುವಾದ ತ್ರ್ಯಕ್ಷರ ಪಂಚಾಕ್ಷರ ಷಡಕ್ಷರಗಳೇ ಮಹಾಮಂತ್ರ ನೋಡಾ. ಆ ಮಹಾಮಂತ್ರವೇ ಪರಬ್ರಹ್ಮವಸ್ತು ನೋಡಾ. ಆ ಮಹಾಮಂತ್ರವೇ ನಿಷ್ಕಲ ನಿಶ್ಶೂನ್ಯ ನಿರಂಜನ ಗುರುಲಿಂಗಜಂಗಮದ ಪಾದೋದಕ ಪ್ರಸಾದ ಚಿದ್ವಿಭೂತಿ ರುದ್ರಾಕ್ಷಿಗಳಿಗೆಲ್ಲಾ ಮೂಲ ಬೀಜಾಂಕುರ ನೋಡಾ. ಆ ಮಹಾಮಂತ್ರವೆ ಅನಾದಿ ಶರಣನ ಚಿದೈಶ್ವರ್ಯ ಚಿದಾಭರಣ ನೋಡಾ. ಅದೆಂತೆಂದೊಡೆ "ಓಂಕಾರಂ ಪ್ರಭವಾವೇದಂ ಓಂಕಾರಂ ಪ್ರಭವಸ್ವರಂ । ಓಂಕಾರ ಪ್ರಭವಾತ್ಸರ್ವಂ ತ್ರೈಲೋಕ್ಯಂ ಸಚರಾಚರಂ ॥೨॥ ಸಪ್ತಕೋಟಿ ಮಹಾ ಮಂತ್ರ ಚಿತ್ತವ್ಯಾಕುಳ ಕಾರಣಂ ಏಕಮೇಕಾಕ್ಷರಂ ದೇವಿ ತೂರ್ಯಾತೀತ ಮನೋರ್ಲಯಂ ॥೨॥ ಇಂತೆಂದುದಾಗಿ ಮಹಾಮಂತ್ರವೇ ಸಕಲಾಚಾರ ಕ್ರಿಯಾಜ್ಞಾನಂಗಳಿಗೆ ಸಂಜೀವನ ನೋಡಾ ಸಂಗನಬಸವೇಶ್ವರಾ.

೨. ಆ ಇಷ್ಟಮಹಾಲಿಂಗವೇ ಅನಾದಿ ಶರಣನ ಆಧಾರಚಕ್ರದಲ್ಲಿ ನಕಾರಮಂತ್ರ ಮೂರ್ತಿಯಾಗಿ ನೆಲಿಸಿರ್ಪುದು ನೋಡಾ. ಅನಾಹತ ಚಕ್ರದಲ್ಲಿ ಮಕಾರ, ಸ್ವಾಧಿಷ್ಠಾನ ಚಕ್ರದಲ್ಲಿ ಶಿಕಾರಮಂತ್ರ ಮೂರ್ತಿಯಾಗಿ ನೆಲಿಸಿರ್ಪುದಯ್ಯಾ. ಆ ಮಹಾಲಿಂಗವೆ ಮಣಿಪೂರಕ ಚಕ್ರದಲ್ಲಿ ಶಿಕಾರಮಂತ್ರ ಮೂರ್ತಿಯಾಗಿ ನೆಲಿಸಿರ್ಪುದಯ್ಯಾ. ವಿಶುದ್ಧಿ ಚಕ್ರದಲ್ಲಿ ವಕಾರಮಂತ್ರ ಮೂರ್ತಿಯಾಗಿ ನೆಲಿಸಿರ್ಪುದಯ್ಯಾ. ಆ ಮಹಾಲಿಂಗವೇ ಆಜ್ಞಾಚಕ್ರದಲ್ಲಿ ಯಕಾರಮಂತ್ರ ಮೂರ್ತಿಯಾಗಿ ನೆಲಿಸಿರ್ಪುದು ನೋಡಾ. ಬ್ರಹ್ಮರಂಧ್ರದಲ್ಲಿ ಓಂಕಾರ ಮೂರ್ತಿಯಾಗಿ ನೆಲಿಸಿರ್ಪುದು ನೋಡಾ. ಶಿಖಾಚಕ್ರದಲ್ಲಿ ಕ್ಷಕಾರ ಮಂತ್ರ ಮೂರ್ತಿಯಾಗಿ ನೆಲಿಸಿರ್ಪುದು ನೋಡಾ. ಪಶ್ಚಿಮಚಕ್ರದಲ್ಲಿ ವ್ಯಂಜನವಿಲ್ಲದ ಪಕಾರಮಂತ್ರ ಮೂರ್ತಿಯಾಗಿ ನೆಲಿಸಿರ್ಪುದು ನೋಡಾ. ಈ ಪ್ರಕಾರದಿಂದ ಅನಾದಿಶರಣನ ಸರ್ವಾಂಗದಲ್ಲಿ ಕಿಷ್ಕಿಂಧಮಯವಾಗಿ ತುಂಬಿಕೊಂಡಿರ್ಪುದು ನೋಡಾ. ಅದೆಂತೆಂದೊಡೆ, " ಅರೂಪಂ ನಿಷ್ಕಲ ಬ್ರಹ್ಮ ಭಾವಾತೀತಂ ನಿರಂಜನಂ । ಶಬ್ದಾದಿ ವಿಷಯಾತೀತಂ ಮೂಲಲಿಂಗ ಮೋಹೋಚ್ಯತೆ ॥೧॥ ಮೂಲಮಂತ್ರ ಸ್ವರೂಪಾಯ ಮೂಲಮಂತ್ರಾತ್ಮರೂಪಿಣೆ। ಮೂಲಪ್ರಕೃತಿ ಸಂಜ್ಞಾಯ ಮೂಲಸ್ತಂಭಾಯ ಶಂಭವೇ ॥೨॥ ಸ್ವಯಂಭು ಸರ್ವಚೈತನ್ಯಂ ತತ್ವ ಮೂಲಾಧರಾಂಕಿತಂ । ಪರಶಕ್ತಿ ಸಮಾಯೋಗಂ ಜಗತ್ಸೃಷ್ಟ್ಯಾರ್ಥ ಕಾರಣಂ ॥೩॥ ಎಂದುದಾಗಿ ಇಂತಪ್ಪ ಪರಂ

ಜ್ಯೋತಿ ಚಿದ್ಘನ ಮಹಾಲಿಂಗವ ಪ್ರಮಾಣಿಸಿ ನೋಡಿಹೆನೆಂದವರಿಗೆ ಅತ್ಯತಿಷ್ಠದ್ದಶಾಂಗುಲವಾಗಿರ್ಪುದು ನೋಡಾ ಸಂಗನಬಸವೇಶ್ವರಾ.

ಮಂತ್ರ ಮಹಾತ್ಮೆ.

೨. ಶ್ರೀಮಹಾಮಂತ್ರ ಜಪಿಸಿದಾತಂಗೆ ಮರ್ತ್ಯಲೋಕ ಮೊದಲಾಗಿ ಆವಲೋಕದಲ್ಲಿ ಹೋದರೂ ಸಮಸ್ತ ಲಿಂಗಭೋಗ ದೊರೆವುದಯ್ಯಾ. ಮಹಾಮಂತ್ರವ ಜಪಿಸಿದಾತಂಗೆ ಸಮಸ್ತ ಲೋಕದಲ್ಲಿ ಸತ್ಯ ಸಾತ್ವಿಕ ಪರೋಪಕಾರ ಸುಗುಣ ದೊರೆವುದಯ್ಯಾ. ಶ್ರೀಮಹಾಮಂತ್ರವ ಜಪಿಸಿದಾತಂಗೆ ಸಾರ ಸದ್ಭಕ್ತಿ ದೊರೆವುದಯ್ಯಾ. ಕ್ಷಮೆ ದಮೆ ಶಾಂತಿ ಸೈರಣೆ ಸತ್ಕ್ರಿಯಾಜ್ಞಾನ ಸದಾಚಾರ ದೊರೆವುದಯ್ಯಾ. ಶ್ರೀಮಹಾಮಂತ್ರವ ಜಪಿಸಿದಾತಂಗೆ ನಿಜ ಶಿವಯೋಗ ದೊರೆವುದಯ್ಯಾ. ಅದೆಂತೆಂದೊಡೆ "ಅಪವಿತ್ರ ಪವಿತ್ರೋವಾ ಸರ್ವವಸ್ತು ಗತೋಪಿವಾ। ಸ್ಮರೇನ್ನಮಃ ಶಿವಾಯೇತಿ ಪಾಪ ಪ್ರಲೀಯತೇ॥೧॥ ಸಪ್ತಕೋಟಿ ಮಹಾಮಂತ್ರ ಉಪಮಂತ್ರ ಸ್ತ್ವನೇಕತಃ। ಮಹ್ಯಂ ನಮಃ ಶಿವಾಯೇತಿ ಮಂತ್ರ ಸ ರೋಚ್ಯತೆ॥ ಎಂದುದಾಗಿ ಮಹಾಮಂತ್ರವೆ ಸಕಲ ಕಾರಣಕ್ಕೆ ಮೂಲ ಚೈತನ್ಯ ನೋಡಾ ಸಂಗನಬಸವೇಶ್ವರಾ.

ಅಧೋ ಕುಂಡಲಿ.

೧. ಅಯ್ಯಾ ಪ್ರವೃತ್ತಿ ಮಾರ್ಗದಲ್ಲಿ ಚರಿಸುವಲ್ಲಿ ಅಧೋ ಕುಂಡಲಿಯ ಭೇದವೆಂತೆಂದೊಡೆ ದ್ವಾದಶ ಕಮಲಂಗಳೇ ಅಂಗವಾಗಿರ್ಪುವಯ್ಯಾ. ಷೋಡಶ ಮದಂಗಳೇ ಪ್ರಾಣವಾಗಿರ್ಪುವಯ್ಯಾ. ಸಪ್ತ ವ್ಯಸನಂಗಳೇ ಸಂಗವಾಗಿರ್ಪುವಯ್ಯಾ. ದುರ್ಗುಣಂಗಳೇ ವಸ್ತ್ರಾಭರಣವಾಗಿರ್ಪುವಯ್ಯಾ. ಅನಾಚಾರಂಗಳೇ ನಡೆ ನುಡಿಯಾಗಿರ್ಪುವಯ್ಯಾ. ಅಸತ್ಯವೇ ವಾಹನವಾಗಿರ್ಪುವಯ್ಯಾ. ಕುಭಾವಂಗಳೇ ಪಿತ ಮಾತೆಯಾಗಿರ್ಪುವಯ್ಯಾ. ಕುಚಿತ್ತಗಳೇ ಬಂಧು ಬಳಗವಾಗಿರ್ಪುವಯ್ಯಾ. ಕುಬುದ್ಧಿಗಳೇ ಒಡಹುಟ್ಟಿದವರಾಗಿರ್ಪವಯ್ಯಾ. ದುರಹಂಕಾರಗಳೇ ನೆಂಟರಾಗಿರ್ಪುವಯ್ಯಾ. ಕುಮನವೆ ಸ್ತ್ರೀಯುಳಾಗಿರ್ಪಳಯ್ಯಾ. ಅಜ್ಞಾನವೇ ಮಂದಿರವಾಗಿರ್ಪುದಯ್ಯಾ. ದುರ್ಭಾವವೇ

ಆಹಾರವಾಗಿರ್ಪುದಯ್ಯ. ಅರಿಷಡ್ವರ್ಗವೇ ದೈವವಾಗಿರ್ಪುದಯ್ಯ. ಷಡ್ಭಾವ ವಿಕಾರಗಳೇ ಅವಯವಗಳಾಗಿರ್ಪವಯ್ಯ. ಆಶೆಯೇ ಧನಧಾನ್ಯವಾಗಿರ್ಪುದಯ್ಯ. ಇಂತು ಸಂಸಾರವೆಂಬ ಪಾಶದಲ್ಲಿ ಜನ್ಮ ಜರೆಮರಣಂಗಳಿಂದ ತಿರುಗುವ ಜೀವನೇ ಅಧೋ ಕುಂಡಲಿ ಸರ್ಪನೆನಿಸುವನಯ್ಯ. ಆ ಸರ್ಪನೆ ಮೂಲಾಹಂಕಾರವೆಂಬ ಪಟ್ಟಣವ ರಚಿಸಿ ಜಿಹ್ವಾಲಂಪಟ ಗುಹ್ಯಾಲಂಪಟದಲ್ಲಿ ಮುಳು ಮುಳುಗಿ ತೇಲುತಿರ್ಪುದು ನೋಡಾ ಸಂಗನಬಸವೇಶ್ವರಾ.

ಊರ್ಧ್ವ ಕುಂಡಲಿ.

೧. ಅಯ್ಯಾ ನಿವೃತ್ತಿ ಮಾರ್ಗದಲ್ಲಿ ಚರಿಸುವ ಊರ್ಧ್ವಕುಂಡಲಿ ಭೇದವೆಂತೆಂದೊಡೆ ಕಿಂಕುರ್ವಾಣ ಭಕ್ತಿಯೆ ಅಂಗವಾಗಿರ್ಪುದಯ್ಯ. ಸಚ್ಚಿದಾನಂದವೇ ವಸ್ತ್ರಾಭರಣವಾಗಿರ್ಪುದಯ್ಯ. ಸನ್ಮಾರ್ಗಾಚಾರಂಗಳೆ ನಡೆನುಡಿಯಾಗಿರ್ಪವಯ್ಯ. ಸುಸತ್ಯವೆ ವಾಹನವಾಗಿರ್ಪುದಯ್ಯ. ದಯಾಂತಃಕರಣವೇ ಪಿತಮಾತೆಯಾಗಿರ್ಪುದಯ್ಯ. ಸುಚಿತ್ತವೇ ಬಂಧುಬಳಗವಾಗಿರ್ಪುದಯ್ಯ. ಸುಬುದ್ಧಿಗಳೇ ಒಡಹುಟ್ಟಿದರಾಗಿರ್ಪವಯ್ಯ. ನಿರಹಂಕಾರವೇ ನೆಂಟರಾಗಿರ್ಪವಯ್ಯ. ಸುಮನವೆ ಸ್ತ್ರೀಯಳಾಗಿಪ್ಪುದಯ್ಯ. ಸುಜ್ಞಾನವೇ ಮಂದಿರವಾಗಿರ್ಪುದಯ್ಯ. ಸದ್ಭಾವವೆ ಆಹಾರವಾಗಿರ್ಪುದಯ್ಯ. ನಿತ್ಯ ನಿಜವೆ ದೈವವಾಗಿರ್ಪುದಯ್ಯ. ನಿರಾಶೆಯೆ ಅವಯವಂಗಳಾಗಿರ್ಪುದಯ್ಯ. ನಿಃಕಾಮ್ಯಗಳೇ ಧನಧಾನ್ಯಗಳಾಗಿರ್ಪವಯ್ಯ. ಇಂತು ನಿಃಸಂಸಾರವೆಂಬ ಅವಿರಳಾನಂದದಿಂದ ಸದ್ಗುರೂಪಾವಸ್ಥೆಯ ಮಾಡುವ ಸಜ್ಜೀವನೇ ಊರ್ಧ್ವಕುಂಡಲಿ ಸರ್ಪನಯ್ಯ. ಆ ಸರ್ಪನೆ ಮಾಯಾ ಪ್ರಪಂಚವ ಹೇವರಿಸಿ, ಅನಂತ ಮುಖದಿಂದ ನಿರ್ವಾಯು ಸ್ವರೂಪವಾದ ಮಹಾಪ್ರಮಥ ಗಣಂಗಳತ್ತಭಿಮುಖವಾಗಿರ್ಪುದಯ್ಯ. ಈ ಸರ್ಪಂಗೆ ಬೇಕುಬೇಡೆಂಬ ಜಿಹ್ವಾಲಂಪಟ ಗುಹ್ಯಾಲಂಪಟವಿಲ್ಲ ನೋಡಾ ಸಂಗನಬಸವೇಶ್ವರಾ.

ಮಧ್ಯ ಕುಂಡಲಿ.

೧. ಅಯ್ಯಾ ಇನ್ನು ಪ್ರವೃತ್ತಿ ನಿವೃತ್ತಿ ಅಧೋಕುಂಡಲಿ ಊರ್ಧ್ವಕುಂಡಲಿಗಳೆಂಬ ಉಭಯ ಮಾರ್ಗವ ಶಿವಾಜ್ಞೆಯಿಂದ ತೀರ್ಚಿಸಿ ಶಿವಯೋಗ ಶಿವಾಚಾರ ಶಿವಭಕ್ತಿ ಶಿವಾನಂದ ಪರಿಣಾಮದಲ್ಲಿ ಚರಿಸುವ ಮಧ್ಯಕುಂಡಲಿ

ಸ್ವರೂಪವಾದ ಮಹಾ ಶೇಷನ ಭೇದವೆಂತೆಂದೊಡೆ ಷೋಡಶವರ್ಣವೇ ಅಂಗವಾಗಿರ್ಪುದಯ್ಯ. ಸರ್ವಾಚಾರ ಸಂಪತ್ತಿನಾಚರಣೆಯೆ ಪ್ರಾಣವಾಗಿರ್ಪುದಯ್ಯ. ಚತುರ್ದಶ ಪ್ರಣವಂಗಳೇ ತತ್ಸಂಗವಾಗಿರ್ಪುದಯ್ಯ. ಭಕ್ತಿ ಜ್ಞಾನ ವೈರಾಗ್ಯ ಷಟ್ಸ್ಥಲವೇ ವಸ್ತ್ರಾಭರಣವಾಗಿರ್ಪುದಯ್ಯ. ಹರಗುರು ವಾಕ್ಯವೇ ನಡೆನುಡಿಯಾಗಿರ್ಪುದಯ್ಯ. ಪಂಚಾಚಾರಂಗಳೇ ವಾಹನವಾಗಿರ್ಪುದಯ್ಯ. ಕರಣ ವಿಷಯ ಸಮತೆ ಶುದ್ಧ ಸಿದ್ಧ ಪ್ರಸಿದ್ಧವೆ ಪಿತಮಾತೆಯಾಗಿರ್ಪುದಯ್ಯ. ಚತುರ್ವರ್ಣವೇ ಮೊದಲಾಗಿ ಐವತ್ತೆರಡು ವರ್ಣಂಗಳೆ ಬಂಧು ಬಳಗವಾಗಿರ್ಪುದಯ್ಯ. ಷಡಕ್ಷರ ಮಂತ್ರ ಮೊದಲಾಗಿ ನೂರೆಂಟು ಮಂತ್ರ ಮಾಲಿಕೆಯೆ ಒಡಹುಟ್ಟಿದವರಾಗಿರ್ಪುದಯ್ಯ. ಸಪ್ತಕೋಟಿ ಮಹಾಮಂತ್ರಂಗಳೆ ನೆಂಟರಾಗಿರ್ಪುದಯ್ಯ. ಷೋಡಶ ಭಕ್ತಿಗಳೆ ಅರ್ಧಾಂಗಿನಿಯಾಗಿರ್ಪುದಯ್ಯ. ನೂರೆಂಟು ಸಕೀಲು ಮೊದಲಾಗಿ ಸಮಸ್ತ ಸಕೀಲಂಗಳೆ ಮಂದಿರವಾಗಿರ್ಪುದಯ್ಯ. ಸ್ವಾನುಭವ ಸೂತ್ರವೆ ನಿಜನೈಷ್ಠೆ ನಿರ್ಲಜ್ಜೆ ನಿರಾಶವೆಂಬ ನಿಃಪ್ರಪಂಚವೆ ಧನಧಾನ್ಯವಾಗಿರ್ಪುದಯ್ಯ. ಇಂತು ನಿಃಕಳಂಕ ಪರಮಾನಂದವೆಂಬ ಸತ್ತು ಚಿತ್ತಾನಂದ ನಿತ್ಯ ಪರಿಪೂರ್ಣ ಅವಿರಳ ಪರಂ ಜ್ಯೋತಿ ಸ್ವರೂಪದಿಂದ ಕನ್ನಡಿಯ ಪ್ರತಿಬಿಂಬದಂತೆ ಇಹಪರಂಗಳೆಂಬ ಅಧೋಕುಂಡಲಿ ಊರ್ಧ್ವಕುಂಡಲಿ ಎಂಬ ಉಭಯ ಮಧ್ಯದಲ್ಲಿ ನೆಲಿಸಿರ್ಪ ಪರತತ್ವವೆ ಶಿವಭಕ್ತನೆಂಬ ಮಧ್ಯ ನಾಮವುಳ್ಳ ಮಹಾ ಶೇಷ ನೋಡಾ ಸಂಗನಬಸವೇಶ್ವರಾ.

ಶಿವಯೋಗ.

೧. ಅಯ್ಯಾ ಇನ್ನು ಹಠಯೋಗವ ಮರೆದು ಶಿವಯೋಗದಲ್ಲಿ ನಿಂದ ಭೇದವೆಂತೆಂದೊಡೆ, ಆ ನಿಲುಕಡೆಯ ಶ್ರೀಗುರು ಕಟಾಕ್ಷೆಯಿಂದ ನಿರೂಪಿಸುವೆವು ಕೇಳಯ್ಯ, ವರಕುಮಾರ ದೇಶಿಕೋತ್ತಮನೆ. ವಾಮ ಭಾಗದ ಚಂದ್ರನಾಳ ಚಂದ್ರನೇತ್ರ ವಾಮಕರಣ ದ್ವಾರಂಗಳು ಮೂರು ಈಡಾ ನಾಡಿ ಎನಿಸುವದಯ್ಯ. ದಕ್ಷಿಣ ಭಾಗದ ಸೂರ್ಯನಾಳ ಸೂರ್ಯನೇತ್ರ ದಕ್ಷಿಣಕರ್ಣ ದ್ವಾರಂಗಳು ಮೂರುಪಿಂಗಳನಾಡಿ ಎನಿಸುವದಯ್ಯ. ಅಧೋದ್ವಾರ ಗುಹ್ಯದ್ವಾರ ಜಿಹ್ವಾದ್ವಾರ ಇವು ಮೂರು ಸುಷುಮ್ನನಾಡಿ ಎನಿಸುವದಯ್ಯ. ಮಣಿಪೂರಕ ವಿಶುದ್ಧಿ ಬ್ರಹ್ಮ ಇವು ಮೂರು ಇಪ್ಪತ್ತೆರಡು ಸಾವಿರನಾಡಿಗಳಿಗೆ ಮೂಲ ಸೂತ್ರವಾದ ಮಧ್ಯ ನಾಡಿ ಎನಿಸುವದಯ್ಯ.

ಇಂತೀ ದಶ ದ್ವಾರಂಗಳಲ್ಲಿ ಚರಿಸುವ ಮನ್ಮಥ ವಿಕಾರವಂ ಗುರೂಪಾವ ಸ್ಥೆಯಿಂ ಹಿಂದು ಮಾಡಿ ತನ್ನ ಸತ್ಯವೆ ಮುಂದಾಗಿ ತನ್ನ ನಡೆನುಡಿಗಳ ತನ್ನ ತಾನೆ ವಿಚಾರಿಸಿ ಸದ್ಗುರು ಲಿಂಗ ಜಂಗಮದಿಂದ ಶಿವದೀಕ್ಷೆಯ ಪಡೆದು, ಲಿಂಗಾಂಗ ಸಂಬಂಧಿಯಾಗಿ ಆ ಲಿಂಗ ಚೈತನ್ಯ ಸ್ವರೂಪವಾದ ಪಾದೋದಕ ಪ್ರಸಾದ ಮಂತ್ರದಿಂದ ಆ ತ್ರಿವಿಧ ನಾಡಿಗಳು ಮೊದಲಾಗಿ ದ್ವಾದಶ ನಾಡಿಗಳೇ ಕಡೆಯಾದ ಸಮಸ್ತ ನಾಡಿಗಳು ಪವಿತ್ರ ಸ್ವರೂಪವಾಗಿ ಸರ್ವಾವಸ್ಥೆಯಲ್ಲಿ ಚಿದ್ಘನ ಮಹಾಲಿಂಗವ ಅಷ್ಟವಿಧಾರ್ಚನೆ ಷೋಡಶೋ ಪಚಾರವನೊಡಗೂಡಿ ಪರಿಪರಿಯಿಂದರ್ಚಿಸಿ ಆಚಾರಭ್ರಷ್ಟರ ತ್ರಿಕರಣಗ ಳಿಂದ ಸೋಂಕದೆ ಅಂಗಕರಣಂಗಳಾಗಿ ಸತ್ಕ್ರಿಯೆ ಜ್ಞಾನಾನಂದವೆ ಪ್ರಭಾ ವಿಸಿ ಶ್ರೀಗುರು ಲಿಂಗ ಜಂಗಮ ಪಾದೋದಕ ಪ್ರಸಾದ ವಿಭೂತಿ ರುದ್ರಾಕ್ಷಿ ಮಂತ್ರ ಸದಾಚಾರ ಸದ್ಭಕ್ತಿ ಸತ್ಕ್ರಿಯ ಸಮ್ಯಜ್ಞಾನ ಸದ್ವರ್ತನೆ ಎಂಬ ಚಿದೈ ಶ್ವರ್ಯದಲ್ಲಿ ಸಂತೃಪ್ತರಾಗಿ ನಿಂದ ನಿಲುಕಡೆಯಲ್ಲಿ ಪೂರ್ಣ ಸ್ವರೂಪ ನಿಜ ಶಿವಯೋಗಿಗಳು ನಿಮ್ಮ ಶರಣರು ನೋಡಾ ಸಂಗನಬಸವೇಶ್ವರಾ.

೨. ಅಯ್ಯಾ ನಾದನಾಳಂಗಳಂ ಬಲಿದು ಪರಿಪೂರ್ಣ ಚಿಜ್ಜ್ಯೋತಿ ರ್ಲಿಂಗ ಧ್ಯಾನದಲ್ಲಿ ನಿಂದು ನಿಜಹೃದಯ ಚಿದ್ಭಾವ ದೃಕ್ಕಿನಿಂದ ನವಲಿಂಗಂ ಗಳ ನಿರೀಕ್ಷಿಸಿ ಸುಚಿತ್ತ ಸುಬುದ್ಧಿ ನಿರಹಂಕಾರ ಸುಮನ ಸುಜ್ಞಾನ ಸದ್ಭಾವ ನಿರುಪಾಧಿಕ ನಿಃಕಳಂಕ ನಿರಾಲಂಬ ಹಸ್ತದಿಂದರ್ಚಿಸಿ ಎರಡಳಿದು ನಿರ ವಯ ಸಮಾಧಿಯಲ್ಲಿ ಕೂಡುವ ನಿಜದಿರವ ನೋಡಾ ಸಂಗನಬಸವೇಶ್ವರಾ.

ನವಲಿಂಗ ಪೂಜೆ.

೧. ಅಯ್ಯಾ ತಾರಕಾಕೃತಿ ಮೊದಲಾದ ನವಾಕೃತಿಗಳು ವಕಾರ ಪ್ರಣವ ಮೊದಲಾಗಿ ನವಪ್ರಣವಗಳು ಭ್ರಮರನಾದ ಮೊದಲಾಗಿ ನವನಾದಗಳು ಆಧಾರಚಕ್ರ ಮೊದಲಾಗಿ ನವಚಕ್ರಗಳು ಪೀತವರ್ಣ ಮೊದಲಾಗಿ ನವವ ರ್ಣಗಳು ಭಕ್ತಸ್ಥಲ ಮೊದಲಾಗಿ ನವಸ್ಥಲಗಳು ಸ್ಥೂಲತನು ಮೊದಲಾಗಿ ನವತನುಗಳು ಸುಚಿತ್ತಹಸ್ತ ಮೊದಲಾಗಿ ನವಹಸ್ತಗಳು ಆಚಾರಲಿಂಗವೇ ಮೊದಲಾಗಿ ನವಲಿಂಗಗಳು ಘ್ರಾಣಮುಖ ಮೊದಲಾಗಿ ನವಮುಖಗಳು ಶ್ರದ್ಧಾಭಕ್ತಿ ಮೊದಲಾಗಿ ನವಭಕ್ತಿಗಳು ಗಂಧಪದಾರ್ಥ ಮೊದಲಾಗಿ ನವ ಪದಾರ್ಥಗಳು ಸುಗಂಧ ಪ್ರಸಾದ ಮೊದಲಾಗಿ ನವಪ್ರಸಾದಗಳು ಬ್ರಹ್ಮ

ಪೂಜಾರಿ ಮೊದಲಾಗಿ ನವಪೂಜಾರಿಗಳು ಬ್ರಹ್ಮನಧಿದೇವತೆ ಮೊದಲಾಗಿ
ನವ ಅಧಿದೇವತೆಗಳು ಕರ್ಮಸಾದಾಖ್ಯ ಮೊದಲಾಗಿ ನವಸಾದಾಖ್ಯಗಳು
ಸತ್ಕುಲಕ್ಷಣ ಮೊದಲಾಗಿ ನವಲಕ್ಷಣಗಳು ಪರವೆಂಬ ಸಂಜ್ಞೆ ಮೊದಲಾಗಿ
ನವಸಂಜ್ಞೆಗಳು ಪೂರ್ವದಿಕ್ಕು ಮೊದಲಾಗಿ ನವದಿಕ್ಕುಗಳು ಋಗ್ವೇದ ಮೊದ
ಲಾಗಿ ನವವೇದಗಳು ಚಿತ್ಪೃಥ್ವಿ ಮೊದಲಾಗಿ ನವ ಅಂಗಗಳು ಜೀವಾತ್ಮ
ಮೊದಲಾಗಿ ನವ ಆತ್ಮರು ಕ್ರಿಯಾಶಕ್ತಿ ಮೊದಲಾಗಿ ನವಶಕ್ತಿಯರು ನಿವೃ
ತ್ತಿಕಲೆ ಮೊದಲಾಗಿ ನವಕಲೆಗಳು ಇಂತು ೨೪ ಸಕೀಲಂಗಳು ನವವಿಧ
ತೆರದಿಂದ ೨೧೬ ಸಕೀಲ ಮೊದಲಾಗಿ ಸಮಸ್ತ ಕ್ಷೇತ್ರಂಗಳನೊಳಕೊಂಡು
ಎನ್ನ ಅಣುಚಕ್ರವೆಂಬ ಪರಮ ಕೈಲಾಸ ಚಿದಾಕಾಶ ಮಂಡಲದ ಚೌಕ
ಮಂಟಪದ ನವರತ್ನಖಚಿತ ಶೂನ್ಯ ಸಿಂಹಾಸನದ ಪೀಠದಲ್ಲಿ, ಮೂರ್ತಿ
ಗೊಂಡಿರ್ಪ ಪರಾತ್ಪರ ನಿಜಜಂಗಮಲಿಂಗ ಸ್ವರೂಪ ಸರ್ವ ಚೈತನ್ಯಸ್ವರೂ
ಪವಾದ ಅಣು ಲಿಂಗಜಂಗಮವೆ ಪರತತ್ವ ನಿಃಕಲ ಪರಬ್ರಹ್ಮ ಮೂರ್ತಿ
ಲಿಂಗಜಂಗಮ ಪ್ರಸಾದವೆಂದು ತನುತ್ರಯ ಮನತ್ರಯ ಭಾವತ್ರಯ ಆತ್ಮ
ತ್ರಯ ಪ್ರಾಣತ್ರಯ ಗುಣತ್ರಯ ಅವಸ್ಥಾತ್ರಯ ತತ್ವತ್ರಯ ಹಂಸತ್ರ
ಯಂಗಳ ಪೂರ್ಣ ಮಡಿಮಾಡಿ ನಿರ್ನಾಮವೆಂಬ ಜಲದಿಂದ ಮಜ್ಜನಕ್ಕೆ
ರೆದು ನಿಃಕಾರಣವೆಂಬ ಗಂಧವ ಧರಿಸಿ ನಿಃಸಂಗನೆಂಬಕ್ಷತೆಯನಿಟ್ಟು ನಿಃಪ
ರಿಪೂರ್ಣವೆಂಬ ಪುಷ್ಪದ ಮಾಲೆಯ ಧರಿಸಿ ನಿರುಪಾಧಿಕವೆಂಬ ಧೂಪವ
ಬೀಸಿ ನಿಃಕಳೆಯೆಂಬ ಜ್ಯೋತಿಯ ಬೆಳಗಿ, ನಿರಾಳವೆಂಬ ವಸ್ತ್ರವ ಹೊದ್ದಿಸಿ
ಪರಮ ನಿಜಾಭರಣವ ತೊಡಿಸಿ ಶೂನ್ಯವೆಂಬ ನೈವೇದ್ಯವ ನರ್ಪಿಸಿ ನಿರವಯ
ತಾಂಬೂಲವನಿತ್ತು ಇಂತು ಅಣುಲಿಂಗಜಂಗಮ ಪ್ರಸಾದಕ್ಕೆ ಅಷ್ಟ ವಿಧಾ
ರ್ಚನೆಯ ಮಾಡಿ ಅನಂತಕೋಟಿ ಸೂರ್ಯ ಚಂದ್ರಾಗ್ನಿ ಪ್ರಭೆಯಂತೆ ಬೆಳ
ಗುವ ಅಣುಲಿಂಗಜಂಗಮ ಪ್ರಸಾದವನ್ನೆ ಅನುಮಿಷದೃಷ್ಟಿಯಿಂ ನಿರೀಕ್ಷಿಸಿ
ಉನ್ಮನೆಯ ಗೃಹದಲ್ಲಿ ಸಂತೋಷಗೊಂಡು ಆ ಅಣುಲಿಂಗಜಂಗಮ ಪ್ರಸಾದ
ಪೂಜೆಯ ಸಮಾಪ್ತವ ಮಾಡಿ ಅನಂತಕೋಟಿ ಮಹಾಮಂತ್ರಂಗಳಿಂದ
ನಮಸ್ಕರಿಸಿ ಆ ಅಣುಲಿಂಗಜಂಗಮ ಪ್ರಸಾದವೇ ತಾನೆಂದರಿದು ಏಕತ್ವದಿಂ
ನಿಶ್ಚಲಚಿತ್ತದೊಳ್ಕೂಡಿ ಉಭಯವಳಿದು ಇಹಪರಂಗಳಹೊದ್ದದೆ ಕನ್ನ
ಡಿಯ ಪ್ರತಿಬಿಂಬದಂತೆ ಸರ್ವಸಂಗ ಪರಿತ್ಯಾಗನಾಗಿ ನಿಜಾಚರಣೆಯಲ್ಲಿ ಆಚ
ರಿಸಬಲ್ಲಾತನೇ ದಶವಿಧ ಲಿಂಗಜಂಗಮಸಂಗಭಕ್ತಿಪ್ರಸಾದವುಳ್ಳ ಅನಾದಿ
ಅಖಂಡ ಚಿಜ್ಜ್ಯೋತಿ ಸದ್ಭಕ್ತಿಜಂಗಮ ನೋಡಾ ಸಂಗನಬಸವೇಶ್ವರಾ.

೨. ಆಯ್ಯಾ ನಿರಂಜನಾಕೃತಿ ವ್ಯಂಜನ ಹಕಾರ ಪ್ರಣವ ಮಹಾನಾದ ಪಶ್ಚಿಮಚಕ್ರ ಅಖಂಡ ಮಹಾಜ್ಯೋತಿರ್ವರ್ಣ ನಿರಾತಂಕಸ್ಥಲ ನಿರ್ಮುಕ್ತಿ ತನು ನಿರ್ಮಾಯಹಸ್ತ ನಿರಂಜನಲಿಂಗ ಪಶ್ಚಿಮಮುಖ ಅಪ್ರಮಾಣಭಕ್ತಿ ಅವಿರಳ ಪದಾರ್ಥ ಅವಿರಳ ಪ್ರಸಾದ ಪರಮೇಶ್ವರ ಪೂಜಾರಿ ಪರಮೇಶ್ವರ ನಧಿದೇವತೆ ನಿಶ್ಚಲ ಸಾದಾಖ್ಯ ನಿರ್ಪಂಚಕವೆಂಬ ಲಕ್ಷಣ ಅವಿರಳವೆಂಬ ಸಂಜ್ಞೆ ನಿರಾಳದಿಕ್ಕು ಅಗಮ್ಯವೇದ ಶಿವಯೋಗಿಯೆ ಅಂಗ ಚಿನುಮಯಾತ್ಮ ನಿರವಯಶಕ್ತಿ ಅನಂತಕಲೆ ಇಂತು ೨೪ ಸಕೀಲಂಗಳನೊಳಕೊಂಡು ಎನ್ನ ಪಶ್ಚಿಮ ಚಕ್ರವಾದ ಮಹಾ ಮೇರು ಪರ್ವತವೆಂಬ ಕ್ಷೇತ್ರದಲ್ಲಿ ಮೂರ್ತಿ ಗೊಂಡಿರ್ದ ನಿಜಮೋಕ್ಷ ಕರ್ತೃಸ್ವರೂಪವಾದ ನಿರಂಜನಲಿಂಗವೆ ಶಾಂಭವ ಮೂರ್ತಿಲಿಂಗವೆಂದು ಹಂಸತ್ರಯವ ಮಡಿಮಾಡಿ ನಿರ್ಭಾವ ಜಲದಿಂ ಮಜ್ಜನಕ್ಕೆರೆದು ನಿರ್ಜಾತವೆಂಬ ಗಂಧವ ಧರಿಸಿ ನಿರ್ಜಡವೆಂಬ ಅಕ್ಷತೆಯ ನಿಟ್ಟು ನಿರ್ದ್ವಂದ್ವವೆಂಬ ಪುಷ್ಪದ ಮಾಲೆಯ ಧರಿಸಿ ನಿರ್ಲಜ್ಜೆಯೆಂಬ ಧೂಪವ ಬೀಸಿ ನಿರಾಲಂಬವೆಂಬ ಜ್ಯೋತಿಯ ಬೆಳಗಿ ನಿರವಯವೆಂಬ ವಸ್ತ್ರವ ಹೊದ್ದಿಸಿ ನಿಸ್ಪೃಹವೆಂಬ ಆಭರಣವ ತೊಡಿಸಿ ನಿರಾಳವೆಂಬ ನೈವೇದ್ಯವ ನರ್ಪಿಸಿ ನಿರ್ವಾಣವೆಂಬ ತಾಂಬೂಲವನಿತ್ತು. ಇಂತಿ ನಿರಂಜನ ಲಿಂಗಕ್ಕೆ ಅಷ್ಟವಿಧಾರ್ಚನೆಯಂ ಮಾಡಿ ಸಹಸ್ರಕೋಟಿ ಸೂರ್ಯರ ಪ್ರಭೆ ಯಂತೆ ಬೆಳಗುವ ನಿರಂಜನ ಲಿಂಗವನು ಕಂಗಳುತುಂಬಿ ನೋಡಿ ಮನ ದಲ್ಲಿ ಸಂತೋಷಗೊಂಡು ಆ ನಿರಂಜನ ಲಿಂಗದ ಪೂಜೆಯ ಸಮಾಪ್ತವ ಮಾಡಿ ಮಹಾಜ್ಞಾನ ಜಪವೆಂಬ ದ್ವಾದಶ ಪ್ರಣವ ಮಂತ್ರಗಳಿಂದ ನಮ ಸ್ಕರಿಸಿ ಆ ನಿರಂಜನ ಲಿಂಗವೆ ತಾನೆಂದರಿದು ಕೂಡಿ ಎರಡಳಿದು ನಿಜಾಂತ ರ್ಯಾಮಿಯಾಗಿ ಆಚರಿಸಬಲ್ಲಾತನೆ ಅಪ್ರಮಾಣ ಭಕ್ತಿಯನುಳ್ಳ ನಿಜ ಮೋಕ್ಷ ಸ್ವರೂಪ ನೋಡಾ ಸಂಗನಬಸವೇಶ್ವರಾ.

೩. ಆಯ್ಯಾ ನಿಶ್ಶೂನ್ಯಾಕೃತಿ ಕ್ಷಕಾರ ಪ್ರಣವ ದಿವ್ಯನಾದ ಶಿಖಾ ಚಕ್ರ ಮಹಾಜ್ಯೋತಿರ್ವರ್ಣ ನಿರಾಲಂಬಸ್ಥಲ ಚಿನ್ಮಯ ತನು ನಿರಾಳಹಸ್ತ ಶೂನ್ಯ ಲಿಂಗ ಉನ್ಮನಿ ಮುಖ ನಿರಹಂಕಾರ ಭಕ್ತಿ ಪರಿಪೂರ್ಣ ಪದಾರ್ಥ ಪರಿಪೂರ್ಣ ಪ್ರಸಾದ ಪರಶಿವ ಪೂಜಾರಿ ಪರಶಿವನಧಿ ದೇವತೆ ಅವಿರಳ ಸಾದಾಖ್ಯ ಅಗಮ್ಯವೆಂಬ ಲಕ್ಷಣ ನಿರ್ಮಾಯವೆಂಬ ಸಂಜ್ಞೆ ದಿವ್ಯನಾದ ಘೋಷ ದಿಕ್ಕು ಮನೋಲ್ಲಯ ವೇದ ಚಿಚ್ಚಂದ್ರನೆಂಬ ಅಂಗ ದಿವ್ಯಾತ್ಮ

ನಿಭ್ರಾಂತಿ ಶಕ್ತಿ ಅನಂತಕಲೆ ಇಂತು ೨೪ ಸಕೀಲಂಗಳನೊಳಕೊಂಡು ಎನ್ನ ಶಿಖಾಚಕ್ರವೆಂಬ ಹೇಮಾದ್ರಿ ಎಂಬ ಕ್ಷೇತ್ರದಲ್ಲಿ ಮೂರ್ತಿಗೊಂಡಿರ್ದ ಶಿವಮಂತ್ರ ಶಿಕ್ಷಾ ಕರ್ತೃ ಸ್ವರೂಪವಾದ ಶೂನ್ಯಲಿಂಗವೇ ಹಿರಣ್ಯೈಶ್ವರ್ಯ ಲಿಂಗವೆಂದು ಕರಣತ್ರಯುವ ಮಡಿಮಾಡಿ ಅನುಪಮ ಜಲದಿಂ ಮಜ್ಜನ ಕ್ಕೆರೆದು ಚಂದ್ರ ನಿವೃತ್ತಿಯಾದ ಗಂಧವ ಧರಿಸಿ ವಿರಳವಳಿದು ಅವಿರಳದಕ್ಷ ತೆಯನಿಟ್ಟು ಅಲ್ಲಿಯು ತ್ರಿದಳಂಗಳನೆ ಪುಷ್ಪದ ಮಾಲೆ ಎಂದು ಧರಿಸಿ ಅಲ್ಲಿಯು ಕಮಲ ಸದ್ವಾಸನೆಯ ಧೂಪವನರ್ಚಿಸಿ ಅಲ್ಲಿಯು ಮಹಾಜ್ಯೋತಿ ರ್ವರ್ಣವೆ ಕರ್ಪುರದ ಜ್ಯೋತಿ ಎಂದು ಬೆಳಗಿ ಅಲ್ಲಿಯು ನಿಃಸಂಸಾರಾವಸ್ಥೆಯೇ ನವೀನ ವಸ್ತ್ರವೆಂದು ಹೊದ್ದಿಸಿ ಸದಾನಂದವೆಂಬ ಆಭರಣವ ತೊಡಿಸಿ ಪರಿ ಪೂರ್ಣವೆಂಬ ನೈವೇದ್ಯವನರ್ಪಿಸಿ ನಿರಹಂಕಾರವೆಂಬ ತಾಂಬೂಲವ ನಿತ್ತು ಇಂತೀ ಶೂನ್ಯ ಲಿಂಗಕ್ಕೆ ಅಷ್ಟವಿಧಾರ್ಚನೆಯಂ ಮಾಡಿ ಶತ ಕೋಟಿ ಸೂರ್ಯರ ಪ್ರಭೆಯಂತೆ ಬೆಳಗುವ ಶೂನ್ಯ ಲಿಂಗವನು ಕಂಗಳು ತುಂಬಿ ನೋಡಿ ಮನದಲ್ಲಿ ಸಂತೋಷಗೊಂಡು, ಆ ಶೂನ್ಯ ಲಿಂಗದ ಪೂಜೆಯ ಸಮಾಪ್ತಿಯಂ ಮಾಡಿ ಜ್ಞಾನಜಪವೆಂಬ ದ್ವಾದಶಪ್ರಣವ ಮಂತ್ರಂಗಳಿಂ ನಮಸ್ಕರಿಸಿ ಆ ಶೂನ್ಯ ಲಿಂಗವೆ ತಾನೆಂದು ಕೂಡಿ ಎರಡಳಿದು ನಿಃಸಂಸಾ ರಿಯಾಗಿ ಆಚರಿಸ ಬಲ್ಲಾತನೆ ನಿರಹಂಕಾರ ಭಕ್ತಿಯನುಳ್ಳ ನಿರಾತಂಕ ನೋಡಾ ಸಂಗನಬಸವೇಶ್ವರಾ.

೪. ಅಯ್ಯಾ, ನಿಃಕಲಾಕೃತಿ ಓಂಕಾರ ಪ್ರಣವ ಭ್ರಮರನಾದ ಬ್ರಹ್ಮಚಕ್ರ ಜ್ಯೋತಿರ್ವರ್ಣ ನಿಃಕಳಂಕಸ್ಥಲ ಚಿದ್ರೂಪ ತನು ಸ್ವತಂತ್ರ ಹಸ್ತ ನಿಃಕಳಂ ಕಲಿಂಗ ಬ್ರಹ್ಮರಂಧ್ರ ಮುಖ ಸದ್ಭಾವಭಕ್ತಿ ಪರಮಾನಂದ ಪದಾರ್ಥ ಪರ ಮಾನಂದ ಪ್ರಸಾದ ಶ್ರೀಗುರು ಪೂಜಾರಿ ಶ್ರೀಗುರು ಅಧಿದೇವತೆ ಅಗಮ್ಯ ವೆಂಬ ಲಕ್ಷಣ ಅಪ್ರಮಾಣವೆಂಬ ಸಂಜ್ಞೆ ಹೃತ್ಕಮಲ ದಿಕ್ಕು ಧನುರ್ವೇದ ಚಿತ್ಸೂರ್ಯನೇ ಅಂಗ ಮಹಾ ಆತ್ಮ ಅನಾಮಯ ಶಕ್ತಿ ನಿರ್ವಂಚಕ ಕಲೆ ಇಂತು ೨೪ ಸಕೀಲಂಗಳನೊಳಕೊಂಡು ಎನ್ನ ಬ್ರಹ್ಮರಂಧ್ರ ಚಕ್ರದ ರಜ ತಾದ್ರಿಯೆಂಬ ಕ್ಷೇತ್ರದಲ್ಲಿ ಮೂರ್ತಿಗೊಂಡಿರ್ದ ಶಿವದೀಕ್ಷಾ ಸ್ವರೂಪವಾದ ನಿಃಕಲಲಿಂಗವೇ ರಜತೇಶ್ವರ ಲಿಂಗವೆಂದು ಗುಣತ್ರಯುವ ಮಡಿ ಮಾಡಿ ಸ್ವತಂತ್ರವಾದ ಅಕ್ಷತೆಯನಿಟ್ಟು ಅಲ್ಲಿಯು ಕಮಲ ಸದ್ವಾಸನೆಯ ಧೂಪವ ಬೀಸಿ ಅಲ್ಲಿಯು ಜ್ಯೋತಿರ್ವರ್ಣವೆ ಕರ್ಪುರ ಜ್ಯೋತಿಯ ಬೆಳಗಿ, ಅಲ್ಲಿಯ ನಿಃಕಳಂಕಾವಸ್ಥೆಯೆ, ನವೀನ ವಸ್ತ್ರವೆಂದು ಹೊದ್ದಿಸಿ ನಿರಾಕಾರವೆಂಬ

ಆಭರಣವ ತೊಡಿಸಿ ಪರಮಾನಂದವೆಂಬ ನೈವೇದ್ಯವನರ್ಪಿಸಿ ಸದ್ಭಾವ ವೆಂಬ ತಾಂಬೂಲವಿತ್ತು, ಇಂತೀ ನಿಃಕಳಂಕ ಲಿಂಗಕ್ಕೆ ಅಷ್ಟವಿಧಾರ್ಚ ನೆಯಂ ಮಾಡಿ ದಶಕೋಟಿ ಸೂರ್ಯರ ಪ್ರಭೆಯಂತೆ ಬೆಳಗುವ ನಿಃಕಳಂಕ ಲಿಂಗವನು ಕಂಗಳು ತುಂಬಿ ನೋಡಿ ಮನದಲ್ಲಿ ಸಂತೋಷಗೊಂಡು ಆ ನಿಃಕಳ ಲಿಂಗಪೂಜೆಯು ಸಮಾಪ್ತವ ಮಾಡಿ ಕ್ರಿಯಾ ಜಪವೆಂಬ ದ್ವಾದಶ ಪ್ರಣವ ಮಂತ್ರಂಗಳಿಂದೆ ನಮಸ್ಕರಿಸಿ ಆ ನಿಃಕಳ ಲಿಂಗಪೂಜೆಯು ಸಮಾ ಪ್ತವ ಮಾಡಿ ಕ್ರಿಯಾ ಜಪವೆಂಬ ದ್ವಾದಶಪ್ರಣವ ಮಂತ್ರಂಗಳಿಂದೆ ನಮ ಸ್ಕರಿಸಿ ಆ ನಿಃಕಳ ಲಿಂಗವೆ ತಾನೆಂದರಿದು ಕೂಡಿ ಎರಡಳಿದು ಸ್ವತಂತ್ರನಾಗಿ ಆಚರಿಸ ಬಲ್ಲಾತನೆ ಸದ್ಭಾವ ಭಕ್ತಿಯನುಳ್ಳ ನಿಃಕಳಂಕ ನೋಡಾ ಸಂಗನ ಬಸವೇಶ್ವರಾ.

೫. ಅಯ್ಯಾ ಜ್ಯೋತಿರಾಕೃತಿ ಓಂಕಾರ ಪ್ರಣವ ಸಿಂಹಾಸನದ ಆಜ್ಞಾಚಕ್ರ ಮಾಣಿಕ್ಯವರ್ಣ ಐಕ್ಯಸ್ಥಲ ಶುದ್ಧತನು ಸದ್ಭಾವಹಸ್ತ ಮಹಾ ಲಿಂಗ ಹೃದಯುವೆಂಬ ಮುಖ ಸಮರಸಭಕ್ತಿ ತೃಪ್ತಿ ಪದಾರ್ಥ ಸುತೃಪ್ತಿ ಪ್ರಸಾದ ಮಹಾದೇವ ಪೂಜಾರಿ ಮಹಾದೇವನಧಿದೇವತೆ ಮಹಾಸಾದಾಖ್ಯ ಅಖಂಡನೆಂಬ ಲಕ್ಷಣ ಮಹವೆಂಬ ಸಂಜ್ಞೆ ಪಾತಾಳದಿಕ್ಕು ಗಾಯತ್ರೀ ವೇದ ಆತ್ಮನೇಲಿಂಗ ಜ್ಞಾನಾತ್ಮ ಚಿಚ್ಛಕ್ತಿ ಶಾಂತಾತೀತೋತ್ತರ ಕಲೆ ಇಂತು ೨೪ ಸಕೀಲಂಗಳನೊಳಕೊಂಡು ಎನ್ನಾಜ್ಞಾಚಕ್ರವೆಂಬ ತ್ರಿಕೂಟ ಸಂಗಮ ಕ್ಷೇತ್ರದಲ್ಲಿ ಮೂರ್ತಿಗೊಂಡಿರ್ದ ಬೋಧಾ ಸ್ವರೂಪವಾದ ಮಹಾಲಿಂಗವೇ ಸಂಗಮೇಶ್ವರ ಲಿಂಗವೆಂದು ಅವಸ್ಥಾತ್ರಯುವ ಮಡಿ ಮಾಡಿ ಸಂತೋಷ ವೆಂಬ ಜಲದಿಂ ಮಜ್ಜನಕ್ಕೆರೆದು ಆತ್ಮನಿವೃತ್ತಿಯಾದ ಗಂಧವ ಧರಿಸಿ ಭಾವ ಸದ್ಭಾವವಾದಕ್ಷತೆಯನಿಟ್ಟು ಅಲ್ಲಿಯ ದ್ವಿದಳಂಗಳನೆ ಪುಷ್ಪದ ಮಾಲೆ ಎಂದು ಧರಿಸಿ ಅಲ್ಲಿಯ ಕಮಲ ಸದ್ವಾಸನೆಯ ಧೂಪವ ಬೀಸಿ ಅಲ್ಲಿಯ ಮಾಣಿಕ್ಯ ವರ್ಣವೇ ಕರ್ಪೂರ ಜ್ಯೋತಿ ಎಂದು ಬೆಳಗಿ ಅಲ್ಲಿಯ ನಿರಾವ ಸ್ಥೆಯೆ ನವೀನ ವಸ್ತುವೆಂದು ಹೊದ್ದಿಸಿ ನಿರ್ಮಲವೆಂಬ ಆಭರಣವ ತೊಡಿಸಿ ಸುತೃಪ್ತಿ ಎಂಬ ನೈವೇದ್ಯವನರ್ಪಿಸಿ ಸಮರಸವೆಂಬ ತಾಂಬೂಲವನಿತ್ತು ಇಂತೀ ಮಹಾಲಿಂಗಕ್ಕೆ ಅಷ್ಟವಿಧಾರ್ಚನೆಯಂ ಮಾಡಿ ಕೋಟಿ ಸೂರ್ಯರ ಪ್ರಭೆಯಂತೆ ಬೆಳಗುವ ಮಹಾಲಿಂಗವ ಕಂಗಳು ತುಂಬಿ ನೋಡಿ ಮನ ದಲ್ಲಿ ಸಂತೋಷಗೊಂಡು ಆ ಮಹಾಲಿಂಗ ಪೂಜೆಯು ಸಮಾಪ್ತವ ಮಾಡಿ ಓಂ ಓಂ ಓಂ ಓಂ ಓಂ ಎಂಬ ಓಂಕಾರ ಷಡ್ವಿಧ ಮಂತ್ರಂಗಳಿಂದ ನಮ

ಸ್ಮರಿಸಿ ಆ ಮಹಾಲಿಂಗವೇ ತಾನೆಂದರಿದು ಕೂಡಿ ಎರಡಳಿದು ನಿತ್ಯ ತೃಪ್ತನಾಗಿ ಆಚರಿಸ ಬಲ್ಲಾತನೆ ಸಮರಸ ಭಕ್ತಿಯುನುಳ್ಳ ಲಿಂಗೈಕ್ಯ ನೋಡಾ ಸಂಗನಬಸವೇಶ್ವರಾ.

೬. ಆಯ್ಯಾ ದರ್ಪಣಾಕೃತಿ ಯಕಾರ ಪ್ರಣವ ನಾದ ವಿಶುದ್ಧಿ ಚಕ್ರ ಕಪೋತ ವರ್ಣ ಶರಣಸ್ಥಲ ಆನಂದ ತನುವು ಸುಜ್ಞಾನ ಹಸ್ತ ಪ್ರಸಾದಲಿಂಗ ಶ್ರೋತ್ರ ಮುಖ ಆನಂದ ಭಕ್ತಿ ಶಬ್ದಪದಾರ್ಥ ಸುಶಬ್ದ ಪ್ರಸಾದ ಸದಾಶಿವ ಪೂಜಾರಿ ಸದಾಶಿವನಧಿದೇವತೆ ಶಿವಸಾದಾಖ್ಯ ಪರಿಪೂರ್ಣವೆಂಬ ಲಕ್ಷಣ ಅನಾದಿವತ್ತುವೆಂಬ ಸಂಜ್ಞೆ ಊರ್ಧ್ವದಿಕ್ಕು ಅಜಪವೇದ ಆಕಾಶವೆಂಬ ಅಂಗ ಶುದ್ಧಾತ್ಮ ಪರಾಶಕ್ತಿ ಶಾಂತಾತೀತ ಕಲೆ ಇಂತು ೨೪ ಸಕೀಲಂಗಳನೊಳಕೊಂಡು ಎನ್ನ ವಿಶುದ್ಧಿ ಚಕ್ರವೆಂಬ ಅವಿಮುಕ್ತ ಕ್ಷೇತ್ರದಲ್ಲಿ ಮೂರ್ತಿಗೊಂಡಿರ್ದ ಈಶನ ಸ್ವರೂಪನಾದ ಪ್ರಸಾದಲಿಂಗವೆ ವಿಶ್ವನಾಥ ಲಿಂಗವೆಂದು ಭಾವತ್ರಯವ ಮಡಿಮಾಡಿ ಕ್ಷಮೆಯೆಂಬ ಜಲದಿಂ ಮಜ್ಜನಕ್ಕೆರೆದು ಗಗನ ನಿವೃತ್ತಿಯಾದ ಗಂಧವ ಧರಿಸಿ ಜ್ಞಾನ ಸುಜ್ಞಾನ ವಾದಕ್ಷತೆಯನಿಟ್ಟು, ಅಲ್ಲಿಯ ಷೋಡಶದಳಂಗಳನೆ ಪುಷ್ಪದ ಮಾಲೆ ಎಂದು ಧರಿಸಿ ಅಲ್ಲಿಯ ಕಮಲ ಸದ್ವಾಸನೆಯ ಧೂಪವ ಬೀಸಿ ಅಲ್ಲಿಯ ಕಪೋತ ವರ್ಣವೆ ಕರ್ಪೂರ ಜ್ಯೋತಿಯೆಂದು ಬೆಳಗಿ, ಅಲ್ಲಿಯ ತೂರ್ಯಾತೀತಾವಸ್ಥೆಯೆ ನವೀನ ವಸ್ತ್ರವೆಂದು ಹೊದ್ದಿಸಿ ನಿರ್ಮದವೆಂಬಾಭರಣವ ತೊಡಿಸಿ ಸುಶಬ್ದವೆಂಬ ನೈವೇದ್ಯವನರ್ಪಿಸಿ ಆನಂದವೆಂಬ ತಾಂಬೂಲವನಿತ್ತು ಇಂತೀ ಪ್ರಸಾದಲಿಂಗಕ್ಕೆ ಅಷ್ಟವಿಧಾರ್ಚನೆಯುಂ ಮಾಡಿ ಕೋಟಿ ಸೂರ್ಯರ ಪ್ರಭೆಯಂತೆ ಬೆಳಗುವ ಪ್ರಸಾದ ಲಿಂಗವನ್ನು ಕಂಗಳು ತುಂಬಿ ನೋಡಿ ಮನದಲ್ಲಿ ಸಂತೋಷಗೊಂಡು ಆ ಪ್ರಸಾದಲಿಂಗದ ಪೂಜೆಯ ಸಮಾಪ್ತವ ಮಾಡಿ ಓಂ ಯಾಂ ಯಾಂ ಯಾಂ ಯಾಂ ಯಾಂ ಯಾಂ ಎಂಬ ಯಕಾರ ಷಡ್ವಿಧ ಮಂತ್ರಂಗಳಿಂದ ನಮಸ್ಕರಿಸಿ ಆ ಪ್ರಸಾದಲಿಂಗವೆ ತಾನೆಂದರಿದು ಕೂಡಿ ಎರಡಳಿದು ನಿರ್ಮೋಹಿಯಾಗಿ ಆಚರಿಸ ಬಲ್ಲಾತನೆ ಆನಂದ ಭಕ್ತಿಯುನುಳ್ಳ ಶಿವ ಶರಣ ನೋಡಾ ಸಂಗನಬಸವೇಶ್ವರಾ.

೭. ಆಯ್ಯಾ ಅರ್ಧ ಚಂದ್ರಾಕೃತಿ ವಕಾರಪ್ರಣವ ಮೇಘನಾದ ಅನಾಹತಚಕ್ರ ಮಾಂಜಿಷ್ಟವರ್ಣ ಪ್ರಾಣಲಿಂಗಿಸ್ಥಲ ನಿರ್ಮಲತನು ಸುಮನ ಹಸ್ತ ಜಂಗಮಲಿಂಗ ತ್ವಕ್ಕೆಂಬ ಮುಖ ಅನುಭಾವಭಕ್ತಿ ಸ್ಪರ್ಶನಪದಾರ್ಥ

ಸುಸ್ಪರ್ಶನ ಪ್ರಸಾದ ಈಶ್ವರಪೂಜಾರಿ ಈಶ್ವರನಧಿದೇವತೆ ಅಮೂರ್ತಿ ಸಾದಾಖ್ಯ ನಿತ್ಯವೆಂಬ ಲಕ್ಷಣ ಲಿಂಗಕ್ಷೇತ್ರವೆಂಬ ಸಂಜ್ಞೆ ದಕ್ಷಿಣದಿಕ್ಕು ಅಥರ್ವಣ ವೇದ ವಾಯುವೆ ಅಂಗ ನಿರ್ಮಲಾತ್ಮ ಆದಿಶಕ್ತಿ ಶಾಂತಿಕಲೆ ಇಂತು ೨೪ ಸಕೀಲಂಗಳನೊಳಗೊಂಡು ಎನ್ನ ಅನಾಹತ ಚಕ್ರವೆಂಬ ಹಿಮವತ್ಕೇದಾರ ಕ್ಷೇತ್ರದಲ್ಲಿ ಮೂರ್ತಿಗೊಂಡಿರ್ದ ಯಜನ ಸ್ವರೂಪವಾದ ಜಂಗಮ ಲಿಂಗವೆ ಹಿಮಗಿರೀಶ್ವರನೆಂದು ಪ್ರಾಣತ್ರಯವ ಮಡಿಮಾಡಿ, ಶಾಂತಿಯೆಂಬ ಮಜ್ಜನಕ್ಕೆರೆದು ವಾಯು ನಿವೃತ್ತಿಯಾದ ಗಂಧವ ಧರಿಸಿ ಅಲ್ಲಿಯ ಕಮಲ ಸದ್ವಾಸನೆಯ ಧೂಪವ ಬೀಸಿ, ಅಲ್ಲಿಯ ಮಾಂಜಿಷ್ಟ ವರ್ಣವೆ ಕರ್ಪುರ ಜ್ಯೋತಿಯೆಂದು ಬೆಳಗಿ, ಅಲ್ಲಿಯ ತೂರ್ಯಾವಸ್ಥೆಯೆಂಬ ವಸ್ತ್ರವ ಹೊದ್ದಿಸಿ ನಿರ್ಮೋಹವೆಂಬ ಆಭರಣವ ತೊಡಿಸಿ ಸುಸ್ಪರ್ಶನವೆಂಬ ನೈವೇದ್ಯವನರ್ಪಿಸಿ ಅನುಭಾವವೆಂಬ ತಾಂಬೂಲವನಿತ್ತು ಇಂತೀ ಜಂಗಮಲಿಂಗಕ್ಕೆ ಅಷ್ಟವಿಧಾರ್ಚನೆಯಂ ಕೋಟಿ ಸೂರ್ಯರಂತೆ ಬೆಳಗುವ ಜಂಗಮ ಲಿಂಗವನ್ನು ಕಂಗಳು ತುಂಬಿ ನೋಡಿ ಮನದಲ್ಲಿ ಸಂತೋಷಗೊಂಡು ಆ ಜಂಗಮ ಲಿಂಗದ ಪೂಜೆಯ ಸಮಾಪ್ತವ ಮಾಡಿ ಓಂ ವಾಂ ವಾಂ ವಾಂ ವಾಂ ವಾಂ ವಾಂ ಎಂಬ ವಕಾರ ಷಡ್ವಿಧ ಮಂತ್ರಂಗಳಿಂದ ನಮಸ್ಕರಿಸಿ ಆ ಜಂಗಮ ಲಿಂಗವೆ ತಾನೆಂದರಿದು ಕೂಡಿ ಎರಡಳಿದು ನಿಃಪ್ರಪಂಚವಾಗಿ ಆಚರಿಸ ಬಲ್ಲಾತನೆ ಅನುಭಾವ ಭಕ್ತಿಯನುಳ್ಳ ಲಿಂಗಪ್ರಾಣಿ ನೋಡಾ ಸಂಗನಬಸವೇಶ್ವರಾ.

೮. ಅಯ್ಯಾ ಕುಂಡಲಾಕೃತಿ ಶಿಕಾರಪ್ರಣವ ಭೇರಿನಾದ ಮಣಿಪೂರಕ ಚಕ್ರ ಹರಿತವರ್ಣ ಪ್ರಸಾದಿಸ್ಥಲ ಕಾರಣ ತನು ನಿರಹಂಕಾರ ಹಸ್ತ ಶಿವಲಿಂಗ ನೇತ್ರವೆಂಬ ಮುಖ ಸಾವಧಾನಭಕ್ತಿ ರೂಪುಪದಾರ್ಥ ಸುರೂಪು ಪ್ರಸಾದ ರುದ್ರಪೂಜಾರಿ ರುದ್ರನಧಿದೇವತೆ ಮೂರ್ತಿಸಾದಾಖ್ಯ ಅನಂತವೆಂಬ ಲಕ್ಷಣ ಶರೀರಸ್ಥವೆಂಬ ಸಂಜ್ಞೆ ಉತ್ತರದಿಕ್ಕು ಸಾಮವೇದ ಅಗ್ನಿಯೆ ಅಂಗ ಪರಮಾತ್ಮ ಇಚ್ಛಾಶಕ್ತಿ ವಿದ್ಯಾಕಲೆ ಇಂತು ೨೪ ಸಕೀಲಂಗಳನೊಳಕೊಂಡು ಎನ್ನ ಮಣಿಪೂರಕ ಚಕ್ರವೆಂಬ ಪಂಪಾ ಕ್ಷೇತ್ರದಲ್ಲಿ ಮೂರ್ತಿಗೊಂಡಿರ್ದ ನಿರೀಕ್ಷಣ ಸ್ವರೂಪವಾದ ಶಿವಲಿಂಗವೆ ಶ್ರೀವಿರೂಪಾಕ್ಷಲಿಂಗವೆಂದು ಆತ್ಮತ್ರಯ ಮಡಿಮಾಡಿ ಪರಮಾನಂದವೆಂಬ ಜಲದಿಂ ಮಜ್ಜನಕ್ಕೆರೆದು ಅಗ್ನಿ ನಿವೃತ್ತಿಯಾದ ಗಂಧವ ಧರಿಸಿ ಅಹಂಕಾರ ನಿರಹಂಕಾರ ಅಕ್ಷತೆಯನಿಟ್ಟು, ಅಲ್ಲಿಯ ದಶದಳಂಗಳನೆ ಪುಷ್ಪದ ಮಾಲೆಯೆಂದ್ಮ

ಧರಿಸಿ ಅಲ್ಲಿಯು ಕಮಲ ಸದ್ವಾಸನೆಯ ಧೂಪವ ಬೀಸಿ ಅಲ್ಲಿಯು ಹರಿತ
ವರ್ಣವೆ ಕರ್ಪೂರ ಜ್ಯೋತಿಯೆಂದು ಬೆಳಗಿ, ಅಲ್ಲಿಯು ಸುಷುಪ್ತಾವಸ್ಥೆ
ಯೆಂಬ ವಸ್ತ್ರವ ಹೊದ್ದಿಸಿ ನಿರ್ಲೋಭವೆಂಬ ಆಭರಣವ ತೊಡಿಸಿ ಸುರೂಪು
ವೆಂಬ ನೈವೇದ್ಯವನರ್ಪಿಸಿ ಸಾವಧಾನವೆಂಬ ತಾಂಬೂಲವನಿತ್ತು, ಇಂತೀ
ಪರಶಿವಲಿಂಗಕ್ಕೆ ಅಷ್ಟವಿಧಾರ್ಚನೆಯಂ ಮಾಡಿ ಕೋಟಿ ಸೂರ್ಯರ
ಪ್ರಭೆಯಂತೆ ಬೆಳಗುವ ಪರಶಿವಲಿಂಗವನ್ನು ಕಂಗಳು ತುಂಬಿ ನೋಡಿ
ಪುನಃ ಸಂತೋಷಗೊಂಡು, ಆ ಪರಶಿವಲಿಂಗ ಪೂಜೆಯ ಸಮಾಪ್ತವ
ಮಾಡಿ ಓಂ ಶೀಂ ಶೀಂ ಶೀಂ ಶೀಂ ಶೀಂ ಶೀಂ ಎಂಬ ಶಿಕಾರ ಷಡ್ವಿಧ ಮಂತ್ರಂ
ಗಳಿಂದ ನಮಸ್ಕರಿಸಿ ಆ ಪರಶಿವ ಲಿಂಗವೇ ತಾನೆಂದರಿದು ಕೂಡಿ ಎರಡ
ಳಿದು ನಿಃಕಳಂಕನಾಗಿ ಆಚರಿಸ ಬಲ್ಲಾತನೆ ಸಾವಧಾನ ಭಕ್ತಿಯುಳ್ಳ
ಪ್ರಸಾದಿ ನೋಡಾ ಸಂಗನಬಸವೇಶ್ವರಾ.

೯. ಅಯ್ಯಾ ದಂಡಕಾಕೃತಿ ಮಕಾರಪ್ರಣವ ಘಂಟಾನಾದ ಸ್ವಾಧಿ
ಷ್ಠಾನಚಕ್ರ ಶ್ವೇತವರ್ಣ ಮಹೇಶ್ವರಸ್ಥಲ ಸೂಕ್ಷ್ಮತನು ಸುಬುದ್ಧಿಹಸ್ತ ಗುರು
ಲಿಂಗ ಜಿಹ್ವೆಮುಖ ನೈಷ್ಠಿಕಾಭಕ್ತಿ ರಸಪದಾರ್ಥ ಸುರಸಪ್ರಸಾದ ವಿಷ್ಣುಪೂ
ಜಾರಿ ವಿಷ್ಣುವಧಿದೇವತೆ ಕರ್ತೃಸಾದಾಖ್ಯ ಚಿತ್ತುವೆಂಬ ಲಕ್ಷಣ ಗೂಢ
ವೆಂಬ ಸಂಜ್ಞೆ ಪಶ್ಚಿಮದಿಕ್ಕು ಯಜುರ್ವೇದ ಅಪ್ಪುವೆಂಬ ಅಂಗ ಅಂತ
ರಾತ್ಮ ಜ್ಞಾನಶಕ್ತಿ ಪ್ರತಿಷ್ಠಾಕಲೆ ಇಂತು ೨೮ ಸಕೀಲಂಗಳನೊಳಕೊಂಡು
ಎನ್ನ ಸ್ವಾಧಿಷ್ಠಾನ ಚಕ್ರವೆಂಬ ಸೇತುಬಂಧ ಕ್ಷೇತ್ರದಲ್ಲಿ ಮೂರ್ತಿಗೊಂಡಿರ್ಪ
ಮಂತ್ರಮೂರ್ತಿಸ್ವರೂಪವಾದ ಗುರುಲಿಂಗವೇ ರಾಮೇಶ್ವರಲಿಂಗವೆಂದು
ಮಾನತ್ರಯವ ಮಡಿಮಾಡಿ ಪರಿಣಾಮವೆಂಬ ಜಲದಿಂ ಮಜ್ಜನಕ್ಕೆರೆದು
ಅಪ್ಪು ನಿವೃತ್ತಿಯಾದ ಗಂಧವಧರಿಸಿ ಬುದ್ಧಿ ಸುಬುದ್ಧಿಯಾದ ಅಕ್ಷತೆಯನಿಟ್ಟು,
ಅಲ್ಲಿಯ ಷಟ್ಸ್ಥಲಂಗಳನೇ ಪುಷ್ಪದ ಮಾಲೆಯೆಂದು ಧರಿಸಿ ಅಲ್ಲಿಯು
ಕಮಲ ಸದ್ವಾಸನೆಯ ಧೂಪವ ಬೀಸಿ ಅಲ್ಲಿಯು ಶ್ವೇತವರ್ಣವೆ ಕರ್ಪೂರದ
ಜ್ಯೋತಿಯೆಂದು ಬೆಳಗಿ ಅಲ್ಲಿಯು ಸ್ವಪ್ನಾವಸ್ಥೆಯೆಂಬ ವಸ್ತ್ರವ ಹೊದ್ದಿಸಿ
ನಿಃಕ್ರೋಧವೆಂಬ ಆಭರಣವ ತೊಡಿಸಿ ಸುರುಚಿಯೆಂಬ ನೈವೇದ್ಯವ ಸಮ
ರ್ಪಿಸಿ ನೈಷ್ಠೆಯೆಂಬ ತಾಂಬೂಲವನಿತ್ತು, ಕೋಟಿಸೂರ್ಯರ ಪ್ರಭೆಯಂತೆ
ಬೆಳಗುವ ಗುರುಲಿಂಗ ಮೂರ್ತಿಯನು ಕಂಗಳುತುಂಬಿ ನೋಡಿ ಮನದಲ್ಲಿ
ಸಂತೋಷಗೊಂಡು, ಆ ಗುರುಲಿಂಗ ಪೂಜೆಯ ಸಮಾಪ್ತಿಯ ಮಾಡಿ ಓಂ
ಮಾಂ ಮಾಂ ಮಾಂ ಮಾಂ ಮಾಂ ಮಾಂ ಮಕಾರ ಷಡ್ವಿಧ ಮಂತ್ರಂಗ

ಳಿಂದೆ ನಮಸ್ಕರಿಸಿ ಆ ಲಿಂಗವೆ ತಾನೆಂದರಿದು ಕೂಡಿ ಎರಡಳಿದು ನಿಶ್ಚಿಂತ ದಿಂದ ಬೆರಸಬಲ್ಲಾತನೆ ನೈಷ್ಠಿಕಾಭಕ್ತಿಯುಳ್ಳ ವೀರಮಾಹೇಶ್ವರ ನೋಡಾ ಸಂಗನಬಸವೇಶ್ವರಾ.

೧೦. ಆಯ್ಯಾ ತಾರಕಾಕೃತಿ ನಕಾರಪ್ರಣವ ವೇಣುನಾದ ಆಧಾರಚಕ್ರ ಪೀತವರ್ಣ ಭಕ್ತಸ್ಥಲ ಸ್ಥೂಲತನು ಸುಚಿತ್ತಹಸ್ತ ಆಚಾರಲಿಂಗ ಘ್ರಾಣ ಮುಖ ಶ್ರದ್ಧಾಭಕ್ತಿ ಗಂಧಪದಾರ್ಥ ಸುಗಂಧಪ್ರಸಾದ ಬ್ರಹ್ಮಪೂಜಾರಿ ಬ್ರಹ್ಮನಧಿದೇವತೆ ಕರ್ಮಸಾದಾಖ್ಯ ಸತ್ತುವೆಂಬ ಲಕ್ಷಣ ಪರವೆಂಬ ಸಂಜ್ಞೆ ಪೂರ್ವದಿಕ್ಕು ಋಗ್ವೇದ ಸೃಥ್ವಿಯೇ ಅಂಗ ಜೀವಾತ್ಮ ಕ್ರಿಯಾಶಕ್ತಿ ನಿವೃತ್ತಿ ಕಲೆ ಇಂತು ೨೪ ಸಕೀಲಂಗಳನೊಳಕೊಂಡು ಎನ್ನಾಧಾರಚಕ್ರವೆಂಬ ಶ್ರೀಶೈಲ ಕ್ಷೇತ್ರದಲ್ಲಿ ಮೂರ್ತಿಗೊಂಡಿರ್ದ ಪಂಚಾಚಾರಸ್ವರೂಪವಾದ ಆಚಾರಲಿಂಗವೆ ಮಲ್ಲಿಕಾರ್ಜುನ ಲಿಂಗವೆಂದು ತನುತ್ರಯುವ ಮಡಿಮಾಡಿ ಶಿವಾನಂದಜಲದಿಂ ಮಜ್ಜನಕ್ಕೆರೆದು ಪೃಥ್ವಿ ನಿವೃತ್ತಿಯಾದ ಗಂಧವಧರಿಸಿ ಚಿತ್ತ ಸುಚಿತ್ತವಾದ ಅಕ್ಷತೆಯುನಿಟ್ಟು ಅಲ್ಲಿ ಚತುರ್ದಳಗಳನೆ ಪುಷ್ಪದ ಮಾಲೆಯೆಂದುಧರಿಸಿ ಅಲ್ಲಿಯ ಕಮಲ ಸವ್ವಾಸನೆಯ ಧೂಪ ಬೀಸಿ ಅಲ್ಲಿಯ ಪೀತವರ್ಣವ ಕರ್ಪುರದ ಜ್ಯೋತಿಯೆಂದು ಬೆಳಗಿ ಅಲ್ಲಿಯ ಜಾಗ್ರವಸ್ಥೆ ಯೆಂಬ ನವೀನ ವಸ್ತ್ರವ ಹೊದ್ದಿಸಿ ನಿಃಕಾಮವೆಂಬ ಆಭರಣವ ತೊಡಿಸಿ ಸುಗಂಧವೆಂಬ ನೈವೇದ್ಯವನರ್ಪಿಸಿ ಶ್ರದ್ಧೆಯೆಂಬ ತಾಂಬೂಲವನಿತ್ತು ಇಂತು ಪಂಚಾಚಾರಮೂರ್ತಿ ಆಚಾರಲಿಂಗಕ್ಕಷ್ಟವಿಧಾರ್ಚನೆಯ ಮಾಡಿ ಕೋಟಿಸೂರ್ಯರ ಪ್ರಭೆಯಂತೆ ಬೆಳಗುವ ಆಚಾರಲಿಂಗವನ್ನು ಕಂಗಳ ತುಂಬಿ ನೋಡಿ ಮನದಲ್ಲಿ ಸಂತೋಷಗೊಂಡು ಆಚಾರಲಿಂಗದ ಪೂಜೆಯ ಸಮಾಪ್ತವ ಮಾಡಿ ನಾಂ ನಾಂ ನಾಂ ನಾಂ ನಾಂ ಎಂಬ ನಕಾರ ಷಡ್ವಿಧ ಮಂತ್ರಗಳಿಂದ ನಮಸ್ಕರಿಸಿ ಆ ಲಿಂಗವೆ ತಾನೆಂದರಿದು ಕೂಡಿ ಎರಡಳಿದು ನಿಬ್ಬೆರಗಿನಿಂದಾಚರಿಸ ಬಲ್ಲಾತನೆ ಶ್ರದ್ಧಾಭಕ್ತಿಯುಳ್ಳ ಸದ್ಭಕ್ತ ನೋಡಾ ಸಂಗನಬಸವೇಶ್ವರಾ.



ಸರ್ವಾಚಾರ ಸಂಪತ್ತಿನಾಚರಣೆ.

೧. ಇಂತೀ ಅಷ್ಟಾವರಣವ ಸದ್ಗುರು ಮುಖದಿಂದ ಚಿದಂಗ ಚಿದ್ಘನ ಲಿಂಗದ ಮಧ್ಯದಲ್ಲಿ ಸಂಬಂಧವಿಟ್ಟು ಏಕಲಿಂಗ ನಿಷ್ಠಾಪರತ್ವದಿಂದ ಸ್ಥೂಲ

ಕಂಥೆಯು ಧರಿಸಿ ಸತ್ಕಾಯುಕ ಸತ್ಕ್ರಿಯೆ ಸಮ್ಯಜ್ಞಾನ ಸದ್ಭಕ್ತಿ ಸದಾಚಾರ ಸನ್ನಿಹಿತರೇ ನೂತನಗಣಂಗಳೆನಿಸುವರು ನೋಡಾ. ಅದರಿಂದ ಮೇಲೆ ಚಿದಂಗ, ಚಿತ್ಪ್ರಾಣಾಂಗ, ಚಿಸ್ಘನಲಿಂಗ, ಚಿತ್ಪ್ರಾಣಲಿಂಗವ ಸದ್ಗುರು ಮುಖದಿಂ ಸಂಬಂಧವಿಟ್ಟು ಆ ಲಿಂಗದ ಮಧ್ಯದಲ್ಲಿ ಸಾಕಾರ ನಿರಾಕಾರ ವಾದ ಷೋಡಶ ವರ್ಣವಮಾಡಿಕೊಂಡು ಸೂಕ್ಷ್ಮತನುವೆಂಬ ಕಂಥೆಯು ಧರಿಸಿ ಕಂಗಳಾಲಯದ ಜ್ಯೋತಿರ್ಲಿಂಗದ ಮಧ್ಯದಲ್ಲಿ ಮನ ಮುಳುಗಿಸು ವರೆ ಆದಿ ಗಣಂಗಳೆನಿಸುವರು ನೋಡಾ. ಅದರಿಂ ಮೇಲೆ ಚಿಸ್ಘನ ತ್ರಿವಿ ಧಾಂಗ, ಚಿಸ್ಘನ ತ್ರಿವಿಧಲಿಂಗವ ಸದ್ಗುರು ಮುಖದಿಂ ಸಂಬಂಧಿಸಿಕೊಂಡು ಆ ಲಿಂಗಾಂಗ ಮಧ್ಯದಲ್ಲಿ ಬೆಳಗುವ ಪರಂಜ್ಯೋತಿರ್ಲಿಂಗ ಮಧ್ಯದಲ್ಲಿ ಭಾವ ಮುಳುಗಿ ಬಚ್ಚಬರಿಯಾನಂದದಲ್ಲಿ ಪರಿಪೂರ್ಣಾನಂದದಿಂದಾಚರಿಸು ವರೆ ಅನಾದಿ ಗಣಂಗಳೆನಿಸುವರು ನೋಡಾ. ಅದರಿಂ ಮೇಲೆ ಚಿಸ್ಘನ ಅಷ್ಟಾಂಗ ಮಧ್ಯದಲ್ಲಿ ಚಿಸ್ಘನ ಅಷ್ಟಲಿಂಗಗಳ ಸದ್ಗುರು ಮುಖದಿಂ ಧರಿಸಿ ಆ ಲಿಂಗಾಂಗ ಮಧ್ಯದಲ್ಲಿ ಅರವತ್ತುನಾಲ್ಕು ತೆರದ ವರ್ಣವ ಸಂಬಂಧವ ಮಾಡಿಕೊಂಡು ತಮ್ಮ ಸರ್ವಾಂಗದಲ್ಲಿ ಅಷ್ಟಕಮಲಗಳ ಕಂಡು, ಆ ಕಮ ಲಮಧ್ಯದಲ್ಲಿ ನೆಲಿಸಿರ್ಪ ಚತುರ್ವಿಧ ಬಿಂದುಲಿಂಗ, ಷಡ್ವಿಧ ಧಾತುಲಿಂಗ ದಶವಿಧಕ್ಷೇತ್ರಲಿಂಗ ದ್ವಾದಶ ವಿಕೃತಿಲಿಂಗ, ಷೋಡಶ ಕಳಾಲಿಂಗ ದ್ವಿವಿಧ ವಿದ್ಯಾಲಿಂಗ ಸಹಸ್ರ ಶಿವಕಳಾಲಿಂಗ ತ್ರಿವಿಧ ವಿವೇಕಲಿಂಗ ಇಂತು ಅಷ್ಟವಿಧ ಕಮಲದ ಮಧ್ಯದಲ್ಲಿ, ನೆಲಿಸಿರ್ಪ ಅಷ್ಟವಿಧ ಲಿಂಗಗಳ ಅಷ್ಟವಿಧ ಹಸ್ತಂಗ ಳಿಂದ ಅಷ್ಟವಿಧಾರ್ಚನೆ ಷೋಡಶೋಪಚಾರಂಗಳ ಮಾಡಿ, ಎರಡಳಿದು ಏಕರೂಪವಾಗಿ ನಿರವಯು ಕಂಥೆಯು ಧರಿಸಿ, ಪರತತ್ವ ಜ್ಯೋತಿರ್ಮಯು ಲಿಂಗದೊಳಗೆ ಉರಿಯುಂಡ ಕರ್ಪುರದಂತೆ ಸಮರಸವಾದರು ನೋಡಾ. ಅವರಾರೆಂದೊಡೆ, ರುದ್ರಗಣಂಗಳು, ಶಿವಗಣಂಗಳು, ದೇವಗಣಂಗಳು ನಾಗಗಣಂಗಳು, ಶಾಂಭವಗಣಂಗಳು ಮುಂತಾದವರು ಬಯಲೊಳಗೆ ಮಹಾಬಯಲು ಬೆರೆದಂತಾದರು ನೋಡಾ. ಸರ್ವಾಚಾರ ಸಂಪತ್ತಿನಾಚ ರಣೆಯುನಾಚರಿಸುವರೆ ನಿರವಯು ಗಣಂಗಳೆನಿಸುವರು ನೋಡಾ ಸಂಗನ ಬಸವೇಶ್ವರಾ.

೨. ಅಯ್ಯಾ ನಿಃಕಲ ಪರಶಿವತತ್ವ ಮಹಾಘನ ಚಿದಾವರಣ ಸ್ವರೂಪ ಮಹಾಘನ ಪರಶಿವಲಿಂಗವ ಸದ್ಗುರು ಮುಖದಿಂ ತಮ್ಮ ಭಾವ ಮನಹೃ ದಯ ಶ್ರೋತ್ರತ್ವಕ್ಕು ನೇತ್ರ ಜಿಹ್ವೆಘ್ರಾಣ ಕರಕಂಜ ಮಧ್ಯದಲ್ಲಿರಿಸಿ ಪರಿ

ಪರಿಯಿಂದರ್ಚಿಸಿ, ನಿರ್ವಂಚಕತ್ವದಿಂದ ಅರ್ಥ ಪ್ರಾಣಾಭಿಮಾನಂಗಳ ಸಮರ್ಪಿಸಿ, ಸರ್ವಾಚಾರ ಸಂಪತ್ತಿನಾಚರಣೆಯಲ್ಲಿ ಚಿತ್ತದಿಂದ ನಿಂದ ಮಹಂತ ಸದ್ಭಕ್ತ ಶಿವಶರಣನಿರ್ದ ಲೋಕವೆ ರುದ್ರಲೋಕ, ಶಿವಲೋಕ, ನಾಗಲೋಕ, ದೇವಲೋಕ, ಶಾಂಭವಲೋಕವಯ್ಯ. ಆತನ ಭಕ್ತಿಪ್ರಿಯರೆ ರುದ್ರಗಣಂಗಳು, ಶಿವಗಣಂಗಳು, ದೇವಗಣಂಗಳು, ನಾಗಗಣಂಗಳು, ಶಾಂಭವ ಮಹಾಪ್ರಭುಗಣಂಗಳು ನೋಡಾ. ಆತನಿರ್ದ ಊರೇ ಶಾಂಭವ ಪುರ, ಉಳುವೆ, ಮಹಾಕಲ್ಯಾಣವಯ್ಯ. ಆತನ ಗೃಹವೇ ಶಿವಮಂದಿರ ವಯ್ಯ, ಶಿವಕ್ಷೇತ್ರವಯ್ಯ. ಆತನ ನಡೆನುಡಿ ಕ್ರಿಯಾಚಾರದಲ್ಲೊಡೆವೆರದ ಸತ್ಕ್ರಿಯಾ ಶಕ್ತಿಯೆ ನಾಗಕನ್ನೆ, ದೇವಕನ್ನೆ, ರುದ್ರಕನ್ನೆಯಯ್ಯಾ. ಆತನ ಅರ್ಚನಾರ್ಪಣ ಸ್ಥಲವೆ ಮಹಾಘನ ಶೂನ್ಯ ಸಿಂಹಾಸನ ನೋಡಾ. ಆತನ ಚರಣದಿಂದಡಿ ಇಟ್ಟ ಜಲವೇ ದೇವಗಂಗೆ, ಶಿವಗಂಗೆ, ಪರಮಗಂಗೆ, ನಿಜಪಾವನಗಂಗೆ, ಪರಿಪೂರ್ಣಗಂಗಾಸ್ವರೂಪವಾದ ಮಹಾಗಂಗೆ ತೀರ್ಥ ನೋಡಾ. ಆತನು ದಯವಿಟ್ಟು ಪರುಷದೃಷ್ಟಿಯಿಂ ನೋಡಿದ್ದು, ತಟ್ಟು ಮುಟ್ಟು ಸೋಂಕುಗಳೆಲ್ಲ ನಿಜಮೋಕ್ಷಸ್ವರೂಪನೋಡಾ. ಸದ್ಭಕ್ತ ಶಿವ ಶರಣ ಸಂಗವು ಎನಗೂ ನಿನಗೂ ನಿಜಮೋಕ್ಷಮಂದಿರನೋಡಾ ಸಂಗನಬ ಸವೇಶ್ವರಾ.

ಸಮಾಧಿಯ ವಿಧಗಳು.

೧. ಅಯ್ಯಾ ಪರಮಾರಾಧ್ಯ ಸಚ್ಚಿದಾನಂದ ಮೂರ್ತಿ ಶ್ರೀಗುರುದೇವನೇ ಸಕಲ ಪ್ರಮಥಾರಾಧ್ಯ ಗಣಸಮೂಹವೆಲ್ಲ ಸರ್ವಾಚಾರ ಸಂಪತ್ತಿನ ಆಚರಣೆಯನಾಚರಿಸಿ ಮುಗಿದ ಮೇಲೆ ಸಮಾಧಿಸ್ಥರಾದ ನಿಲುಕಡೆಯ ಕರುಣಿಸಬೇಕಯ್ಯ ಸ್ವಾಮಿಕೇಳಯ್ಯ, ಅನಾದಿ ಶರಣನೇ ಎಂದು ಕಲ್ಯಾಣ ಪಟ್ಟಣದನುಭಾವ ಮಂಟಪದಲ್ಲಿ ಬಸವ ಮೊದಲಾದ ಸಕಲ ಪ್ರಮಥಗಣಂಗಳು ಪರಶಿವಮೂರ್ತಿ ಪ್ರಭುಸ್ವಾಮಿಗಳು ಬೆಸಗೊಳ್ಳಲು, ಆಗ ಮಹಾ ಪ್ರಭುಸ್ವಾಮಿಗಳು ನಿರ್ಲಜ್ಜ ಶಾಂತಲಿಂಗ ದೇಶಿಕೋತ್ತಮನ ಮುಖವಚನದಲ್ಲಿ, ಸಕಲ ಪ್ರಮಥರ್ಗೆ ನಿರೂಪಮಂ ಕೊಡುತಿರ್ದರು ನೋಡಾ. ಆ ನಿಲುಕಡೆಯ ವಿಚಾರವೆಂತೆಂದೊಡೆ, ಪ್ರಥಮದಲ್ಲಿ ಘಟ್ಟಿವಾಳ ನೂರೊಂದು ವಿರಕ್ತ ಅಜಗಣ್ಣತಂದೆಗಳು ಅಕ್ಕನಾಗಲಿ ಮಹಾದೇವಿ ನೀಲಲೋಚನೆ

ಮುಕ್ತಾಂಗನೆ ಮೊದಲಾದ ಶರಣರ್ಗೆ ನಿರವಯ ಸ್ಥಲಕ್ಕೆ ಕಾರಣವಾದ ಶೂನ್ಯಲಿಂಗಾನುಭಾವವ ಬೋಧಿಸಿ ೨೧೬ ಸಕೀಲು ಮೊದಲಾದ ಸಕೀಲವನರುಪಿ ಆ ಅಪಸ್ಮರ ಕುಂಡಲಿ ಶೂನ್ಯಲಿಂಗೋದ್ಧರಣೆ ಚಿದಂಬರ ಮೊದಲಾದ ಚತುರ್ವಿಧ ಉದ್ಧರಣೆಯ ಕರುಣಿಸಿ ನಿರ್ವಾಣ ಸಮಾಧಿಯ ಪಥವ ತೋರಿದರು ನೋಡಾ. ದ್ವಿತೀಯದಲ್ಲಿ ಬಸವ ಚನ್ನಬಸವ ಸಿದ್ಧರಾಮ ಮೊದಲಾದ ಶರಣರ್ಗೆ ನಿರಾಲಂಬಸ್ಥಲಕ್ಕೆ ಕಾರಣವಾದ ನಿಃಕಳಂಕ ಲಿಂಗಾನುಭಾವವ ಬೋಧಿಸಿ ೨೧೬ ಸಕೀಲು ಮೊದಲಾದ ಸಮಸ್ತ ಸಕೀಲವನರುಪಿ ಅಷ್ಟಾವರಣ ಜ್ಞಾನಚಕ್ರ ನೂರೆಂಟು ಪ್ರಣವ ಅನಾದಿಜಂಗಮ ಮೊದಲಾದ ಚತುರ್ವಿಧ ಉದ್ಧರಣೆಯ ಕರುಣಿಸಿ ಸಚ್ಚಿದಾನಂದ ಸಮಾಧಿಯ ಪಥವ ತೋರಿದರು ನೋಡಾ. ತೃತೀಯದಲ್ಲಿ ಮರುಳಶಂಕರ ನಿಜಗುಣ ಚನ್ನಮಲ್ಲದೇವರು ಮೊದಲಾದ ಶರಣರ್ಗೆ ನಿಜೈಕ್ಯಸ್ಥಲಕ್ಕೆ ಕಾರಣವಾದ ಮಹಾಲಿಂಗಾನುಭಾವವ ಬೋಧಿಸಿ ಸಮಸ್ತ ಮಿಶ್ರ ಸಕೀಲವನರುಪಿ ಅನಾದಿಭಕ್ತ ಗೋಮುಖ ಶಾಂಭವೀ ಮಹಾಲಿಂಗೋದ್ಧರಣೆ ಮೊದಲಾದ ಚತುರ್ವಿಧ ಉದ್ಧರಣೆಯ ಕರುಣಿಸಿ ನಿರವಯ ಸಮಾಧಿಯ ಪಥವ ತೋರಿದರು ನೋಡಾ. ಚತುರ್ಥದಲ್ಲಿ ಸಮಸ್ತ ಜಂಗಮಾಕೃತಿಯ ಧರಿಸಿದ ಶರಣರ್ಗೆ ನಿಜ ಶರಣಸ್ಥಲಕ್ಕೆ ಕಾರಣವಾದ ಪ್ರಸಾದಲಿಂಗಾನುಭಾವವ ಬೋಧಿಸಿ, ಸಗುಣ ನಿರ್ಗುಣ ಮೊದಲಾದ ಸಮಸ್ತ ಸಕೀಲವನರುಪಿ ಷಡ್ಬ್ರಹ್ಮ ವೃಷಭ ಮಗುಟ ಮೂರ್ತಿ ಉದ್ಧರಣೆ ಮೊದಲಾದ ಚತುರ್ವಿಧ ಉದ್ಧರಣೆಯ ಕರುಣಿಸಿ, ನಿಜಶಿವ ಸಮಾಧಿಯ ಪಥವತೋರಿದರು ನೋಡಾ. ಪಂಚಮದಲ್ಲಿ ರೇವಣಸಿದ್ಧ ಮರುಳಸಿದ್ಧ ಏಕೋರಾಮ. ಪಂಡಿತಾರಾಧ್ಯರು ಮೊದಲಾದ ಶರಣರ್ಗೆ ನಿಜಪ್ರಾಣಲಿಂಗಿಸ್ಥಲಕ್ಕೆ ಕಾರಣವಾದ ಜಂಗಮಲಿಂಗಾನುಭಾವವ ಬೋಧಿಸಿ, ನೂರೆಂಟು ಸಕೀಲ ಮೊದಲಾದ ಸಮಸ್ತ ಸಕೀಲವನರುಪಿ ತತ್ವ ಪಂಚೀಕರಣ ಲಿಂಗಪಂಚೀಕರಣ ಮಂತ್ರ ಪಂಚೀಕರಣ ಬಸವೋದ್ಧರಣೆ ಮೊದಲಾದ ಚತುರ್ವಿಧ ಉದ್ಧರಣೆಯ ಕರುಣಿಸಿ ಬಯಲ ಸಮಾಧಿಯ ಪಥವ ತೋರಿದರು ನೋಡಾ. ಷಷ್ಠಮದಲ್ಲಿ ನಮಃಶಿವಾಯದೇವರು ಷಡಕ್ಷರಾಂಕ ಗಣದಾಸಿವೀರಣ್ಣಗಳು ಹಳ್ಳಯ್ಯ ಮೊದಲಾದ ಶರಣರ್ಗೆ ನಿಜಪ್ರಸಾದಿಸ್ಥಲಕ್ಕೆ ಕಾರಣವಾದ ಶಿವಲಿಂಗಾನುಭಾವವ ಬೋಧಿಸಿ ೯೬ ಸಕೀಲು ಮೊದಲಾದ ಸಮಸ್ತ ಸಕೀಲವನರುಪಿ ನವಚಕ್ರ ಅಂಗ ಷಡಕ್ಷರಲಿಂಗ ಷಡಕ್ಷರ ಪಂಚಮೂರ್ತಿಮೊದ

ಲಾದ ಚತುರ್ವಿಧ ಉದ್ಧರಣೆಯು ಕರುಣಿಸಿ ಗೋಳಕ ಸಮಾಧಿಯು ಪಥವ ತೋರಿದರು ನೋಡಾ. ಸಪ್ತಮದಲ್ಲಿ ಪಂಚಾಕ್ಷರ ಕಲಿಗಣನಾಥೊಡೆಯರು, ಚಿಲುಮೆ ಅಗ್ಗಣಿಯ ಭಕ್ತರು ವೇಲುಸಾವಡದ ಭಕ್ತರು ಸರ್ವೋತವಾದ ಅಚ್ಚಪ್ರಸಾದಿ ನಿಚ್ಚಪ್ರಸಾದಿ ಸಮಯಪ್ರಸಾದಿ ಮೊದಲಾದ ಶರಣರ್ಗೆ ಸಿದ್ಧವೀರ ಮಾಹೇಶ್ವರಸ್ಥಲಕ್ಕೆ ಕಾರಣವಾದ ಗುರುಲಿಂಗಾನುಭಾವವ ಬೋಧಿಸಿ ೬೬ ಸಕೀಲು ಮೊದಲಾದ ೧೦೮ ಸಕೀಲು ಕಡೆಯಾಗಿ ಸಮಸ್ತ ಸಕೀಲವನರುಪಿ ಮೂಲ ಷಡಕ್ಷರ ಕಾಯಾರ್ಪಣ ೧೮ ತೆರದರ್ಪಣ ಮೊದಲಾದ ಚತುರ್ವಿಧ ಉದ್ಧರಣೆಯು ಕರುಣಿಸಿ ಗೋಮುಖ ಸಮಾಧಿಯು ಪಥವ ತೋರಿದರು ನೋಡಾ. ಅಷ್ಟಮದಲ್ಲಿ ವರ್ತಿಸುವ ಮುಸಣ್ಣಯ್ಯ ಚಿಕ್ಕಮಾದಯ್ಯಗಳು ಕದಿರ ರೇಮಯ್ಯನು ರಾಘವಾಂಕ ಮೊದಲಾದ ಶರಣರ್ಗೆ ಸದ್ಭಕ್ತಿಸ್ಥಲಕ್ಕೆ ಕಾರಣವಾದ ಆಚಾರಲಿಂಗಾನುಭಾವವ ಬೋಧಿಸಿ ಷಡ್ವಿಧ ಸಕೀಲು ಮೊದಲಾದ ಸಮಸ್ತ ಸಕೀಲವನರುಪಿ ೪೮ ತೆರದರ್ಪಣ ೬೬ ತೆರದರ್ಪಣ ೧೦೮ ತೆರದರ್ಪಣ ೨೧೬ ತೆರದರ್ಪಣ ಮೊದಲಾಗಿ ಚತುರ್ವಿಧ ಉದ್ಧರಣೆಯು ಕರುಣಿಸಿ ಸಹಜ ಕ್ರಿಯಾ ಸಮಾಧಿಯು ಪಥವ ತೋರಿದರು ನೋಡಾ. ಇಂತೀ ಅಷ್ಟವಿಧಸ್ಥಲ ಸಂಬಂಧದಿಂದ ಆಯಾಯಲಿಂಗಾನುಭಾವವ ಬೋಧಿಸಿ ಅಷ್ಟವಿಧ ಸಮಾಧಿಯು ಬೋಧಿಸಿದರು ನೋಡಾ. ಅದರ ವಿಚಾರವೆಂತೆಂದೊಡೆ, ೩೦೮ ಪಾದ ವೃತ್ತಿಕೆಯು ತೆಗೆದಂಥಾದ್ದೇ ಸಹಜ ಕ್ರಿಯಾಸಮಾಧಿ ಎನಿಸುವದು. ೨೯೬ ಪಾದ ವೃತ್ತಿಕೆಯು ತೆಗೆದಂಥಾದ್ದೇ ಗೋಮುಖ ಸಮಾಧಿ ಎನಿಸುವದು. ೨೯೦ ಪಾದ ವೃತ್ತಿಕೆಯು ತೆಗೆದಂಥಾದ್ದೇ ಗೋಳಕ ಸಮಾಧಿ ಎನಿಸುವದು. ಹರಗುರು ವಚನೋಕ್ತಿ ಪ್ರಮಾಣದಿಂದ ತಮ್ಮ ತಾವೆ ಅವಸಾನದ ವೇಳೆಯನರಿದು ನಿರಾಶಕತ್ವದಿಂದ ಸರ್ವಾಂಗ ಪರಿತ್ಯಾಗರಾಗಿ ದಿಗಂಬರ ಲೀಲೆಯು ಧರಿಸಿ ಪರಿಣಾಮುತರವಾದ ಏಕಾಂತವಾಸಕ್ಕೆ ಹೋಗಿ, ತಗ್ಗು ತೆವರು ಇಲ್ಲದಂಥ ಭೂಮಿಯಾದರೂ ಸರಿಯೇ ಸಮತಳವಾದ ಬಂಡಿಯಾದರೂ ಸರಿಯೇ ಕಲ್ಲುಹಿಟ್ಟಿನಿಂದಾದರೂ ಮಳಲಾದರೂ ಬಳಪದಿಂದಾದರೂ ಸರಿಯೆ. ಗೋಳಕ ಸಮಾಧಿಯು ಆಕಾರವ ರಚಿಸಿ ಆಯಾಯು ಸ್ಥಾನದಲ್ಲಿ ಪ್ರಣವವ ಸ್ಥಾಪಿಸಿ ಅನಾದಿ ಪರಶಿವಲಿಂಗವ ಉಭಯ ಕರಮಧ್ಯದಲ್ಲಿ ಬಾಸಣಿಸಿ ಅನಾದಿ ಮೂಲ ಪ್ರಣವ ಧ್ಯಾನದಿಂದ ಪ್ರಥಮ ಸೋಪಾನವಿಡಿದು ಹೋಗಿ ತ್ರಿಕೋಣಘು ಮಧ್ಯದಲ್ಲಿ ಪದ್ಮಾಸನವ ಬಲಿದು ಮೂರ್ತವಮಾಡಿ ಅಂತರಂಗದಲ್ಲಿ

ಬೆಳಗುವ ಜ್ಯೋತಿರ್ಲಿಂಗವ ಅನುಮಿಷಸ್ಥಾನಕ್ಕೆ ತಂದು ಮೂರ್ತವ ಮಾಡಿಸಿ, ಕ್ಷೀರ ಕ್ಷೀರವ ಬೆರೆದಂತೆ ಚಿದ್ಘನಸ್ವರೂಪವಾದ ಇಷ್ಟಲಿಂಗವು ನಿರಂಜನ ಜಂಗಮಸ್ವರೂಪವಾದ ಪ್ರಾಣಲಿಂಗದಲ್ಲಿ ಶಿಖಿಕರ್ಪುರದ ಹಾಗೆ ಬಯಲಪ್ಪುದು ಬಯಲ ಸಮಾಧಿ ಎನಿಸುವದು. ಇವು ನಾಲ್ಕು ಕ್ರಿಯಾಸ್ವ ರೂಪವಾದ ಸಮಾಧಿಗಳೆನಿಸುವವು ನೋಡಾ. ಅಷ್ಟತನುವಿನಲ್ಲಿ ೬೪ ತರದ ವರ್ಣವನರಿದು ಅಂಗವ ಮಾಡಿಕೊಂಡು ದ್ವಾದಶೇಂದ್ರಿಯಂಗಳಲ್ಲಿ ೧೪೪ ತರದ ಸರ್ವಾಚಾರ ಸಂಪತ್ತಿನ ಆಚಾರಂಗಳನರಿದು ಪ್ರಾಣವಮಾಡಿ ಕೊಂಡು, ೧೮ ಕರಣ ಚಕ್ರಂಗಳಲ್ಲಿ ೧೨೪ ಚಕ್ರಂಗಳ ಸ್ವಸ್ವರೂಪ ನಿಲುಕ ಡೆಯ ತಿಳಿದು ಸ್ವಾನುಭಾವದ ಸೂತ್ರದ ವಿಚಾರವರಿದು ಮೇಲಾದ ಜ್ಯೋತಿರ್ಮಂಡಲವ ಕಂಡು ಆ ಮಂಡಲದಲ್ಲಿ ಮೂರ್ತಗೊಂಡಿರುವ ನಿರಂಜನ ಜಂಗಮ ವಿರಾಟಮೂರ್ತಿಯ ಇರವ ತಿಳಿದು, ಆ ಮೂರ್ತಿಯೊ ಳಗೆ ಉರಿ ಉಂಡ ಕರ್ಪುರದಂತೆ ಅಂಗ ಪ್ರಾಣಭಾವ ಆತ್ಮಂಗಳೇನೂ ತೋರದೆ ಗುರುಲಿಂಗಜಂಗಮ ಭಕ್ತನೆಂಬ ಸವಪ್ರಣವಂಗಳೇ ಪಾದೋದಕ ಪ್ರಸಾದ ವಿಭೂತಿ ರುದ್ರಾಕ್ಷಿ ಮಂತ್ರಶರಣನೆಂಬ ೧೮ ಪ್ರಣವಂಗಳೊಳಗೆ ಕೂಡಿ, ವಾಚಾತೀತ ಮನೋತೀತ ಭಾವಾತೀತ ವರ್ಣಾತೀತವಾ ದಂಥಾದ್ದೇ ನಿರ್ವಾಣ ಮೊದಲಾದ ನಿರವಯವಂತ್ಯವಾದ ಚತುರ್ವಿಧ ಸಮಾಧಿ ಎನಿಸುವದು ನೋಡಾ ಗುಹೇಶ್ವರಲಿಂಗಕ್ಕೆ ಕಾಣಿರಣ್ಣಾ ಶಾಂತ ಗಣಂಗಳೇ ಎಂದು ಪ್ರಭುಸ್ವಾಮಿಗಳು ಕಲ್ಯಾಣ ಪಟ್ಟಣದಅನುಭಾವ ಮಂಟಪದೊಳಗೆ ನಿರ್ಲಜ್ಜ ಶಾಂತಲಿಂಗೇಶ್ವರನ ಮುಖವಚನದಲ್ಲಿ ಸಕಲ ಪ್ರಮಥರ್ಗೆ ಬೋಧಿಸುತಿರ್ದರು ನೋಡಾ. ಅದೇಪ್ರಸಾದವ ಬಳಿವಿಡಿದು ಗುಮ್ಮಳಾಪುರದಲ್ಲಿ ಪರಮಾರಾಧ್ಯರು ಆಚರಿಸಿ ಶೂನ್ಯವಾದರು ನೋಡಾ ಸಂಗನಬಸವೇಶ್ವರಾ.

೨. ಹರಹರಾ ಶಿವಶಿವಾ ಜಯಜಯಾ ಕರುಣಾಕರ ಮತ್ಪ್ರಾಣನಾಥ ಮಹಾಪ್ರಭು ಚಿದ್ಘನ ಶ್ರೀಗುರು ಲಿಂಗ ಜಂಗಮ ನಿಮ್ಮ ಶರಣ ಗಣಂಗ ಳೆಲ್ಲ ನಿರವಯ ಸಮಾಧಿಯಲ್ಲಿ ಹೋದ ಮಾರ್ಗವ ನಿಮ್ಮ ಕರುಣಾಕಟಾಕ್ಷೆ ಯಿಂದ ದಯವಿಟ್ಟು ರಕ್ಷಿಸಯ್ಯಾ ತಂದೆ ಕೇಳಯ್ಯ. ಮರಕುಮಾರ ದೇಶಿ ಕೇಂದ್ರನೇ ಶಿವಗಣಂಗಳೆಲ್ಲ ಪರಶಿವ ಲಿಂಗಕ್ಕೂ ತಮಗೂ ಭಿನ್ನವಿಲ್ಲದೆ ಅಭಿನ್ನ ಸ್ವರೂಪದಿಂದೆ ಎರಡಳಿದು ಏಕರಸವಾಗಿ ಪುಷ್ಪ ಪರಿಮಳದಂತೆ ೫೨ ಕೋಶ ಬಂಗಾರ ತೆರದೀ ಪಂಚಾಗ್ನಿಗಳ ಮೂಲ ಚಿತ್ ಸ್ವರೂಪವಾದ

ಚಿದಗ್ನಿಯಲ್ಲಿ ಸಮರಸವ ಮಾಡಿ ಸರ್ವಾಚಾರ ಸತ್ಕಾಯಕ ಸತ್ಕ್ರಿಯೆ ಸಮ್ಯಜ್ಞಾನ ಸದ್ಭಕ್ತಿಯೇ ದ್ವಿತೀಯ ಕೈಲಾಸವೆಂದು ಸತ್ಯ ನಡೆನುಡಿಯೆ ನಿಜ ಶಿವಮಂದಿರವೆಂದು ತನ್ನ ದೀಕ್ಷಾ ಕರ್ತೃವಾದ ಗುರು ಮೊದಲಾಗಿ ಸಮಸ್ತವೆಲ್ಲ ಶಿವಪದಕ್ಕೆ ಯೋಗ್ಯವಾಗಿ ಬಂದವರ ಒಡಗೂಡಿ ಯೋಗ್ಯವಾಗದವರ ತ್ಯಜಿಸಿ ಪರಿಪೂರ್ಣ ಪರಂಜ್ಯೋತಿ ಸ್ತಂಭಾಕಾರವೆಂಬ ನಿಷ್ಕಲ ಪರಶಿವ ಬಿಂದು ಸ್ವರೂಪವಾದ ಷೋಡಶ ವರ್ಣದ ಚಿಪ್ಪೆಳಗಿನೊಳಗೆ ಉರಿ ಕರ್ಪೂರವಂತೆ ಶಿವಸಮಾಧಿಯಲ್ಲಿ ಬೆರೆದು ಹೋದರು ನೋಡಾ. ಆಚಾರವೇ ಪ್ರಾಣವಾಗಿ ಸಕಲ ಪ್ರಮಥ ಗಣವೆಲ್ಲಾ ಚಿಪ್ಪಿನ ಮಹಾಲಿಂಗದಲ್ಲಿ ಕೂಟಸ್ಥರಾದರು ನೋಡಾ ಸಂಗನಬಸವೇಶ್ವರಾ.

ಅಂತ್ಯವಿಧಿ

೧. ಅಯ್ಯಾ ಇನ್ನು ವಿಭೂತಿ ವೀಳೆಯದ ಸಮಾಧಿ ವಿಸ್ತಾರದ ನಿರ್ಣಯವ ಪೇಳುತಿರ್ದಪೆವು ನೋಡಾ. ಆ ವಿಚಾರವೆಂತೆಂದೊಡೆ, ಹಿಂದೆ ಹೇಳಿದ ವಸ್ತು ನಿರವಯ ನಿಲುಕಡೆಯ ತನ್ನ ಸ್ವಾನುಭಾವದಿಂದರಿದ ಶರಣನು ತನ್ನವಸಾನಕಾಲದ ಎಚ್ಚರಿಕೆಯನರಿದು ತನ್ನಾಚಾರ ನಡೆನುಡಿಗೆ ಸನ್ಮತ ಹರ ಗುರು ವಚನಕ್ಕೆ ಒಪ್ಪಿಗೆಯಾಗಿ ಆ ಪ್ರಮಥಗಣಾರಾಧ್ಯ ಭಕ್ತ ಮಾಹೇಶ್ವರರೊಡಗೂಡಿ ಅಭಿವಂದಿಸಿ ಶರಣು ಹೊಕ್ಕು ಕರುಣ ಕೃಪೆಯ ಬೆಸಗೊಂಡು ಆ ಗಣಸಮೂಹ ಮೂರ್ತಿಗಳು ದಯಾಂತಃಕರುಣ ಹುಟ್ಟಿ, ಗೋವು ಮಲಗುವಷ್ಟು ಧರಣಿಯ ನವಪಾದ ಉದ್ದ ಪಂಚಪಾದ ಅಗಲ ಗೋಮಯ ಗೋಮೂತ್ರ ಗೋಕ್ಷೀರ ಗೋದಧಿ ಗೋಘೃತ ಗೋರೋಜನವೆಂಬ ಷಡ್ದ್ರವ್ಯವ ಸದ್ಗುರು ಲಿಂಗ ಜಂಗಮದ ವೃತ್ತಸ್ಥಾನ ತಾರಕಾಕೃತಿಯಿಂದ ಮಾಡಿದ ಧೂಳ ಪಾದೋದಕದೊಳಗೆ ಸಮ್ಮಿಶ್ರವ ಮಾಡಿ ಸಮ್ಮಾರ್ಜನೆ ಗೈದು ಧವಳವರ್ಣ ಮೊದಲಾದ ಪಂಚವರ್ಣದ ಪಾಷಾಣದೊಳಗೆ ರಜತ ಹೇಮ ಮೌಕ್ತಿಕ ಹವಳ ಪಂಚಲೋಹಂಗಳ ಕೂಡಿಸಿ ಹಿಟ್ಟು ಮಾಡಿ ನೂರೆಂಟು ಮನೆಯುಕ್ತವಾದ ರಂಗವಲ್ಲಿಯ ರಚಿಸಿ, ಅದರೊಳಗೆ ನೂರೆಂಟು ದಳಾಕ್ಷರಂಗಳನೆ ತುಂಬಿ, ಗುರು ಪಾದೋದಕ ಮಿಶ್ರವಾದ ಭಸ್ಮಮಂ ತಳೆದು ಪುಷ್ಪ ಪತ್ರಿಗಳನ್ನು ರಚಿಸಿ ರೋಮಶಾ

ಯಾಗಲಿ, ನಾರಮುಡಿಯಾಗಲಿ, ಪಟ್ಟೆ ಪಟ್ಟಾವಳಿಯಾಗಲಿ ಆಸನವ ರಚಿಸಿ ಆ ಲಿಂಗೈಕ್ಯಂಗೆ ಘನಮಾರ್ಗದ ಎಚ್ಚರವು ಹುಟ್ಟಿಸುವದೇ ಆಪ್ತ ಲಕ್ಷಣ ನೋಡಾ. ಆ ಶರಣನು ಗಣವಾಕ್ಯವ ಲಾಲಿಸಿ ಎಚ್ಚರದಳಿದು ಪಾದೋದಕ ಪ್ರಸಾದವ ಮುಗಿದು ನಿಜಸ್ವೈಷ್ಟೆಯಿಂದ ಮಂತ್ರ ಮೂರ್ತಿ ಶಿವ ಗಣಂಗಳಿಗೆ ಸಾಷ್ಟಾಂಗ ಪ್ರಣಿತನಾಗಿ ಆ ಸಿಂಹಾಸನದ ಮೇಲೆ ಭಾವ ಲಿಂಗ ಲೀಲೆಯಂತಾಳಿ ಸುಯಿಧಾನದಿಂದೆ ತ್ರ್ಯಕ್ಷರ, ಪಂಚಾಕ್ಷರ, ಷಡಕ್ಷರ ಇಃ ಪ್ರಣಮಸ್ಮರಣೆಯಿಂದ ತನ್ನ ಕರಸ್ಥಲದಲ್ಲಿ ಚಿಪ್ಸನ ಇಷ್ಟ ಮಹಾ ಲಿಂಗವ ಮೂರ್ತವ ಮಾಡಿಸಿಕೊಂಡು, ಇರುವಂತಿಗೆ, ಸೇವಂತಿಗೆ, ಮಲ್ಲಿಗೆ, ಜಾಜಿ, ಕರವೀರ, ಸುರಹೊನ್ನೆ, ಸಂಪಿಗೆ, ಪುಷ್ಪ, ಮರುಗ ಪಚ್ಚೆದವನ ಬಿಲ್ವ ಪತ್ರ ಮೊದಲಾದ ಸಮಸ್ತ ಪತ್ರಿ ಪುಷ್ಪಂಗಳಂಧರಿಸುತ್ತ ಅಷ್ಟ ವಿಧಾರ್ಚನೆ ಷೋಡಶೋಪಚಾರದಿಂದ ಸಾಕಾರ ನಿರಾಕಾರದರ್ಚನೆಗಳ ಮಾಡುತ್ತ ಆ ಚಿಪ್ಸನ ಇಷ್ಟ ಮಹಾ ಲಿಂಗವನ್ನು ಮನ ಒಲಿದು ಕಂಗಳ ತುಂಬಿ ನೋಡುತ್ತೆ, ಭಕ್ತ, ಮಾಹೇಶ್ವರ, ಶರಣ ಗಣಾರಾಧ್ಯರು ಬಂದರೆ ಶರಣಾರ್ಥಿ ಸ್ವಾಮಿ ಎಂದು ಮಜ್ಜನವ ಮಾಡಿ ಸ್ನಾನ, ಧೂಳನ, ಧಾರ ಣಂಗಳಿಂದ ಅಷ್ಟ ವಿಧಾರ್ಚನೆ ಷೋಡಶೋಪಚಾರವ ಕೈಕೊಳ್ಳಿ ಎಂದು, ಅಭಿವಂದಿಸಿದಲ್ಲಿ ಆಗಣಾರಾಧ್ಯರು ಅರ್ಪಿತಾವಧಾನಂಗಳ ಮಾಡುತ್ತ ಸದ್ಗಂ ಧಗಳಂ ಧರಿಸಿ ಪುಷ್ಪದ ಹಾರ ಹೀರಾವಳಿಗಳಂ ಧರಿಸುತ್ತ, ಪಟ್ಟೆ ಪಟ್ಟಾ ವಳಿಗಳಂ ಧರಿಸುತ್ತ ಮಹಾ ಚಿಪ್ಸನ ಶಿವಶರಣ ಗಣಾರಾಧ್ಯ ಭಕ್ತ ಮಾಹೇ ಶ್ವರರು ಗುರುವಾಕ್ಯ ಪ್ರಮಾಣವಾಗಿ ನಡೆದು ನುಡಿದು, ಆಚರಿಸಿ ಬಯು ಲಾದ ಮಹಿಮರ ಕಥಾ ಪ್ರಸಂಗಮಂ ಓದಿ ಅನುಭಾವವ ಮಾಡುತ್ತ ಶೋಧನಂಗಳ ಮಾಡದೆ, ಮಂಗಳ ಮಹೋತ್ಸವ ತೋರಣ ಪಾದಪೂಜೆ ಗಳಿಂದ ಶೋಭಿಸುತ್ತಿರಲು, ಆ ಮೇಲೆ ಆಪ್ತರಾದ ಭಕ್ತ ಗಣಂಗಳು ಕೂಡಿ ಒಂದೇ ಒಡಲಾಗಿ ಭಕ್ತನಾದೊಡೆ ಜಂಗಮ ಪಾದ ದಳತೆಯಿಂದ ಸಮಾ ಧಿಯು ಮಾಡುವದು. ಸ್ವಯ, ಚರ, ಪರ ಜಂಗಮ ಮೂರ್ತಿಗಳಾದರೆ ಆಸಮಯುವರಿತು ಸಾಕಾರ ಲೀಲೆಯುಳ್ಳಲ್ಲಿ ಆ ನಿಜೈಕ್ಯರ ಪಾದದಳತೆ ಯಿಂದಲೇ ಸಮಾಧಿಯ ಮಾಡುವದು. ಆ ಸಮಾಧಿಯ ಮಾಡುವ ವಿಚಾ ರವೆಂತೆಂದೊಡೆ, ಊರ ಮಧ್ಯದಲ್ಲಿ ಲಿಂಗ ಮುದ್ರಾಂಕಿತವಾದ ಮಠ ಮನೆ ಗಳಾದರೂ ಸರಿಯೆ, ಭಕ್ತಿ ಮುಖದಿಂದ ಬಂದರೂ ಸರಿಯೇ, ಆ ಸ್ಥಲಕ್ಕೆ ಲಿಂಗ ಮುದ್ರಾಂಕಿತವ ಮಾಡಿ, ಸಮಾಧಿಯ ರಚಿಸುವದೆ, ಆಚರಣೆ

ನೋಡಾ! ಶಿವಾಧೀನವಾದ ಅರಣ್ಯ ಸ್ವರೂಪ ನಿರುಪಾಧಿಕ ಸ್ಥಲವಾದೊಡೆ ಭಕ್ತ ಮಾಹೇಶ್ವರರು ಕೂಡಿ ಒಂದಾಗಿ ಆ ಸ್ಥಲವ ವಿಚಾರಿಸಿ ಶರಣು ಹೊಕ್ಕು ಸಮಾಧಿ ಗೃಹವ ರಚಿಸುವದಕ್ಕೆ ನಿರೂಪವ ಬೆಸಗೊಂಡು, ಗುಪ್ತ ಲಿಯು ಹಾಕುವದು. ಆ ಮೇಲೆ ಸಮಾಧಿಯು ರಚಿಸಿ ಸಾರಣೆಯು ಮಾಡಿ, ಧೂಳಪಾದೋದಕ ಮೊದಲಾದ ಮಾರ್ಗಕ್ರಿಯಾ ಸಮ್ಮಾರ್ಜನಗಳ ಮಾಡಿ, ಪಂಚವರ್ಣದ ಹಿಟ್ಟಿನಿಂದ ರಂಗವಲ್ಲಿಯುಂ ಸಿಂಗರಿಸಿ ಆಯಾಯಿ ಸ್ಥಾನದಲ್ಲಿ ಲಿಂಗ ಮುದ್ರಾಂಕಿತವ ಮಾಡುವದೆ ಸಂಬಂಧ ನೋಡಾ. ಇಂತೀ ಸಮಾಧಿಯು ಮಾಡುವಷ್ಟರೊಳಗೆ ಆ ಭಕ್ತ ಮಾಹೇಶ್ವರರೊಪ್ಪಿ ಗೆಯಿಂದ ವಿಭೂತಿ ವಿಳೆಯುವಾದ ಶಿವಶರಣನು ನವವಿಧ ಲಿಂಗ ಗಳ ತನ್ನೊಳಗೆ ಮಾಡಿಕೊಂಡು, ನಿರಂಜನ ಜಂಗಮುವ ಬೆರಿಸುವ ವಿಚಾರವೆಂತೆಂದೊಡೆ, ಪ್ರಥಮುದಲ್ಲಿ ವರಚೌಕ ಮಧ್ಯದ ಮಹಾನಾದ ವಿಭ್ರಮಣೆಯಾದುದೇ ನಿರಂಜನ ಲಿಂಗ ಬಯುಲು ನೋಡಾ. ದ್ವಿತೀ ಯುದಲ್ಲಿ ಮಂತ್ರಧ್ಯಾನದ ಉಲುಹಡಗುವದೇ ಶೂನ್ಯ ಲಿಂಗ ಬಯುಲು ನೋಡಾ. ತೃತೀಯುದಲ್ಲಿ ಬ್ರಹ್ಮರಂಧ್ರದಲ್ಲಿ ಬಾರಿಸುವ ತಾಳು ನಿಲ್ಲುವದ ನಿಷ್ಕಳಂಕ ಲಿಂಗ ಬಯುಲು ನೋಡಾ! ಚತುರ್ಥದಲ್ಲಿ ನೇತ್ರದ ಪ್ರತಿಬಿಂಬ ವಡಗುವದೆ, ಮುಹಾಲಿಂಗದ ಬಯುಲು ನೋಡಾ. ಪಂಚಮುದಲಿ ಪಾದೋ ದಕ ಪ್ರಸಾದದಲ್ಲಿ ಸಂತೃಪ್ತಿಯಾದುದೇ ಪ್ರಸಾದಲಿಂಗ ಬಯುಲು ನೋಡಾ. ಷಷ್ಠಮುದಲ್ಲಿ ಹೃದಯು ಕಮುಲದಲ್ಲಿ ಚರಿಸುವ ಮೂಲ ಮಾರುತನ ಉಲುಹು ಅಡಗುವದೆ, ಜಂಗಮು ಲಿಂಗದ ಬಯುಲು ನೋಡಾ. ಸಪ್ತ ಮುದಲ್ಲಿ ಪಂಚಾಗ್ನಿಗಳ ಉಲುಹಡಗಿ ತಣ್ಣಗಾಗುವದೇ, ಶಿವಲಿಂಗದ ಬಯುಲು- ಅಷ್ಟಮುದಲ್ಲಿ ದಶನಾಡಿಗಳು ಒಬ್ಬುಳಿಯಾಗಿ, ಸುಮ್ಮನಾಗು ವದೇ ಗುರುಲಿಂಗದ ಬಯುಲು ನೋಡಾ. ಇಂತು ಶರಣನು ಸಾಕಾರ ವಾದ ಅಷ್ಟ ವಿಧಲಿಂಗಗಳನು ತನ್ನೊಳಗು ಮಾಡಿಕೊಂಡು ತಾನು ಇಷ್ಟ ಮುಹಾಂಲಿಗದ ಹೃತ್ಕಮುಲದಲ್ಲಿ ಗೋಪ್ಯದಿಂದ ಮೂರ್ತಗೊಂಡಿರಲು, ಆ ಸಮುಯುದಲ್ಲಿ ಸಾಕಾರವಾದ ಭಕ್ತ ಮುಹೇಶ್ವರ ಶರಣಗಣಂಗಳೆಲ್ಲ ಈ ಶರಣನು ಲಿಂಗದಪ್ಪಿ ಬಯುಲಾದನು ಎಂದು, ಆ ಲಿಂಗ ಶರಣನ ಬಳಸಿನಸ್ಲ ಆಚ್ಛಾಧಿಸಿಕೊಂಡಿರುವ ಶುದ್ಧ, ಸಿದ್ಧ, ಪ್ರಸಿದ್ಧ, ಕಂಥೆಯುನು ಗುರುಲಿಂಗ ಜಂಗಮು ಪಾದೋದಕ ಮೊದಲಾಗಿ ಪಂಚಾಭಿಷೇಕಂಗ ಳಿಂದ ಸ್ನಾನವ ಮಾಡಿಸಿ ಕ್ರಿಯಾಭಸಿತವ ಸ್ನಾನ, ಧೂಳನ, ಧಾರಣವ

ಮಾಡಿಸಿ, ಮಂಟಪವ ರಚಿಸಿ, ಒಂದಾಸನದಲ್ಲಿ ಆಶ್ರಯದಿಂದ ಮೂರ್ತ ಮಾಡಿಸಿ ಶಿವಲಾಂಛನ ಧವಳ ಪಟ್ಟೆ ಪಟ್ಟಾವಳಿ ರುದ್ರಾಕ್ಷ ಮೌಕ್ತಿಕ ಪುಷ್ಪದ ಹಾರ ಹೀರಾವಳಿ ಪರಿಮಳಂಗಳಿಂದ ಅಲಂಕರಿಸಿ ತಳಿರು ತೋರಣಗಳ ರಚಿಸಿ, ಧೂಪದೀಪಾರತಿ ನಾದ ಪೂಜಾ ಸ್ತೋತ್ರಂಗಳಿಂದ ಜಂಗಮ ಮೂರ್ತಿಗೆ ಮುಂದುಗೊಂಡು ಪುಷ್ಪಾಂಜಲಿಗಳಂ ಮಾಡಿ ಶರಣಗಣ ಭಕ್ತ ಮಾಹೇಶ್ವರ ವೈಭವದಿಂದ ಆ ಸಮಾಧಿಯ ಸಮೀಪಕ್ಕೆ ತಂದು ಲಿಂಗೈಕ್ಯವಾದ ಶರಣನ ನಡೆನುಡಿಯಾಚರಣೆಯ ವೃತ್ತಾಂತಮಂ ಉಘ್ಫೈಡಿಸಿ, ಪದವು ಮುಂದುಗೊಂಡು ಪುಷ್ಪಾಂಜಲಿಯಂ ಮಾಡಿ, ಅತಿ ಸಂತೋಷದಿಂದ ಸಮಾಧಿಗೆ ಪಾದೋದಕವ ಹಾಕಿ ಭಸ್ಮವ ತಳಿದು, ಪುಷ್ಪ ಪತ್ರೆಗಳ ರಚಿಸಿ ಲಿಂಗೈಕ್ಯವಾದ ಶರಣನ ಸಮಾಧಿಯ ಮಧ್ಯಮಂಟಪದಲ್ಲಿ ಮೂರ್ತವ ಮಾಡಿಸಿ, ಚೀಲವ ತೊಡಿಸಿ ಸರ್ವಾಂಗಕ್ಕೆ ಪ್ರಣವ ಸಂಬಂಧವಾದ ತಗಡ ಸಂಬಂಧಿಸಿ, ಪೂರ್ವದಂತೆ ಪುಷ್ಪಾಂಜಲಿಯಂ ಮಾಡಿ, ಸುಯಿಧಾನದಿಂದ ಗರ್ಭ ಗೃಹ ತ್ರಿಕೋಣೆಯಲ್ಲಿ ಪದ್ಮಾಸನದಿಂದ ಮೂರ್ತವ ಮಾಡಿಸಿ, ಕರಸ್ಥಾನ ಪರಿಯಂತರ ವಿಭೂತಿ ಪತ್ರೆ ಪುಷ್ಪಂಗಳ ಪವಿತ್ರತೆಯಿಂ ತುಂಬಿ, ಮುಖಕಮಲವ ತೆರೆದು, ಜಂಗಮ ಮೂರ್ತಿಗಳ ಪಾದವಿಡಿದು, ಅಷ್ಟವಿಧಾರ್ಚನೆ ಷೋಡಶೋಪಚಾರದಿಂದರ್ಚಿಸಿ ಮಹಾಹರುಷದಿಂದ ನಿರವಯ ಶಾಂಭವಪುರಕ್ಕೆ ದಯಮಾಡಯ್ಯಾ ಎಂದು ಪುಷ್ಪಾಂಜಲಿಯಂ ಮಾಡಿ, ಮುಖಕಮಲವ ಬಾಸಣಿಸಿ, ಕವಾಟ ಬಂಧನವ ಮಾಡಿ, ಮುಂದಣ ಸಮಾಧಿಗೆ ವೃತ್ತಿಕೆಯ ಶೋಧಿಸಿ ತುಂಬುವದು. ಆ ಮೇಲೆ ಜಂಗಮದ ಪಾದವಿಡಿದು ಪೂಜಿಸಿ, ಉಘೇ ಉಘೇ ಎಂದು ಉಘ್ಘಡಿಸಿ ಸಮಾಪ್ತಿಯ ಮಾಡಿ, ಹಸ್ತ ಪಾವುಡಗಳ ಗಣಸಮೂಹಕ್ಕೆ ಸಮರ್ಪಿಸಿ, ಆ ಸ್ಥಲವ ಸಾಕಾರಕ್ಕೆ ತಂದು ಗದ್ದುಗೆಯ ಮಾಡಿ, ಭಸ್ಮ ಘುಟಿಕೆ ಹಾವುಗೆ ದಂಡಾಗ್ರವನಿಟ್ಟು ಪೂಜಿಸಲಾಗದು, ಅಥವಾ ಗುರು ವಾಕ್ಯ ಮೀರಿ ಪೂಜಿಸಿದವರಲ್ಲಿ ಗುರುತ್ವವಿಲ್ಲ, ಅವರ ಜಂಗಮವೆಂದು ತೀರ್ಥ ಪ್ರಸಾದವಕೊಳಲಾಗದು ಕಾಣಾ. ಗುಹೇಶ್ವರ ಲಿಂಗಕ್ಕೆ ಸಲ್ಲದ ಗೊತ್ತು ನೋಡಾ! ಶಾಂತಲಿಂಗ ಗಣಂಗಳೇ ಎಂದು ಪ್ರಭುಸ್ವಾಮಿಗಳು ನಿರ್ಲಜ್ಜ ಶಾಂತಲಿಂಗ ದೇಶಿಕೋತ್ತಮನ ಮುಖ ವಚನದಿಂದ ಸಕಲ ಪ್ರಮಥರ್ಗೆ ನಿರೂಪಮಂ ಕೊಡುತಿರ್ದರು ನೋಡಾ ಸಂಗನಬಸವೇಶ್ವರಾ.
